# ಅಧ್ಯಯನ – 11 Study XI

# ಪಾಪ ವಿಮೋಚನೆಯ ಪವಿತ್ರಾತ್ಮ

## THE HOLY SPIRIT OF AT-ONE-MENT

## ಕಲ್ಪಿಸಿಕೊಂಡ ಆಕ್ಷೇಪಣೆಗಳನ್ನು ಪರಿಗಣಿಸಲಾಗುತ್ತದೆ

### SUPPOSED OBJECTIONS CONSIDERED

**ಸಹಜವಾಗಿ ವಿರೋಧಾತ್ಮಕವಾದ ದೇವರ ವಾಕ್ಯಗಳನ್ನು ಪರೀಕ್ಷಿಸುವುದು – ಆತ್ಮನನ್ನು ನಂದಿಸ ಬೇಡಿರಿ – ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ – ಸತ್ಯದ ಆತ್ಮನು – ಸಮಾಧಾನದಾಯಕನು – ಪವಿತ್ರಾತ್ಮನಿಂದ ತುಂಬಿರುವುದು – ಪವಿತ್ರಾತ್ಮನಿಗೆ ಸುಳ್ಳುಹೇಳುವುದು – ಕರ್ತನ ಆತ್ಮನನ್ನು ಪ್ರೇರೇಪಿಸುವುದು – ಪವಿತ್ರಾತ್ಮನ ವಿರುದ್ಧವಾಗಿ ಪಾಪಮಾಡುವುದು – " ಆತ್ಮನು ಹೇಳಿದ್ದು" – ಅದು ಪವಿತ್ರಾತ್ಮನಿಗೆ ವಿಹಿತವಾಗಿ ಕಂಡುಬಂತು – "ಪವಿತ್ರಾತ್ಮನು ತಡೆದನು" – "ಪವಿತ್ರಾತ್ಮವು ಸಾಕ್ಷಿಹೇಳುತ್ತದೆ" – "ಪವಿತ್ರಾತ್ಮನು ನಿಮ್ಮನ್ನು ಹಿಂಡಿನ ಅಧ್ಯಕ್ಷನನ್ನಾಗಿ ಇಟ್ಟಿದೆ – "ಕರ್ತನ ಆತ್ಮನನ್ನು ಪ್ರೇರೇಪಿಸುವುದು – ಪವಿತ್ರಾತ್ಮನು ಓರ್ವ ಬೋಧಕ – ಪವಿತ್ರಾತ್ಮನಿಂದ ಅಭಿಷೇಕ ಹೊಂದಿದವರಾಗಿ – ಪವಿತ್ರಾತ್ಮನು ನರಳಾಡುತ್ತಾ ಮಧ್ಯಸ್ಥಿಕೆ ವಹಿಸುವುದು – ಆತ್ಮನು ಯಾವ ರೀತಿಯಲ್ಲಿ ಈ ಲೋಕವನ್ನು ಆಕ್ಷೇಪಿಸುತ್ತದೆ – ನೀವೀಗ ಕ್ರಿಸ್ತ ವಿರೋಧಿಯ ಆತ್ಮನಿಂದ ದೇವರಾತ್ಮನನ್ನು ತಿಳಿದುಕೊಳ್ಳಿರಿ .**

ಸತ್ಯವೇದವು (ಕಾಮನ್ ವರ್ಶನ್ ಮತ್ತು ರಿವೈಸ್ಡ್ ವರ್ಶನ್ ಇವೆರಡೂ) ತ್ರೈಯೇಕತ್ವವಾದಿಗಳಿಂದ ಭಾಷಾಂತರಗೊಂಡುದರ ಪರಿಣಾಮವಾಗಿ ಅನೇಕ ಪರಿಚ್ಛೇದಗಳು ಪಕ್ಷಪಾತದಿಂದೊಡಗೂಡಿದ್ದು ತಿರುವು ಪಡಕೊಂಡಿವೆ. ಇವು ಸಹಜವಾಗಿ ನಾವೀಗ ಚರ್ಚಿಸುತ್ತಿರುವ ಪ್ರಸ್ತಾಪದ ಬಗ್ಗೆ ಪರಿಶುದ್ಧಗ್ರಂಥದ ದೃಷ್ಟಿಕೋನದಲ್ಲಿಯೂ ಮತ್ತು ಸಮಂಜಸವಾದ ದೃಷ್ಟಿಕೋನದಲ್ಲಿಯೂ ನಾವು ಕಂಡಿರುವಂತೆ ಕೆಲವೊಂದು ಭಿನ್ನಾಭಿಪ್ರಾಯಗಳನ್ನು ಉಂಟುಮಾಡುವವುಗಳಾಗಿವೆ – ತಂದೆಯ ಮತ್ತು ಮಗನ ಪವಿತ್ರಾತ್ಮವು ದೇವಜನರಿಗೆ ಪಾಪಕ್ಕೆ ಪ್ರಾಯಶ್ಚಿತ್ತ ಆತ್ಮವನ್ನೀಯುತ್ತವೆ ಎಂಬುದು. ಆದುದರಿಂದ, ನಾವೀಗ ವಿವಿಧ ಪರಿಶುದ್ಧ ಗ್ರಂಥಗಳನ್ನು ತೆಗೆದುಕೊಳ್ಳುತ್ತೇವೆ – ನಾವೂ ಆಲೋಚಿಸುವವುಗಳೆಲ್ಲವೂ ಅನೇಕರಲ್ಲಿ ಗಲಿಬಿಲಿಯನ್ನುಂಟು ಮಾಡುವವುಗಳಾಗಿವೆ. ನಮ್ಮ ಹೃದಯಗಳು ಕರ್ತನ ವಾಕ್ಯಗಳಿಗೆ ಸಂಪೂರ್ಣವಾಗಿ ನಿಷ್ಠೆಯಿಂದಿರುವಾಗ ಮತ್ತು ಸತ್ಯದ ಆತ್ಮನಿಂದ ನಡೆಸಲು ಆಕಾಂಕ್ಷೆ ಹೊಂದಿರುವಾಗ ನಾವು ಇವುಗಳನ್ನು ಒಟ್ಟಾರೆಯಾಗಿ ಪರೀಕ್ಷಿಸೋಣ; ನಂತರದಲ್ಲಿ ನಾವು ಈ ಪ್ರಸ್ತಾಪದ ಇನ್ನಿತರ ಮಜಲುಗಳಿಗೆ ಹೋಗುವವ ರಾಗಿದ್ದೇವೆ. ಯಾಕೆಂದರೆ ಅವುಗಳನ್ನು ನಾವೀಗ ಭಾವಿಸಿದ ವಿರುದ್ಧ ಹೇಳಿಕೆಗಳನ್ನು ತೊಡೆದು ಹಾಕುವವರೆಗೆ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.

### "ಪವಿತ್ರಾತ್ಮನನ್ನು ನಂದಿಸಬೇಡಿರಿ" – 1 ಥೆಸ. 5:19

### Quench Not the Spirit - 1 Thes. 5:19

'ನಂದಿಸು' ಎಂಬ ಪದವು ಆರಿಸುವುದನ್ನು ಸೂಚಿಸುತ್ತದೆ. ನಾವು ಬೆಂಕಿಯನ್ನು ಅಥವಾ ದೀಪವನ್ನು ಆರಿಸುವಂತೆ. ಗ್ರೀಕ್ ಪದವನ್ನು ಇಲ್ಲಿ 'quench' ಎಂಬುದಾಗಿ ತರ್ಜುಮೆಗೊಳಿಸಲಾಗಿದೆ. ಇದು ಹೊಸಒಡಂಬಡಿಕೆಯಲ್ಲಿ ಎಂಟು ಸಾರಿ ಕಾಣಿಸಿಕೊಳ್ಳುತ್ತದೆ. ಪ್ರತಿಯೊಂದು ಇತರ ಸಂಧರ್ಭಗಳಲ್ಲಿ ಇದು ಬೆಂಕಿ ಅಥವಾ ದೀಪವನ್ನು ಆರಿಸುವುದರ ಬಗ್ಗೆ ಸೂಚಿಸುತ್ತದೆ. ಈ ಆಲೋಚನೆಯನ್ನು ನಮ್ಮಲ್ಲಿ ಇಟ್ಟುಕೊಂಡವರಾಗಿ ನಾವು ಪವಿತ್ರಾತ್ಮ ಅಥವಾ ದೇವರ ಮನಸ್ಸನ್ನು ಹೊಂದಿರುವ ಕಾರಣ ಅವು ನಮ್ಮನ್ನು ಬೆಳಗಿಸುವುದಾಗಿದ್ದು ನಮ್ಮನ್ನು 'ಈ ಲೋಕದ ಬೆಳಕು' ಎಂಬುದಾಗಿ ಕರೆಯುತ್ತಾರೆಂಬುದನ್ನು ನೆನಪಿಸಿಕೊಳ್ಳೋಣ – "ನೀವು ಲೋಕಕ್ಕೆ ಬೆಳಕಾಗಿದ್ದೀರಿ" (ಮತ್ತಾಯ 5:14); ಈ ರೀತಿಯಲ್ಲಿ ನಾವು ಈ ಲೋಕದ ಆತ್ಮನ ಮೂಲಕ ಐಹಿಕತೆಯಿಂದ ಭ್ರಷ್ಟಗೊಳ್ಳುವುದಾದರೆ, ಅದರ ಪರಿಣಾಮವಾಗಿ ನಮ್ಮಲ್ಲಿರುವ ಪವಿತ್ರವಾದ ಮನಸ್ಸನ್ನು ಅಥವಾ ದೇವರಾತ್ಮದ ಬೆಳಕನ್ನು ಅಥವಾ ಇತರರ ಮೇಲೆ ಬೆಳಗದಂತೆ ನಂದಿಸಿದಂತಾಗುತ್ತದೆ ಎಂದು ಅಪೋಸ್ತಲ ಪೌಲನು ಇಲ್ಲಿ ಅರ್ಥೈಸುತ್ತಾನೆ. "ನಿನ್ನೊಳಗಿರುವ ಬೆಳಕೇ ಕತ್ತಲಾದರೆ ಆ ಕತ್ತಲು ಎಷ್ಟೆನ್ನಬೇಕು?" (ಮತ್ತಾಯ 6:23) ಎಂಬ ನಮ್ಮ ಕರ್ತನ ಮಾತುಗಳೊಂದಿಗೆ ಇದು ಸಾಮರಸ್ಯದಿಂದಿದೆ.

### "ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ. ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆಹೊಂದಿದ್ದೀರಲ್ಲಾ" – ಎಫೆಸ 4:30

### "Grieve not the Holy Spirit of God, whereby ye are Sealed unto the Day of Redemption" - Eph. 4.30

'ಮುದ್ರಿಸುವುದು' ಅಂದರೆ ಗುರುತು ಮಾಡುವುದು ಅಥವಾ ವಿಶ್ಲೇಷಿಸುವುದನ್ನು ಸೂಚಿಸುತ್ತದೆ. ಈ ಲೋಕದ ಮಕ್ಕಳನ್ನು ಕೆಲವೊಂದು ಲಕ್ಷಣಗಳಿಂದ ಮತ್ತು ದೇವರ

ಮಕ್ಕಳಾದ ನೂತನ ಸೃಷ್ಟಿಗಳನ್ನು ಮತ್ತೊಂದು ಗುರುತಿನಿಂದ, ಗುಣಲಕ್ಷಣಗಳಿಂದ ಪ್ರತ್ಯೇಕಿಸಬಹುದಾಗಿದೆ. ಒಂದು ವರ್ಗದ ಗುರುತು ಈ ಲೋಕದ 'ಸ್ಫೂರ್ತಿ'ಯೇ ಆಗಿದ್ದು (ಮನಸ್ಸು, ಪ್ರವೃತ್ತಿ, ಚಿತ್ತ); ಮತ್ತೊಂದು ವರ್ಗದಲ್ಲಿ ಮುದ್ರೆ ಅಥವಾ ಪವಿತ್ರಾತ್ಮನ ಗುರುತು (ಮನಸ್ಸು, ಪ್ರವೃತ್ತಿ, ಚಿತ್ತ) ದೇವರಿಂದುಂಟಾದುದು. ದೇವರಿಗೆ ನಿಜವಾದ ಪ್ರತಿಷ್ಠೆ ಮಾಡಿಕೊಂಡ ಕ್ಷಣದಿಂದ ಕುರುಹು, ಗುರುತು ಮತ್ತು ಮುದ್ರೆಗಳು ಅವರ ಮಾತುಗಳು, ಆಲೋಚನೆಗಳು ಮತ್ತು ನಡತೆಗಳಲ್ಲಿ ಗಮನಿಸಬಹುದು. ನೂತನ ಮನಸ್ಸು ಕೃಪೆಯಲ್ಲಿ, ಜ್ಞಾನದಲ್ಲಿ ಮತ್ತು ಪ್ರೀತಿಯಲ್ಲಿ ಬೆಳೆಯುತ್ತಿರುವಂತೆ ಈ ಗುರುತುಗಳು ಸಹಾ ಹೆಚ್ಚು ಹೆಚ್ಚು ನಿರ್ಧಿಷ್ಟವಾಗಿ ಬೆಳೆಯುತ್ತವೆ. ಬೇರೆ ರೀತಿಯ ಮಾತುಗಳಲ್ಲಿ ಹೇಳುವುದಾದರೆ ನಾವು ನಮ್ಮ ಮಾನವ ಚಿತ್ತ ಮತ್ತು ಆತ್ಮನನ್ನು ತೊರೆಯುವ ಮತ್ತು ನಮ್ಮ ಎಲ್ಲವುಗಳನ್ನು ದೇವರ ಚಿತ್ತಕ್ಕೆ ಒಪ್ಪಿಸಿಕೊಡುವ ಅನುಪಾತಕ್ಕೆ ಅನುಗುಣವಾಗಿ ದೇವರ ಆತ್ಮನು (ಮನಸ್ಸು) ನಮ್ಮ ಮನಸ್ಸು ಅಥವಾ ಆತ್ಮವಾಗಿ ಬಿಡುತ್ತದೆ. ಈ ರೀತಿಯಲ್ಲಿ ಆದೇ ಮನಸ್ಸು ಅಂದರೆ ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿದಂಥಹ ಮನಸ್ಸು ನಮ್ಮಲ್ಲಿ ಸದಾ ಉಳುಕೊಳ್ಳುವಂತೆ ಅನುಮತಿಸಲು ನಮಗೆ ಪ್ರಬೋಧಿಸಲಾಗಿದೆ – ಇದು ದೇವರ ಚಿತ್ತವನ್ನು ಮಾತ್ರವೇ ನೆರವೇರಿಸುವ ಮನಸ್ಸು ಅಥವಾ ಪ್ರವೃತ್ತಿಯಾಗಿದೆ. ಆದುದರಿಂದ ನಮ್ಮ ನೂತನ ಮನಸ್ಸು ಅಥವಾ ಆತ್ಮವು ಪವಿತ್ರವಾದುದು ಅಥವಾ ದೇವರಿಂದ ನಿರ್ದೇಶಿಸಲ್ಪಟ್ಟದ್ದು. ನಾವೀಗ ಪರಿಶೀಲಿಸುತ್ತಿರುವ ವಾಕ್ಯಭಾಗದಲ್ಲಿ ನಾವು ನಮ್ಮ ಒಡಂಬಡಿಕೆಯಲ್ಲಿ ಉಲ್ಲಂಘಿಸುವ ಯಾವುದನ್ನೂ ಮಾಡದಿರುವಂತೆ ಅಪೋಸ್ತಲನು ನಮ್ಮನ್ನು ಒತ್ತಾಯಿಸುತ್ತಾನೆ – ನಾವು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿ ನಮ್ಮ ನೂತನ ಮನಸ್ಸನ್ನು ದುಃಖಪಡಿಸುವ ಅಥವಾ ನಮ್ಮ ಕರ್ತವ್ಯವನ್ನು ತೊರೆಯುವಂತೆ ನಮ್ಮ ಪ್ರಜ್ಞೆಯನ್ನು ಚುಚ್ಚುವ ಅಥವಾ ಹಾನಿಗೊಳಿಸುವ ಯಾವುದನ್ನೂ ಮಾಡಬಾರದು. ಪವಿತ್ರಾತ್ಮನನ್ನು, ದುಃಖಪಡಿಸಬೇಡಿರಿ, ಅದು ದೇವ ಮನಸ್ಸಾಗಿ ನಿಮ್ಮಲ್ಲಿದ್ದು ನಿಮ್ಮ ಪುತ್ರತ್ವದ ಮುದ್ರೆಯಾಗಿದೆ.

## 'ಸತ್ಯದ ಆತ್ಮನು'
## "The Spirit of the Truth"

**"ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯಗಳಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು"** – ಯೋಹಾನ 16:13.

ಈ ಪ್ರಸ್ತಾಪದ ವಾಕ್ಯಭಾಗವನ್ನು ನಾವೀಗಾಗಲೇ ಎಂಟನೇ ಅಧ್ಯಾಯದಲ್ಲಿ ಪರಿಗಣಿಸಿದ್ದೇವೆ. ಆದರೆ ಕೆಲವೊಂದು ಹೆಚ್ಚುವರಿ ಲಕ್ಷಣಗಳನ್ನು ನಾವಿಲ್ಲಿ ಪರಿಗಣಿಸಬೇಕಾಗಿದೆ. ಶಿಷ್ಯರುಗಳು, ಯೆಹೂದ್ಯರೂ, ಸ್ವಾಭಾವಿಕ ಮಂದಿಯೂ ಆಗಿದ್ದ ಅವರು ಎಲ್ಲಾ ಸಂಗತಿಗಳನ್ನು ಪ್ರಾಪಂಚಿಕ ದೃಷ್ಟಿಕೋನದಿಂದಲೇ ನೋಡುವವರಾಗಿದ್ದರು ಮತ್ತು ಮಾನವ ವಿಮೋಚನೆಯೊಂದನ್ನು ಮತ್ತು ಪತನಗೊಂಡವರ ಕೈಯಲ್ಲಿ ಭೂಲೋಕದ ರಾಜ್ಯವೊಂದನ್ನು ನಿರೀಕ್ಷಿಸುವವರಾಗಿದ್ದರು. ನಮ್ಮ ಕರ್ತನು ಅವರೊಂದಿಗೆ ಪರಲೋಕ ರಾಜ್ಯದ ಬಗ್ಗೆ ಮಾತನಾಡುವವನಾಗಿದ್ದಾನೆ. ಆದರೆ ಇದುವರೆಗೆ ಆತನು ತಾನು ಸಾಯಲೇಬೇಕಾಗಿದೆ, ಅವರನ್ನು ಬಿಟ್ಟು ಬಹು ದೂರವಾದ ದೇಶವೊಂದಕ್ಕೆ ಹೋಗಿ, ರಾಜ್ಯವೊಂದರ ಅಧಿಕಾರವನ್ನು ಪಡಕೊಳ್ಳಲು ಹೋಗಬೇಕಾಗಿದೆ (ಲೂಕ 19:12 ನೋಡಿರಿ) ಮತ್ತು ಅಲ್ಲಿಂದ ಹಿಂತಿರುಗಿ ಬಂದು ಇಲ್ಲಿ ತನ್ನ ರಾಜ್ಯವೊಂದನ್ನು ಸ್ಥಾಪಿಸಿ ಅದರಲ್ಲಿ ತನ್ನೊಂದಿಗೆ ನಿಷ್ಠಾವಂತರನ್ನು ಸಹಾ ಆ ರಾಜ್ಯದ ಜೊತೆ ವಾರಸುದಾರರುಗಳಾಗಿ ಮಹಿಮೆಪಡಿಸಲಿರುವುದಾಗಿ ಅವರಿಗೆ ವಿವರಿಸಿ ಹೇಳಿರುವುದಿಲ್ಲ. ಆತನ ಈ ಪ್ರಕಟನೆಯಿಂದ ನಿರಾಶೆಗೊಂಡ ಅವರನ್ನು ಸಮಾಧಾನಪಡಿಸುವವನಾಗಿ ಆತನು ಅವರಿಗೆ ತಾನು ಅವರನ್ನು ಒಬ್ಬಂಟಿಗರನ್ನಾಗಿ ಬಿಡುವುದಿಲ್ಲ, ಆದರೆ, ತಂದೆಯು ತನ್ನನ್ನು ಇಲ್ಲಿಗೆ ಒಂದು ಕಾರ್ಯ ಮಾಡುವುದಕ್ಕಾಗಿ ಕಳುಹಿಸಿದಂತೆಯೇ, ತನ್ನ ಗೈರುಹಾಜರಿಯಲ್ಲಿ ತಂದೆಯು ಅವರಿಗೆ ಸಮಾಧಾನವನ್ನುಂಟುಮಾಡುವ ಸಹಾಯಕನೊಬ್ಬನನ್ನು ಆತನ ಹೆಸರಿನಲ್ಲಿ ಅಥವಾ ಆ ಕಾಲಕ್ಕೆ ಆತನ ಪ್ರತಿನಿಧಿಯಾಗಿ ಅವರ ಬಳಿಗೆ ಕಳುಹಿಸಿಕೊಡುತ್ತಾನೆಂಬ ಭರವಸೆಯನ್ನು ನೀಡುವವನಾಗಿದ್ದಾನೆ. ಬರಲಿರುವ ಸಮಾಧಾನಪಡಿಸುವವನು (ಪವಿತ್ರಾತ್ಮನು) ಮತ್ತೊಬ್ಬ ಮೆಸ್ಸೀಯನು ಅಥವಾ ಬೇರೊಬ್ಬ ಬೋಧಕನು ಎಂಬ ಕಲ್ಪನೆಯು ಅವರಲ್ಲಿ ಉಂಟಾಗದಂತೆ **"ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು"** ಎಂಬ ಮಾತುಗಳನ್ನು ಹೇಳುವವನಾಗಿದ್ದಾನೆ. ಆತನು ಸ್ವತಂತ್ರ್ಯವಾಗಿಯಾಗಲೀ, ಅವರು ಈಗಾಗಲೇ ಹೊಂದಿ ಕೊಂಡಿರುವ ಆತನ ಬೋಧನೆಗಳಿಗೆ ಸಾಮರಸ್ಯವಿಲ್ಲದಂತೆ ಯಾಗಲೀ ಮಾತನಾಡುವುದಿಲ್ಲ. ಆದರೆ **"ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು"**.

ಈ ಮಾತುಗಳಲ್ಲಿ ಸಮಾಧಾನಪಡಿಸುವ ಈ ಪವಿತ್ರಾತ್ಮನು ತನ್ನ ಮತ್ತು ತನ್ನ ತಂದೆಯ ನಡುವೆ ಕೇವಲ ಒಂದು ಸಂಪರ್ಕವಾಹಿನಿಯಾಗಿರುತ್ತಾನೆ, ಮತ್ತು ನನ್ನ ನಿಷ್ಠಾವಂತ ಹಿಂಬಾಲಕರಾದ ನೀವುಗಳು ಮತ್ತೊಂದು ಕಡೆಯಲ್ಲಿರುತ್ತೀರಿ: ಸತ್ಯದ ಆತ್ಮನು, ನನ್ನ ಪ್ರತಿನಿಧಿಯಾಗಿ ಹೆಚ್ಚು ನಿರ್ಧಿಷ್ಟವಾಗಿ ನಾನೀಗಾಗಲೇ ನಿಮಗೆ ತಿಳಿಸಿರುವ

ಆದರೆ ನೀವಿನ್ನೂ ಅವುಗಳನ್ನು ಅರ್ಥಮಾಡಿಕೊಳ್ಳಲು ಸಿದ್ಧವಾಗಿರದ ವಿವಿಧ ಸತ್ಯ ಸಂಗತಿಗಳನ್ನು ಮತ್ತಷ್ಟು ವಿಸ್ತಾರಗೊಳಿಸಿ ನಿಮ್ಮ ಗಮನಕ್ಕೆ ತರುತ್ತಾನೆ. ನಿಜವಾಗಿಯೂ ನಾನು ನಿಮಗಾಗಿ ಈಡುಬಲಿಯಾಗಿ ಅರ್ಪಿತನಾಗಿ ತಂದೆಯ ಬಳಿಗೆ ಏರಿ ಹೋಗಿ ನಿಮ್ಮಪರವಾಗಿ ಅದನ್ನು ಆತನಿಗೆ ಸಮರ್ಪಿಸುವವರೆಗೂ ನೀವು ಅವುಗಳನ್ನು ಅರ್ಥಮಾಡಿಕೊಳ್ಳುವುದು ಯುಕ್ತವಲ್ಲ. ನಂತರದಲ್ಲಿ, ತಂದೆಯ ಯೋಜನೆಯೊಂದಿಗೆ ಸಾಮರಸ್ಯದಿಂದ ನಾನು ಆ ಸಮಾಧಾನದಾಯಕನ ಮೂಲಕವಾಗಿ ಅನೇಕ ಆತ್ಮೀಕ ಸಂಗತಿಗಳನ್ನು ನಿಮ್ಮೊಡನೆ ವ್ಯವಹರಿಸಲು ಸಾಧ್ಯವಾಗುತ್ತದೆ. ಅವುಗಳಿಗೆ ನೀವಿನ್ನೂ ಸಿದ್ಧರಾಗಿಲ್ಲ ಮತ್ತು ಇನ್ನೂ ಪಾಪ ಪ್ರಾಯಶ್ಚಿತ್ತವು ಆಗದೇ ಇರುವುದರಿಂದ ಅವುಗಳಿಗೆ ಇನ್ನೂ ನಿಮಗೆ ಹಕ್ಕಿಲ್ಲ. ಮತ್ತು ಮುಂದಿನ ಸಂಗತಿಗಳನ್ನು ಅರ್ಥಮಾಡಿಕೊಳ್ಳುವ ಸೂಕ್ತ ಸಮಯವು ಬರುವಾಗ ಈ ದೇವರ ಆತ್ಮನು, ನನ್ನ ಆತ್ಮನು, ನನ್ನ ಹೆಸರಿನಲ್ಲಿ ಕಳುಹಿಸಲ್ಪಟ್ಟವನು, ನನ್ನ ವಿಮೋಚನಾ ಕಾರ್ಯದ ಫಲವಾಗಿ ಬಂದವನು ಅಗತ್ಯವಾದ ಮತ್ತು ಅರ್ಥಮಾಡಿಕೊಳ್ಳಲು ನಿಮಗೆ ಸೂಕ್ತವಾದ ಎಲ್ಲಾ ಸಂಗತಿಗಳನ್ನು ನಿಮಗೆ ಹಂತ ಹಂತವಾಗಿ ಸಂಪೂರ್ಣವಾಗಿ ಅರ್ಥವಾಗುವಂತೆ ಮಾಡುವವನು ಎಂದು ಹೇಳಿದ ಹಾಗಾಯಿತು – **“ಆತನು** (ತಂದೆಯ ಪವಿತ್ರ ಆತ್ಮನು, ಪ್ರಭಾವವು ಅಥವಾ ಶಕ್ತಿಯು) **ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು. ತಂದೆಗೆ ಇರುವುದೆಲ್ಲಾ ನನ್ನದು** (ಆತನ ಮತ್ತು ನನ್ನ ಯೋಜನೆಗಳು ಸಮರ್ಪಕವಾಗಿ ಅನ್ಯೋನ್ಯತೆಯಲ್ಲಿವೆ); **ಆದುದರಿಂದ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವನೆಂದು ಹೇಳಿದೆನು”** (ಯೋಹಾನ 16:14,15).

ಆದುದರಿಂದ, ನೀವು ನನ್ನ ಬೋಧನೆಗಳನ್ನು ಬುಡಮೇಲುಮಾಡಬಹುದಾದ ನೂತನ ಬೋಧನೆಗಳನ್ನು ನಿರೀಕ್ಷಿಸಬಾರದು. ಬದಲಾಗಿ ಮತ್ತು ನನ್ನ ಬೋಧನೆಯ ನೆಲೆಯಲ್ಲಿ ಹೆಚ್ಚಿನ ಅಭಿವೃದ್ಧಿ ಮತ್ತು ಹೆಚ್ಚಿನ ಶಿಕ್ಷಣಗಳನ್ನು ಮಾತ್ರವೇ ನಿರೀಕ್ಷಿಸಬೇಕು. ಯಾಕೆಂದರೆ ಬರಲಿರುವ ಸಹಾಯಕನ ಎಲ್ಲಾ ಬೋಧನೆಗಳೂ ನನ್ನ ಬೋಧನೆಗಳೊಂದಿಗೆ ಸಾಮರಸ್ಯದಲ್ಲಿರುವುದು ಮತ್ತು ಅವುಗಳು ಇನ್ನಷ್ಟು ಸಂಪೂರ್ಣವಾಗಿ ನಾನೇ ಮೆಸ್ಸೀಯನು ಎಂಬುದನ್ನು ತೋರಿಸಿಕೊಡುತ್ತವೆ. ನೀವು ಆ ಸಹಾಯಕನ ಬೋಧನೆಗಳಿಂದ ಸತ್ಯದ ಬಗ್ಗೆ ಅನುಮಾನಿಸುವಂತಿಲ್ಲ. ಯಾಕೆಂದರೆ ಇದುವೇ ಸತ್ಯದ ಆತ್ಮನಾಗಿದ್ದು ತಂದೆಯಿಂದ ಹೊರಟು ಬಂದುದಾಗಿದೆ. ಈ ಸತ್ಯದ ಆತ್ಮನು ನನ್ನ ವಾರ್ತಾವಾಹಕನಾಗಿದ್ದಾನೆ ಮತ್ತು ನನ್ನ ಸಿದ್ಧಾಂತಗಳನ್ನು ನಿಮಗೆ ತಿಳಿಸುವವನಾಗಿದ್ದಾನೆ ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತೋರಿಸಿಕೊಡುವವನಾಗಿದ್ದಾನೆ – ಯೋಹಾನ 16:13.

ಈ ರೀತಿಯಲ್ಲಿ, ಸುವಾರ್ತಾ ಯುಗದಲ್ಲೆಲ್ಲಾ ಕ್ರಿಸ್ತನ ಶ್ರಮೆಯ ಬಗ್ಗೆ ಮತ್ತು ಆತನ ಸಭೆಯ ಪ್ರತಿಯೊಂದು ಅಂಗವೂ ಅವುಗಳನ್ನು ಹಂಚಿಕೊಳ್ಳುವ ಬಗ್ಗೆ ಹಾಗೂ ನಾವು ನಮ್ಮ ವಿಮೋಚಕನೂ ಕರ್ತನೂ ಆದಾತನನ್ನು ಅನುಸರಿಸುವ ದಾರಿಯ ಬಗ್ಗೆ ಸತ್ಯದ ಆತ್ಮವು ಹೆಚ್ಚು ಹೆಚ್ಚಾಗಿ ಸಭೆಗೆ ತೋರಿಸುತ್ತಿದೆ; ಆತನ ಪ್ರತಿಫಲವಾದ ಮಹಿಮೆಯ ಶ್ರೇಷ್ಠತೆಯನ್ನು ಮತ್ತು **“ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು. ಹೇಗೆಂದರೆ ಕ್ರಿಸ್ತನೊಂದಿಗೆ** ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುದಾರರಾಗುವುದಾದರೆ ಆತನ ಮಹಿಮೆಯಲ್ಲಿಯೂ ಪಾಲುದಾರರಾಗುವೆವು. ನಮಗೆ ಆಗುವ ನಮ್ಮ ಭಾಗ್ಯದ ಬಗ್ಗೆಯೂ ಸಹಾ ಇದು ತೋರಿಸಿಕೊಡುತ್ತದೆ”. ಎಲ್ಲರ ತಂದೆಯಾದ ಯೆಹೋವನು ಈ ಎಲ್ಲಾ ಸತ್ಯಗಳ ಕರ್ತೃವಾಗಿದ್ದಾನೆ. ಆದುದರಿಂದ ನಾವು ಈ ಸುವಾರ್ತಯುಗದ ಕಾಲದಲ್ಲೆಲ್ಲಾ ಪಡೆಯುವ ಎಲ್ಲಾ ಸಂಗತಿಗಳೂ ಆತನಿಂದ ಹೊರಡುತ್ತವೆ ಮತ್ತು ಆತನಿಂದಲೇ ಪ್ರತಿಯೊಂದು ಒಳ್ಳೆ ದಾನಗಳೂ ಹಾಗೂ ಎಲ್ಲಾ ಒಳ್ಳೆ ವರಗಳು ಬರುತ್ತವೆ. ಆತನು ಇವುಗಳನ್ನು ಉಂಟುಮಾಡಿದ ಅನಾದಿಕಾಲದಿಂದಲೇ ಪ್ರವಾದಿಗಳ ಮತ್ತು ಕ್ರಿಸ್ತನ ಮತ್ತು ಆತನ ಅಪೋಸ್ತಲರ ಸ್ಫೂರ್ತಿದಾಯಕವಾದ ಮಾತುಗಳ, ಬರಹಗಳ ಆದರ್ಶಭೂತ ಬೋಧನೆಗಳೆಂಬ ವಾಹಿನಿಗಳ ಮೂಲಕ ಇವನ್ನು ಕಳುಹಿಸುತ್ತಾ ಇರುತ್ತಾನೆ. ಪವಿತ್ರಾತ್ಮನನ್ನು ನಮ್ಮ ಹೃದಯಗಳಲ್ಲಿ ಅಂಗೀಕರಿಸುವುದರ ಮೂಲಕವಾಗಿ ಮತ್ತು ದೇವರ ಮಾತು ಮತ್ತು ಯೋಜನೆಗಳೊಂದಿಗೆ ನಮ್ಮ ನಡತೆಯನ್ನು ಸಾಮರಸ್ಯದಲ್ಲಿರಿಸಿಕೊಳ್ಳುವುದರ ಮೂಲಕ ದೇವರು ತಾನು ಪ್ರೀತಿಸುವವರಿಗಾಗಿ ಕಾದಿರಿಸಿದ ಸಂಗತಿಗಳನ್ನು ನಾವು ಮೆಚ್ಚಿಕೊಳ್ಳುವವರಾಗುತ್ತೇವೆ ಮತ್ತು ಕೇವಲ ನೋಡುವುದರಿಂದ ಮಾತ್ರವಲ್ಲ ನಂಬಿಕೆಯಿಂದಲೂ ನಡೆಯುವವರಾಗುತ್ತೇವೆ.

### “ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು” (ಯೋಹಾನ 14:26)

### "But The Comforter which is the Holy Ghost, whom The Father will send in my Name" - John 1:26

ನಾವೀಗಾಗಲೇ ತಪ್ಪು ಹಾದಿಗೆ ಎಳೆಯಬಹುದಾದ ‘Ghost’ ಎಂಬ ಪದದ ಬಗ್ಗೆ ಎಂಟನೆಯ ಅಧ್ಯಾಯದಲ್ಲಿ ಪರೀಕ್ಷಿಸಿದ್ದೇವೆ. ಆದರೆ ನಾವೀಗ ಪವಿತ್ರಾತ್ಮನು ತಂದೆಯಿಂದ ಕಳುಹಿಸಲ್ಪಡುತ್ತಾನೆ ಎಂಬ ಹೇಳಿಕೆಯನ್ನು ಪರೀಕ್ಷಿಸುವವರಾಗಿದ್ದೇವೆ. ಯಾಕೆಂದರೆ, ಇದು ಪವಿತ್ರಾತ್ಮನು ತಂದೆಯ ನಿಯಂತ್ರಣದಲ್ಲಿರುವ ಒಂದು ಪ್ರಭಾವ ಅಥವಾ ಶಕ್ತಿ, ಮಾನವ ಕಲ್ಪಿತ ವಿಶ್ವಾಸ ಅರಿಕೆಯಲ್ಲಿ

ತಪ್ಪಾಗಿ ಪ್ರತಿಪಾದಿಸುವಂತೆ ಆತನು ದೇವರಿಗೆ ಸಮಾನವಾದ ಶಕ್ತಿ ಮತ್ತು ಮಹಿಮೆಯನ್ನು ಹೊಂದಿರುವ ಮತ್ತೊಂದು ವ್ಯಕ್ತಿ ಅಲ್ಲ ಎಂಬ ಅರ್ಥ ನೀಡುತ್ತದೆ. ನಮ್ಮ ಶಕ್ತಿಗಳೆಲ್ಲವೂ ನಮ್ಮ ಹಿಡಿತದಲ್ಲಿರುವಂತೆ ದೇವರ ಎಲ್ಲಾ ಶಕ್ತಿಗಳೂ ಸಂಪೂರ್ಣವಾಗಿ ಆತನ ಹಿಡಿತದಲ್ಲಿರುತ್ತವೆ. ಆದುದರಿಂದ ದೇವರು ತನ್ನ ಆತ್ಮನನ್ನು ಕಳುಹಿಸುತ್ತಾನೆ ಎಂಬ ಕಂಠೋಕ್ತಿಯು ಅಥವಾ ಪ್ರವಾದಿಯು ವಿವರಿಸುವಂತೆ "ನಾನು ನನ್ನ ಆತ್ಮನನ್ನು ನಿನ್ನಲ್ಲಿ ಇರಿಸುತ್ತೇನೆ" ಎಂಬ ಹೇಳಿಕೆಗಳೂ ಅದರಂತೆಯೇ ಅವೆ. ಮೇಲಾಗಿ, ಒಬ್ಬ ಸೇವಕನನ್ನು ಆತನ ಸ್ವಂತ ಹೆಸರಿನ ಮೇಲೆ ಕಳುಹಿಸದೆ ಆತನ ಒಡೆಯನ ಹೆಸರಿನಲ್ಲಿ ಕಳುಹಿಸಿಕೊಡುವಂತೆ ಪವಿತ್ರಾತ್ಮನನ್ನು ಯೇಸುವಿನ ಹೆಸರಿನಲ್ಲಿ ಕಳುಹಿಸಲಾಯಿತು ಎಂಬ ಹೇಳಿಕೆಯೂ ಇದೆ. ಇಲ್ಲಿ ನಮಗೆ ದೇವರ ವಾಕ್ಯದಲ್ಲಿಲ್ಲದ ತ್ರೈಯೇಕತ್ವದ ಸಮಾನವಾದ ಅಧಿಕಾರ ಮತ್ತು ಮಹಿಮೆಯಲ್ಲಿನ ಮತ್ತೊಂದು ವಿರೋಧವು ಕಂಡು ಬರುತ್ತದೆ. ಇಲ್ಲಿ ತಂದೆಯ ಶ್ರೇಷ್ಟತೆಯು ಸ್ಪಷ್ಟವಾಗಿ ಹೇಳಲ್ಪಟ್ಟಿದೆ; ಪವಿತ್ರಾತ್ಮನು ತಂದೆಯ ಆತ್ಮವಾಗಿದೆ, ಶಕ್ತಿಯಾಗಿದೆ, ಪ್ರಭಾವವಾಗಿದೆ ಮತ್ತು ತಂದೆಯ ಚಿತ್ತದಂತೆ ಮತ್ತು ನಮ್ಮ ವಿಮೋಚಕನಾದ ಯೇಸುವಿನ ಹೆಸರಿನಲ್ಲಿ ಕಳುಹಿಸಲ್ಪಟ್ಟಿದೆ. ಯೇಸುವಿನ ಹೆಸರಿನಲ್ಲಿ ಯಾಕೆ? ಯಾಕೆಂದರೆ ವಿಮೋಚನೆಯ ಮತ್ತು ಪಾಪಿಷ್ಟರ ಪುನಃಸ್ಥಾಪನೆಯ ಸಮಗ್ರ ಕಾರ್ಯವು, ಪಾಪ ನಿವೃತ್ತಿಯ ಸಮಸ್ತ ಕಾರ್ಯವು ಮಗನಿಗೆ ಒಪ್ಪಿಸಲ್ಪಟ್ಟಿದೆ, ಮತ್ತು ತಂದೆಯ ಆತ್ಮನು ಒಂದು ವಾಹಿನಿಯಂತಿದ್ದು ಇದರ ಮೂಲಕವಾಗಿ ಮಗನು ತನ್ನ ಅಮೂಲ್ಯ ರಕ್ತದಿಂದ ಕೊಂಡುಕೊಂಡ ಆಶೀರ್ವಾದಗಳನ್ನು ಅನುಗ್ರಹಿಸುವ ಕಾರ್ಯಾಚರಣೆಯನ್ನು ನಡೆಸುತ್ತಾನೆ.

ದೇವರ ಪವಿತ್ರಾತ್ಮನು ನಮ್ಮ ಕರ್ತನಾದ ಯೇಸುವಿನ ಮೇಲೆ ಆತನ ಸ್ನಾನ ದೀಕ್ಷೆ ಮತ್ತು ಪ್ರತಿಷ್ಠೆಯ ಸಮಯದಲ್ಲಿ ಬಂದಿಳಿದಾಗ, ಅದು ನಿಜವಾಗಿಯೂ ಸಹಾಯಕವಾಗಿತ್ತು, ಮಹಾ ಆಶೀರ್ವಾದಕರವಾಗಿತ್ತು. ಪರಂತು ಅದು ಆತನಿಗೆ ದೇವರ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಆತನ ಎಲ್ಲಾ ಪ್ರಾಪಂಚಿಕ ಧ್ಯೇಯಗಳ ಮತ್ತು ನಿರೀಕ್ಷೆಗಳ ತ್ಯಾಗವೂ ಆಗಿತ್ತು. ನಮ್ಮ ಕರ್ತನು ಬೇರೆ ಮನಸ್ಸುಳ್ಳವನಾಗಿದ್ದರೆ, ಸ್ವಂತ ಚಿತ್ತವುಳ್ಳವನಾಗಿದ್ದರೆ, ಸ್ವಂತವನ್ನು ಬಯಸುವವನಾಗಿದ್ದರೆ, ದೇವರಾತ್ಮದ ಮಾರ್ಗದರ್ಶನವು ಆತನಿಗೆ ಸಹಾಯಮಾಡುವ ಬದಲಾಗಿ ತಲ್ಲಣಪಡಿಸುವುದಾಗುತ್ತಿತ್ತು: ಆತನ ಹೃದಯವು ಅತೃಪ್ತಿಯಿಂದ ಕೂಡಿರುತ್ತಿತ್ತು ಮತ್ತು ಆತನೊಳಗೆ ದಂಗೆ ಏಳಿಸಬಹುದಿತ್ತು. ಅದರಂತೆ ಆತನ ಜನರ ಸಂಗಡಲೂ. ಕರ್ತನ ಮನಸ್ಸನ್ನು ಹೆಚ್ಚಾಗಿ ಅನುಸರಿಸುವುದರಿಂದ ಸ್ವಾಭಾವಿಕ ಮನುಷ್ಯನು ಹೆಚ್ಚು ಹೆಚ್ಚು ಅಸಂತೋಷ, ಅನಾನುಕೂಲತೆಗಳನ್ನು ಅನುಭವಿಸುತ್ತಾನೆ ಮತ್ತು ಚಡಪಡಿಸುತ್ತಾನೆ. ಯಾಕೆಂದರೆ ಅದು ಆತನ ಆತ್ಮನೊಂದಿಗೆ, ಮನಸ್ಸಿನೊಂದಿಗೆ ಮತ್ತು ಚಿತ್ತದೊಂದಿಗೆ ಘರ್ಷಣೆಯನ್ನುಂಟುಮಾಡುತ್ತದೆ ಮತ್ತು ಆತನನ್ನು ದೂಷಿಸುವುದಾಗಿದೆ. ಆದರೆ, ಕ್ರಿಸ್ತನಲ್ಲಿನ ನೂತನ ಸೃಷ್ಟಿಗಳಲ್ಲಿ ಅವರ ಸ್ವಂತ ಚಿತ್ತವು ಮರಣಿಸಿದ್ದು , ತಂದೆಯ ಚಿತ್ತವನ್ನು ಅವರು ತಿಳುಕೊಂಡವರಾಗಿ ಮತ್ತು ಅದರಂತೆ ಮಾಡಲು ಬಯಸುವವರಾಗಿರುವುದರಿಂದ ಅವರಿಗೆ ತಂದೆಯ ಚಿತ್ತದ, ಯೋಜನೆಯ ಸ್ಪಷ್ಟವಾದ ಗ್ರಹಣಶಕ್ತಿಯು, ಮತ್ತು ದೇವರ ವಾಕ್ಯದಲ್ಲಿನ ಬೋಧನೆಗಳ ಬಗ್ಗೆ ದೇವರ ಅನುಗ್ರಹದ ನಡೆಸುವಿಕೆಯು ನಿಜವಾಗಿಯೂ ಸಹಾಯಕವಾಗಿವೆ, ಎಲ್ಲಾ ಸಂಕಷ್ಟಗಳ, ಹಿಂಸೆಗಳ ನಡುವೆ ಅವರಿಗೆ ಸಂತೋಷವನ್ನೂ, ಸಮಾಧಾನವನ್ನೂ, ತೃಪ್ತಿಯನ್ನೂ ತರುವುದಾಗಿವೆ. ಈ ಆಲೋಚನೆಯ ಸಾಮರಸ್ಯವಾಗಿ ಅಪೋಸ್ತಲ ಪ್ರಕಟನೆ ಏನೆಂದರೆ ಸತ್ಯದ ಮಾತುಗಳ ಬಗ್ಗೆ, ಸಮಾಧಾನವನ್ನು ಕೊಡಲು, ಮೊದಲು ಆತ್ಮನನ್ನು ಸ್ವೀಕರಿಸಬೇಕು ಮತ್ತು ಅವನ್ನು ಮೆಚ್ಚಿಕೊಳ್ಳಬೇಕು. ಆತನು ಹೇಳುತ್ತಾನೆ, "ಪೂರ್ವದಲ್ಲಿ ಬರೆದದ್ದೆಲ್ಲಾ ನಮ್ಮನ್ನು ಉಪದೇಶಿಸುವುದಕ್ಕಾಗಿ ಬರೆಯಲ್ಪಟ್ಟಿತು. ನಾವು ಓದಿ ಸ್ಥಿರಚಿತ್ತವನ್ನೂ ಆದರಣೆಯನ್ನೂ ಹೊಂದಿ ರಕ್ಷಣೆಯ ನಿರೀಕ್ಷೆಯುಳ್ಳವರಾಗುವಂತೆ ಆ ಗ್ರಂಥಗಳು ಬರೆಯಲ್ಪಟ್ಟವು" – ರೋಮಾ. 15:4.

## "ಪವಿತ್ರಾತ್ಮ ಭರಿತರಾಗುವುದು"

## "Filled with the Holy Spirit"

**"ಆಗ ಅವರೆಲ್ಲರೂ ಪವಿತ್ರಾತ್ಮ ಭರಿತರಾಗಿ ಆ ಆತ್ಮ ತಮ ತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವುದಕ್ಕೆ ಪ್ರಾರಂಭಿಸಿದರು"** – ಅ.ಕೃ. 2:4.

ಈ ವಾಕ್ಯಭಾಗವು ಪವಿತ್ರಾತ್ಮನ ಎರಡು ವಿಧವಾದ ಕಾರ್ಯಾಚರಣೆಗಳನ್ನು ವಿವರಿಸುವುದಾಗಿದೆ :

(1) ಇದೊಂದು ಮನಸ್ಸು, ಮನೋಪ್ರವೃತ್ತಿ, ದೇವರ ಶಿಷ್ಯರುಗಳಲ್ಲಿ ಮಗನ ಭಾವವನ್ನು ಹೊಂದಿ ಕಾರ್ಯಸಾಧಿಸುವ ದೇವರ ಆತ್ಮವಾಗಿದೆ. ದೇವರ ಆತ್ಮನಿಂದ ಜನಿಸಿ ಅವರ ಹೃದಯಗಳನ್ನು ತಂದೆಯೊಂದಿಗೆ ಮತ್ತು ಮಹಿಮೆಯುಳ್ಳ ವಿಮೋಚಕನೊಂದಿಗೆ ಸಹಾನುಭೂತಿಯಿಂದ ನಿಕಟ ಸಂಪರ್ಕಕ್ಕೆ ತರುವುದರಲ್ಲಿ ಕಾರ್ಯನಿರ್ವಹಿಸುವುದಾಗಿದೆ.

(2) ದೇವರ ಪವಿತ್ರಾತ್ಮನ ಅಥವಾ ಶಕ್ತಿ ಅಥವಾ ಪ್ರಭಾವವು ಸಹಾ ಅವರ ಮೇಲೆ ಕ್ರಿಯೆ ನಡಿಸಿ ಈ ಲೋಕದವರಿಗೆ ಸಾಕ್ಷಿಕೊಡುವಂತೆ ಮತ್ತು ಸಭೆಯನ್ನು ಸ್ಥಾಪಿಸುವಂತೆ ಅವರಿಗೆ ವಿಶೇಷವಾದ ಮಹತ್ವವುಳ್ಳ ಅದ್ಭುತ ವರಗಳನ್ನು

ನೀಡುವುದಾಗಿದೆ. ದೇವರು ವ್ಯಕ್ತಿಗತವಾಗಿ ಒಬ್ಬನಲ್ಲಿ ಪ್ರವೇಶಿಸುವನು ಎಂದು ತಪ್ಪಾಗಿ ಆಲೋಚಿಸುವುದು ಸಮಂಜಸವೆನಿಸದು. ಅದೇ ರೀತಿಯಲ್ಲಿ ದೇವರು ನೂರಾರು, ಸಾವಿರಾರು, ಮಿಲಿಯಾಂತರ ಜನರೊಳಗೆ ಪ್ರವೇಶಿಸಿದನು ಎಂಬುದು ಸಹಾ ಇನ್ನೂ ಹೆಚ್ಚು ಅಸಮಂಜಸವೆನಿಸುತ್ತದೆ. ಆದರೆ, ಉನ್ನತನಾದವನ ಶಕ್ತಿಯು, ಯೆಹೋವನ ಶಕ್ತಿ ಮತ್ತು ಪ್ರಭಾವವು ನೂರಾರು, ಸಾವಿರಾರು, ಮಿಲಿಯಾಂತರ ಜನರ ಮೇಲೆ ಇರುವುದರಲ್ಲಿ ಕಿಂಚಿತ್ತಾದರೂ ಅಸಮಂಜಸತೆ ಇರದು. ಇದು ವಿಶ್ವದ ಸಿಂಹಾಸನದಲ್ಲಿ ಯೆಹೋವನು ಆಸೀನರಾಗುವುದನ್ನು ಯಾವುದೇ ರೀತಿಯಲ್ಲಿ ಅಡ್ಡಿಪಡಿಸದು.

## "ಪವಿತ್ರಾತ್ಮನನ್ನು ವಂಚಿಸುವುದು"
## "Lying to the Holy Spirit"

**"ಆಗ ಪೇತ್ರನು – ಅನನೀಯಾ, ಸೈತಾನನು ನಿನ್ನ ಹೃದಯದಲ್ಲಿ ತುಂಬಿಕೊಂಡದ್ದೇನು? ನೀನು ಯಾಕೆ ಈ ಹೊಲದ ಕ್ರಯದಲ್ಲಿ ಕೆಲವನ್ನು ಬಚ್ಚಿಟ್ಟುಕೊಂಡು ಪವಿತ್ರಾತ್ಮನನ್ನು ವಂಚಿಸಬೇಕೆಂದಿದ್ದೀ? .............. ಅಂದನು** – ಅ.ಕೃ. 5:3

ದೇವರು ತನ್ನ ಜನರ ಹೃದಯಗಳನ್ನು ಪವಿತ್ರಾತ್ಮನಿಂದ ತುಂಬಿಸುವಂತೆಯೇ ಸೈತಾನನು ಅನನೀಯನ ಹೃದಯವನ್ನು ತನ್ನ ಆತ್ಮನಿಂದ ತನ್ನ ಪ್ರಭಾವದಿಂದ ತುಂಬಿಸಿದನು. ಸೈತಾನನ ಆತ್ಮವು ದುರಾಶೆ ಮತ್ತು ಸ್ವಾರ್ಥತೆಯಿಂದ ಕೂಡಿದ ಒಂದು ಆತ್ಮವಾಗಿದ್ದು ಅದು ತನ್ನ ಅಂತಿಮ ಉದ್ದೇಶವನ್ನು ಸಾಧಿಸುವ ಸಲುವಾಗಿ ಯಾವ ವಂಚನೆಗೂ ಹಿಂಜರಿಯುವಂಥಾದ್ದಲ್ಲ. "ಆತ್ಮಗಳನ್ನು ವಿವೇಚಿಸುವ" ವಿಶೇಷವಾದ ವರದ ಸ್ವೀಕೃತನನ್ನಾಗಿ ಮಾಡಲ್ಪಟ್ಟ ಪೇತ್ರನು ಹೃದಯವನ್ನು, ಮನಸ್ಸನ್ನು ಓದಬಲ್ಲವನಾಗಿದ್ದನು. ಆದುದರಿಂದ ಆತನು ಅನನೀಯ ಮತ್ತು ಸಫೈರಳು ಅಪ್ರಮಾಣಿಕತೆಯನ್ನು ಮಾಡುತ್ತಿದ್ದಾರೆಂಬುದನ್ನು ಮತ್ತು ಮಾಡಬಾರದ್ದನ್ನು ಮಾಡಿ ಏನೂ ತಿಳಿಯದಂತೆ ಕಪಟವಾಗಿ ನಟಿಸುತ್ತಿದ್ದಾರೆಂದು ಗ್ರಹಿಸಿದನು. ಈ ಸಂದರ್ಭದಲ್ಲಿ ಅಪೋಸ್ತಲನು 'ದೇವರು' ಮತ್ತು 'ಪವಿತ್ರಾತ್ಮ'ಎಂಬ ಪದಗಳನ್ನು ಮೂರನೆಯ ಮತ್ತು ನಾಲ್ಕನೆಯ ವಚನಗಳಲ್ಲಿ ಪರಸ್ಪರ ಬದಲಾಯಿಸಿಕೊಂಡು ಉಪಯೋಗಿಸುವುದನ್ನು ಗಮನಿಸಬಹುದು. ಮೂರನೆಯ ವಚನದಲ್ಲಿ ಆತನು **"ನೀನು ಯಾಕೆ ಪವಿತ್ರಾತ್ಮನನ್ನು ವಂಚಿಸಬೇಕೆಂದಿದ್ದೀ"?** ಎಂದು ಪ್ರಶ್ನಿಸಿದರೆ ನಾಲ್ಕನೆಯ ವಚನದಲ್ಲಿ **"ನೀನು ಸುಳ್ಳಾಡಿದ್ದು ಮನುಷ್ಯರಿಗಲ್ಲ ದೇವರಿಗೆ ಆಡಿದಿ"** ಎಂದು ಹೇಳುವವನಾಗಿದ್ದಾನೆ. ಇವೆರಡರ ಭಾವನೆಗಳು ಒಂದೇ ಆಗಿವೆ. ಅಪೋಸ್ತಲನ ಮೂಲಕವಾಗಿ ಕಾರ್ಯವೆಸಗುವ ದೇವರಾತ್ಮನು ಖಡಾಖಂಡಿತವಾಗಿ ದೇವರ ಪ್ರತಿನಿಧಿಯಾಗಿದ್ದಾನೆ; ಇದರ ಪರಿಣಾಮವಾಗಿ ದೇವರನ್ನು ಮತ್ತು ಆತನ ಪವಿತ್ರಾತ್ಮನನ್ನು ಪ್ರತಿನಿಧಿಸುವ ಅಪೋಸ್ತಲರಿಗೆ ಸುಳ್ಳನ್ನು ಹೇಳುವುದರಿಂದ ಅನನೀಯ ಮತ್ತು ಸಫೈರಳು ದೇವರಿಗೇ ಮತ್ತು ದೇವರ ಆತ್ಮನಿಗೇ ಸುಳ್ಳನ್ನು ಹೇಳುವವರಾಗಿದ್ದಾರೆ. ಯಾಕೆಂದರೆ ಪೇತ್ರನು ಅವರ ಕಾರ್ಯಕರ್ತೃವೂ, ಪ್ರತಿನಿಧಿಯೂ ಆಗಿದ್ದನು.

## "ದೇವರಾತ್ಮನನ್ನು ಪರೀಕ್ಷಿಸುವುದು"
## "Tempting The Holy Spirit"

**ಪೇತ್ರನು ಆಕೆಯನ್ನು (ಸಫೈರಳನ್ನು) ನೋಡಿ – "ನೀವಿಬ್ಬರೂ ಕರ್ತನ ಆತ್ಮನನ್ನು ಪರೀಕ್ಷಿಸುವುದಕ್ಕೆ ಯಾಕೆ ಒಡಂಬಟ್ಟಿರಿ?" ಅಂದನು** – ಅ.ಕೃ 5:9

ಮೇಲಿನವುಗಳನ್ನು ಅರ್ಥಮಾಡಿಕೊಂಡಂತೆಯೇ ಇವುಗಳನ್ನು ಸಹಾ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದರೆ ಅದೇ ಆತ್ಮನನ್ನು ಇಲ್ಲಿ 'ಕರ್ತನ ಆತ್ಮನು' ಎಂದು ಉಲ್ಲೇಖಿಸಲಾಗಿದೆ. ಇದರಿಂದ ಅಪೋಸ್ತಲನು ಬಹುಶಃ ಕರ್ತನಾದ ಯೇಸುವನ್ನು ಸೂಚಿಸುವವನಾಗಿದ್ದಾನೆ. ನಾವಿದರ ಸಮಂಜಸತೆಯನ್ನು ಸಹಾ ಮನಸಾರೆ ನೋಡಬಹುದು. ತಂದೆ ದೇವರ ಆತ್ಮನು, ವಿಶೇಷವಾಗಿ ಸಭೆಯಲ್ಲಿದ್ದ ಪವಿತ್ರಾತ್ಮನು, ಸಭೆಯ ಒಡೆಯನ ಪ್ರತಿನಿಧಿಯಾದ ಶಿರಸ್ಸು ತನ್ನ ದೇಹದ ಮನಸ್ಸಿನ ಮೂಲಕವಾಗಿ ಕಾರ್ಯಾಚರಣೆ ಮಾಡುವುದಾಗಿತ್ತು – ಈ ಘಟನೆಯಲ್ಲಿ ಆತ್ಮನು ಸ್ಫೂರ್ತಿಗೊಂಡು ಅಪೋಸ್ತಲನನ್ನು ಪ್ರೇರೇಪಿಸಿತು.

## ಪವಿತ್ರಾತ್ಮಕ್ಕೆ ವಿರುದ್ಧವಾಗಿ ಮಾಡುವ ಪಾಪವು
## Sin Against the Holy Spirit

**"ಯಾವನಾದರೂ ಮನುಷ್ಯಕುಮಾರನಿಗೆ ವಿರೋಧವಾಗಿ ಮಾತಾಡಿದರೆ ಅವನಿಗೆ ಕ್ಷಮಿಸಲ್ಪಡುವುದು: ಪವಿತ್ರಾತ್ಮನಿಗೆ ವಿರೋಧವಾಗಿ ಮಾತನಾಡಿದರೆ ಅವನಿಗೆ ಇಹದಲ್ಲಾಗಲೀ ಪರದಲ್ಲಾಗಲೀ ಕ್ಷಮಿಸಲ್ಪಡುವುದಿಲ್ಲ"** – ಮತ್ತಾಯ 12:32

ಪವಿತ್ರಾತ್ಮನನ್ನು ತಂದೆಯಿಂದಲೂ, ಮಗನಿಂದಲೂ ಪ್ರತ್ಯೇಕನಾದ ವ್ಯಕ್ತಿಗತ ದೇವರೆಂದು ಪರಿಗಣಿಸುವವರು ಸಾಮಾನ್ಯವಾಗಿ ತರ್ಕಿಸುವುದೇನೆಂದರೆ, ಪವಿತ್ರಾತ್ಮನು ತಂದೆಯ ಹಾಗೂ ಮಗನಿಗಿಂತಲೂ ಅತ್ಯಂತ ಮುಖ್ಯನಾದ ವ್ಯಕ್ತಿಯಾಗಿದ್ದಾನೆ ಎಂಬ ಭಾವನೆ. ಆದರೆ, ನಾವೀಗಾಗಲೇ ಕಂಡುಕೊಂಡಿರುವಂತೆ ದೇವರ ವಾಕ್ಯವು ಎಲ್ಲಿಯೂ ಒಂದಕ್ಕಿಂತ ಹೆಚ್ಚು ದೇವರುಗಳನ್ನು ಅನುಮತಿಸುವುದಿಲ್ಲ. ಆತನು ಸಮಸ್ತನೂ, ಎಲ್ಲರಿಗಿಂತಲೂ ಶ್ರೇಷ್ಟನೂ ಆದ ತಂದೆಯಾದ ದೇವರು; ಮತ್ತು ಎಲ್ಲವುಗಳನ್ನು ಉಂಟುಮಾಡಿದ ಕರ್ತನಾದ ಯೇಸುವು ದೇವರ

ನಂತರದವನೂ, ತಂದೆಯ ಶಕ್ತಿಯಿಂದಲೇ ಆ ಸ್ಥಾನಕ್ಕೆ ಏರಿಸಲ್ಪಟ್ಟವನೂ ಆಗಿದ್ದಾನೆ. ಪವಿತ್ರಾತ್ಮನು ತಂದೆಯವನೂ, ಮಗನಿಂದಾದವನೂ ಆಗಿದ್ದಾನೆ. ಆದುದರಿಂದ ಆತನು ಒಬ್ಬ ವ್ಯಕ್ತಿಯಾಗಿದ್ದರೆ ಅವರಿಬ್ಬರಿಗಿಂತ ಮೇಲಣದರ್ಜೆಯವನಾಗಿರಲಾರನು; ಆದರೆ ಪವಿತ್ರಾತ್ಮನಿಗೆ ಯಾವುದೇ ವ್ಯಕ್ತಿತ್ವವು ಸಂಬಂಧಿಸಿಲ್ಲ ಎಂಬುದನ್ನು ನಾವು ನೋಡಿದ್ದೇವೆ; ನಿಜವಾಗಿಯೂ ಅದು ಒಬ್ಬ ವ್ಯಕ್ತಿಯ ಆತ್ಮವು ಅಥವಾ ಕರ್ತನ ಆತ್ಮವು, ಆತನ ಪ್ರಭಾವವು, ಆತನ ಶಕ್ತಿಯು ಮತ್ತು ಈ ಮಾತಿನ ಅರ್ಥದಲ್ಲಿ, ತಾನೇ ಆತನ ಜ್ಞಾನದ, ಗಾಂಭೀರ್ಯದ, ಶಕ್ತಿಯ ಮತ್ತು ಪ್ರೀತಿಯ ಪ್ರತಿನಿಧಿಯಾಗಿದೆ. ಹಾಗಾದಲ್ಲಿ, ಈ ವಾಕ್ಯಭಾಗವು ಏನನ್ನು ಸೂಚಿಸುತ್ತದೆ ಎಂಬುದನ್ನು ನಾವು ನೋಡೋಣ.

ಈ ವಾಕ್ಯಭಾಗದ ಸನ್ನಿವೇಶದಲ್ಲಿ, ನಮ್ಮ ಕರ್ತನಾದ ಯೇಸುವಿಗೆ ತಂದೆಯು ದಯಪಾಲಿಸಿದ ಈ ದೈವಿಕ ಶಕ್ತಿಯನ್ನು ಅಥವಾ ಪವಿತ್ರಾತ್ಮನನ್ನು ಆತನು ಆಗ ತಾನೇ ದೆವ್ವವನ್ನು ಹೊರಹಾಕಲು ಉಪಯೋಗಿಸಿದನು ಎಂಬುದನ್ನು ನಾವು ಗಮನಿಸುತ್ತೇವೆ. ಈ ಅದ್ಭುತ ಕಾರ್ಯವನ್ನು ಕಂಡ ಫರಿಸಾಯರು, ಅದನ್ನು ಅಲ್ಲಗಳೆಯಲಾಗದೆ, ಅದರ ಶಕ್ತಿಯನ್ನು ಪಕ್ಕಕ್ಕೆ ಸರಿಸುವಂತೆ ಇದನ್ನು ಆತನು ದೆವ್ವಗಳ ಒಡೆಯನ ಸಹಾಯದಿಂದ ಅಂದರೆ ಸೈತಾನನ ಶಕ್ತಿಯಿಂದ ಮಾಡುತ್ತಾನೆಂದು ಹೇಳಿದರು. ಇದಕ್ಕೆ ಉತ್ತರಿಸುವಂತೆ ನಮ್ಮ ಕರ್ತನು ತಾನು ಉಪಯೋಗಿಸಿದ ಶಕ್ತಿಯು ಸೈತಾನನ ಶಕ್ತಿಯಾಗಿರದೆ ತನ್ನ ಸ್ವಂತ ಶಕ್ತಿಯೆಂದೂ ಅದುವೇ ದೈವಿಕ ಶಕ್ತಿ ಅಥವಾ ಪ್ರಭಾವವಾಗಿದೆಯೆಂದು ದೃಢಪಡಿಸುವಂತೆ ನಾನು ದೇವರ ಆತ್ಮನ ಬಲದಿಂದಲೇ ದೆವ್ವಗಳನ್ನು ಬಿಡಿಸುತ್ತೇನೆಂದು ಹೇಳಿದನು. ನಂತರದಲ್ಲಿ ಫರಿಸಾಯರು ಇದು ಒಳ್ಳೆಯ ಕೆಲಸವೆಂದು ಹೇಳಲಾಗದೆ, ಯಾವುದೇ ವಿಧದಲ್ಲಿ ಇದು ಪಾಪಕರ, ಸ್ವಾರ್ಥಪೂರಿತ ಆಕಾಂಕ್ಷೆಗಳನ್ನು ಹೊಂದಿದೆ ಎಂದು ಸಾಬೀತುಪಡಿಸಲಾಗದ ಈ ಕಾರ್ಯವನ್ನು ದೆವ್ವಗಳ ಮೂಲಕ್ಕೆ ಅರೋಪಿಸಿರುವುದು ದುರುದ್ದೇಶ ಪೂರಿತವಾಗಿದೆ ಎಂದು ಆತನು ಫರಿಸಾಯರನ್ನು ಗದರಿಸುತ್ತಾನೆ. ಆತನು ಅವರನ್ನು ಸರ್ಪ ಜಾತಿಯವರೆಂದು ಕರೆಯುವವನಾಗಿ ಕೇವಲ ಸರಳವಾದ ಹಾಗೂ ಸತ್ಯದಲ್ಲಿ ಪ್ರಕಟವಾಗುವ ಸಂಗತಿಗಳಿಗೆ ಸಂಪ್ರದಾಯಗಳಿಗೆ ಶರಣರಾದ ಅವರ ಮನಸ್ಸುಗಳು ಕುರುಡಾಗಿವೆ ಎಂದು ಆರೋಪಿಸುವವನಾಗಿದ್ದಾನೆ. ತೊಂದರೆಗೊಳಗಾದ ವ್ಯಕ್ತಿಯನ್ನು ಹಿಡಿದಿದ್ದ ಶಕ್ತಿ ಮತ್ತು ಪ್ರಭಾವವು ಪಿಶಾಚನದಾಗಿತ್ತು, ದ್ವೇಷಭರಿತವಾಗಿತ್ತು ಮತ್ತು ಅದನ್ನು ತೆಗೆದುಹಾಕುವ ಯಾವುದೇ ಶಕ್ತಿಯು ಪೈಶಾಚಿಕ ಪ್ರವೃತ್ತಿಯೊಂದಿಗೆ ಸಾಮರಸ್ಯವಿಲ್ಲದ್ದಾಗಿರಬೇಕು ಎಂಬುದು ಕೇವಲ ಸ್ಪಷ್ಟವಾಗಿದೆ. ಹೀಗಾಗಿ ಈ ಫರಿಸಾಯರಾದ ಬೋಧಕರುಗಳು ವಿನಾಕಾರಣ ಯೇಸುವು ಈ ಅದ್ಭುತವನ್ನು ಸೈತಾನನ ಶಕ್ತಿಯಿಂದ ಮಾಡುವವ ನಾಗಿದ್ದಾನೆ ಎಂದು ಹೇಳಿದುದು ಕ್ಷಮಿಸಲಾಗದ ಅಪರಾಧವಾಗಿದೆ.

ನಮ್ಮ ಕರ್ತನು ಮುಂದುವರೆದು, ಅವರುಗಳು ಉದ್ದೇಶಪೂರ್ವಕವಾಗಿ ಯೆಹೋವನ ದೇವದೂಷಣೆ ಮಾಡದೇ ಹೋದಾಗ್ಯೂ, ಅಥವಾ ಆತನನ್ನೇ ವಿಶಿಷ್ಟವಾಗಿ ದೂಷಣೆ ಮಾಡದಿದ್ದಾಗ್ಯೂ ಅವರುಗಳು ಆತನಲ್ಲಿ ಕಾರ್ಯವೆಸಗಿದ ಪವಿತ್ರವಾದ ಶಕ್ತಿಯನ್ನು ಅಥವಾ ಆತ್ಮನನ್ನು ದೂಷಿಸುವವರಾಗಿದ್ದಾರೆ ಎಂಬುದನ್ನು ಅವರ ಗಮನಕ್ಕೆ ತಂದನು. ಅವರುಗಳಿಗೆ ಅದೃಶ್ಯನಾದ ದೇವರನ್ನು ತಪ್ಪಾಗಿ ತಿಳುಕೊಳ್ಳುವುದು ಅಥವಾ ಆತನನ್ನು ತಪ್ಪಾಗಿ ಪ್ರತಿನಿಧಿಸುವುದು ಹಗುರವಾದ ಅಪರಾಧ ವಾಗಿದ್ದಿರಬಹುದು; ಕರ್ತನಾದ ಯೇಸುವಿನ ಬಗ್ಗೆ ಕೆಟ್ಟದ್ದಾಗಿ ಮಾತನಾಡುವುದು ಮತ್ತು ಆತನ ಉದ್ದೇಶಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳುವುದು, ಆತನು ಸಿಂಹಾಸನವೊಂದನ್ನು ಅಪಹರಿಸಲು ಹಾಗೂ ಅಧಿಕಾರವನ್ನು ಪಡೆದುಕೊಂಡು ತನ್ನನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ ಎಂದು ಆತನ ಮೇಲೆ ಇಲ್ಲಸಲ್ಲದ ಅಪವಾದ ಹೊರಿಸುವುದು ಆತನ ಉದ್ದೇಶಗಳನ್ನು ಅವರ ಸ್ವಂತ ಸ್ವಾರ್ಥಭರಿತ ಆಕಾಂಕ್ಷೆ ಮತ್ತು ಹೆಮ್ಮೆಯಿಂದ ಅಳೆಯುವುದು ಇವುಗಳೂ ಸಹಾ ಅವರಿಗೆ ತುನಲಾತ್ಮಕವಾಗಿ ಲಘುವಾದ ಅಪರಾಧಗಳೆಂದು ತೋರಬಹುದು. ಆದರೆ ಅವರ ನಡತೆಯು ತೀರಾ ಕೀಳಾಗಿತ್ತು; ಅವರುಗಳು ತಮ್ಮ ಜೊತೆ ಸೃಷ್ಟಿಯಾದವನೊಬ್ಬನಿಗೆ ಪೈಶಾಚಿಕ ಶಕ್ತಿಯಿಂದ ಬಿಡುಗಡೆಯಾದನು ಎಂಬ ಒಳ್ಳೆಯ ಸಂಗತಿಗಳಲ್ಲಿ ದೈವಿಕ ಪ್ರಕಟನೆಯನ್ನು ಕಂಡುಕೊಂಡಾಗ್ಯೂ – ಈ ಪವಿತ್ರವಾದ ದೈವಿಕ ಶಕ್ತಿಯನ್ನು ದೂಷಿಸುವುದು ಕೆಟ್ಟತನದ ಪರಮಾವಧಿಯಾಗಿದೆ ಮತ್ತು ಅದರಿಂದ ಅವರ ಹೃದಯಗಳಲ್ಲಿ ಆಳವಾಗಿ ತುಂಬಿರುವ ದ್ವೇಷ, ಹಗೆತನ ಮತ್ತಿತರ ಅಪರಾಧಗಳು ಸ್ಪಷ್ಟವಾಗಿ ಅರ್ಥವಾಗುತ್ತವೆ.

ಅವರುಗಳು ತಮ್ಮಲ್ಲಿನ ಅಜ್ಞಾನ ಮತ್ತು ಕುರುಡುತನದಿಂದ ಆತನನ್ನು, ಆತನ ಕಾರ್ಯಗಳನ್ನು ಮತ್ತು ಪ್ರಯತ್ನಗಳನ್ನು ತಪ್ಪಾಗಿ ಅರ್ಥೈಸಿರಬಹುದೆಂದು ನಮ್ಮ ಕರ್ತನು ಅವರ ಗಮನಕ್ಕೆ ತಂದನು. ಮತ್ತು ಇದೇ ರೀತಿಯ ಕುರುಡುತನದಿಂದಾಗಿ ದೇವರ ಇನ್ನೂ ಅನೇಕ ವ್ಯವಹಾರಗಳನ್ನು ಅವರುಗಳು ತಪ್ಪಾಗಿ ಅರ್ಥೈಸಿದ್ದಿರಬಹುದು ಮತ್ತು ಅವುಗಳ ಬಗ್ಗೆ ಕೆಟ್ಟದ್ದಾಗಿ ಮಾತನಾಡಿದ್ದಿರಬಹುದು; ಆದರೆ ಒಮ್ಮೆ ಅವರು ದೇವರ ಶಕ್ತಿಯು ಕೆಡುಕನ ಶಕ್ತಿಗೆ ತದ್ವಿರುದ್ಧವಾದುದೆಂದು ಪ್ರತ್ಯಕ್ಷವಾಗಿ ಕಂಡುಕೊಂಡ ಮೇಲೆ, ಅವರು ಈ ಬಗ್ಗೆ ಕೆಟ್ಟದ್ದಾಗಿ ಮಾತನಾಡಿದ ಸಂಗತಿಯು ಅವರ

ಹೃದಯಗಳು ಸ್ಪಷ್ಟವಾಗಿ ಅತ್ಯಂತ ಅಪವಿತ್ರವಾದ ಸ್ಥಿತಿಯಲ್ಲಿವೆ ಎಂಬ ಅರ್ಥವನ್ನು ನೀಡುವುದಾಗಿದೆ. ಅಜ್ಞಾನದಲ್ಲಿ ಮಾಡಿದ ಪಾಪಗಳನ್ನು ಕ್ಷಮಿಸಬಹುದಾಗಿದೆ – ಅವುಗಳು ಕ್ಷಮಿಸಲ್ಪಡುತ್ತವೆ. ಯಾಕೆಂದರೆ ಅಧಃಪತನದ ಕಾರಣ ಅಜ್ಞಾನವು ಉಂಟಾಗಿದೆ ಮತ್ತು ಯಾರು ಪತನದಲ್ಲಿ ಮತ್ತು ಅದರ ಶಾಪದಲ್ಲಿ ಭಾಗಿದಾರರಾಗಿದ್ದಾರೋ ಅವರಿಗಾಗಿಯೇ ಈಡುಬಲಿಯೊಂದನ್ನು ನೀಡಲಾಗಿದೆ. ಆದರೆ ದೇವರ ಕೃಪೆಯ ಸ್ಪಷ್ಟವಾದ ಪ್ರಕಟನೆಯ ವಿರುದ್ಧ ಮಾಡಿದ ಪಾಪವನ್ನು ದೇಹದ ಮತ್ತು ವಂಶಪಾರಂಪರ್ಯದ ಬಲಹೀನತೆಗೆ ಆರೋಪಿಸಲಾಗದು. ಆದರೆ ಅವುಗಳನ್ನು ಇಚ್ಛಾಪೂರ್ವಕವಾದ, ಕೆಡುಕಿನ ಹೃದಯದ ಪಾಪವೆಂದು ಪರಿಗಣಿಸಲಾಗುವುದು. ಇದನ್ನು ಕ್ಷಮಿಸಲಾಗದು.

ಇಚ್ಛಾಪೂರ್ವಕವಾದ, ಉದ್ದೇಶಪೂರ್ವಕವಾದ ಕೆಡಕುತನವನ್ನು ಈ ಯುಗದಲ್ಲಿಯಾಗಲೀ, ಮುಂಬರಲಿರುವ ಯುಗದಲ್ಲಿಯಾಗಲೀ ಕ್ಷಮಿಸಲಾಗದು. ದೇವರ ಯೋಜನೆಯು. ಜನರನ್ನು ತನ್ನ ಸಾಮರಸ್ಯಕ್ಕೆ ಒತ್ತಾಯಪಡಿಸುವುದಿಲ್ಲ; ಆದರೆ ಅವರನ್ನು ವಿಮೋಚಿಸಿದ ನಂತರ ಅವರೆಲ್ಲರಿಗೂ ಸತ್ಯದ ಜ್ಞಾನಕ್ಕೆ ಬರುವ ಅವಕಾಶವನ್ನು ಒದಗಿಸಿಕೊಟ್ಟು ದೇವರ ಒಳ್ಳೆಯತನಗಳನ್ನು ಪವಿತ್ರಾತ್ಮನ ಮೂಲಕ ಆತನು ಸಾಧಿಸುವ ಕಾರ್ಯಗಳಿಂದ ಕಂಡುಕೊಳ್ಳುವಂತೆ ಮಾಡುತ್ತಾನೆ; ಆಗ ಯಾರು ದೇವರ ವ್ಯವಸ್ಥೆಯೊಂದಿಗಿನ ಸಾಮರಸ್ಯದಿಂದ ಹೊರಗುಳಿಯುವುದನ್ನು ಮುಂದುವರಿಸುತ್ತಾರೋ ಅಂಥವರು ಇಚ್ಛಾಪೂರ್ವಕರಾದ ಪಾಪಿಗಳೆಂದು, ದೇವರ ಪವಿತ್ರ ಶಕ್ತಿಗೆ ಒಂದು ಜ್ಞಾನವಂತ ವಿರೋಧಿಗಳೆಂದು ಸಾಬೀತಾಗುತ್ತದೆ. ಅಂಥವರಿಗೆ ದೇವರು ತನ್ನ ಕೃಪಾನುಗ್ರಹವನ್ನು ಮುಂದುವರಿಸುವುದಿಲ್ಲ.

ಫರಿಸಾಯರು, ಸದ್ದುಕಾಯರು ದೇವರ ಪವಿತ್ರಶಕ್ತಿಯನ್ನು ಕೆಡುಕಿನ ಶಕ್ತಿ ಎಂದು ದೂಷಿಸಿದರ ಪರಿಣಾಮವಾಗಿ ಅವರನ್ನು ಎರಡನೆಯ ಮರಣಕ್ಕೆ ಒಳಗಾಗುವರೆಂಬುದಾಗಿ ಸ್ಪಷ್ಟವಾಗಿ ತಿಳಿದುಕೊಂಡಿದ್ದರೊ ಇಲ್ಲವೊ ಎಂಬುದರ ಬಗ್ಗೆ ನಾವು ತೀರ್ಮಾನಿಸಲಾರೆವು. ಯಾಕೆಂದರೆ ನಾವುಗಳು ಅವರ ಹೃದಯಗಳನ್ನು ಓದಲು ಸಾಧ್ಯವಿಲ್ಲ ಮತ್ತು ನಮ್ಮ ಕರ್ತನು ಈ ಸಂಬಂಧದಲ್ಲಿ ಆ ವಿಷಯವನ್ನು ಪೂರ್ಣವಾಗಿ ಪ್ರಸ್ತಾಪಿಸಿಲ್ಲ. ಖಚಿತವಾಗಿ, ಅವರು ಸ್ಪಷ್ಟವಾದ ಬೆಳಕಿನ ವಿರುದ್ಧವಾಗಿ, ದೇವರ ಶಕ್ತಿಯ ವಿರುದ್ಧವಾಗಿ ಪೂರ್ಣವಾದ ಪಾಪಮಾಡಿದವರಾಗಿದ್ದಾರೆ ಎಂದರೆ ಅವರ ಬಗ್ಗೆ ನಮಗೆ ಮುಂದಿನ ಭರವಸವೇನೂ ಇಲ್ಲ, ಆದರೆ ಕೇವಲ ಅವರುಗಳು ದೇವರ ಕೃಪೆಯನ್ನು ಇಚ್ಛಾಪೂರ್ವಕವಾಗಿ ನಿರಾಕರಿಸಿರುವುದರಿಂದ ಎರಡನೆಯ ಮರಣದಲ್ಲಿ ಹಾಳಾಗುತ್ತಾರೆ ಎಂದೆಣಿಸಿಕೊಳ್ಳಬಹುದು. ಆದರೆ, ಅವರು ಬೆಳಕಿನ ಹಾಗೂ ಜ್ಞಾನದ ಒದಗಿಸುವಿಕೆಯನ್ನು ಸಾಕಷ್ಟು ಪಡಕೊಳ್ಳದೇ ಹೋದಲ್ಲಿ, ಪೂರ್ಣ ಪರೀಕ್ಷೆಗೆ ಅವರನ್ನು ಸಿದ್ಧಪಡಿಸುವಂತೆ ದೇವರ ಪವಿತ್ರ ಶಕ್ತಿಯೊಂದಿಗೆ ಬೇಕಾದಷ್ಟು ಸಂಪರ್ಕ ಹೊಂದಿಕೊಳ್ಳದೇ ಹೋದಲ್ಲಿ, ಅವರು ಪೂರ್ಣ ದಂಡನೆಯನ್ನು ಅಂದರೆ ಎರಡನೆಯ ಮರಣವನ್ನು ಅನುಭವಿಸುವ ಮುನ್ನ ಅಂತಿಮವಾಗಿ ಪೂರ್ಣ ಪ್ರಮಾಣದ ಪರೀಕ್ಷೆಗೆ ಒಳಗಾಗ ಬೇಕಾಗುತ್ತದೆ.

ಆದರೆ, ಪವಿತ್ರಾತ್ಮನ, ಸ್ಪಷ್ಟವಾದ ಬೆಳಕು ಮತ್ತು ದೈವಿಕ ಶಕ್ತಿಯ ಜ್ಞಾನಕ್ಕೆ ವಿರುದ್ಧವಾದ ಪ್ರತಿಯೊಂದು ಪಾಪವೂ ಅಕ್ಷಮ್ಯವಾದುದು. ಯಾಕೆಂದರೆ, ಅದು ಇಚ್ಛಾಪೂರ್ವಕ ವಾದುದು. ಒಂದು ಪ್ರಮಾಣದ ಬೆಳಕಿನ ವಿರುದ್ಧವಾದ ಯಾವುದೇ ಇಚ್ಛಾಪೂರ್ವಕವಾದ ಪಾಪವಾದಲ್ಲಿ, ಆಗ ಛಡಿಯೇಟುಗಳ ಶಿಕ್ಷೆಯು ಯಾವುದೇ ತಡೆಯಿಲ್ಲದೆ ಉಂಟಾಗುತ್ತವೆ. ಅದು ಹೆಚ್ಚಿನ ಪ್ರಮಾಣದಲ್ಲಿನ ಪ್ರಕಾಶದ ವಿರುದ್ಧವಾದ ಹಾಗೂ ದೇವರ ಪವಿತ್ರ ಶಕ್ತಿಯ ಸಂಬಂಧದಲ್ಲಿನ ದೇವರ ಹೆಚ್ಚಿನ ಕೃಪೆಯ ವಿರುದ್ಧವಾದ ಇಚ್ಛಾಪೂರ್ವಕ ಪಾಪವಾದಲ್ಲಿ, ಹೆಚ್ಚಿನ ಮಟ್ಟದ ಬಾಸುಂಡೆಗಳಿಗೆ ಕಾರಣವಾಗುತ್ತದೆ; ಆದರೆ ಅಪರಾಧವು ಸ್ಪಷ್ಟವಾದ ಸರಿ ತಪ್ಪುಗಳ ಭಾವನೆಗಳನ್ನು ಒಳಗೊಂಡಿದ್ದರೆ ಮತ್ತು ಅದು ಪೂರ್ಣವಾಗಿದ್ದು ದೇವರ ಪವಿತ್ರವಾದ ಶಕ್ತಿಗೆ ವಿರುದ್ಧವಾದದ್ದು ಎಂದು ತಿಳಿದು ಬಂದಲ್ಲಿ, ಅದರ ಅರ್ಥ ನಿತ್ಯನಿರಂತರವಾದ ನಾಶನ, ಪಾಪದ ತುಂಬು ಸಂಬಳ, ಎರಡನೆಯ ಮರಣ, ಈಡು ಬಲಿಯ ಮೂಲಕ ಸಂಪಾದಿಸಿದ ಪಾಪ ಕ್ಷಮಾಪಣೆಯು ಪತನದ ಕಾರಣ ಉಂಟಾಗುವ ಅಜ್ಞಾನ ಮತ್ತು ಬಲಹೀನತೆಗಳ ನಿಮಿತ್ತವಾದವುಗಳಾಗಿದ್ದು ಅವುಗಳು ಬೆಳಕಿನ ವಿರುದ್ಧವಾದ ವ್ಯಕ್ತಿಗತವೂ, ಇಚ್ಛಾಪೂರ್ವಕವೂ, ಉದ್ದೇಶಪೂರ್ವಕವೂ ಆದ ಪಾಪಗಳಿಗೆ ಅಲ್ಲ. ಹೀಗಿದ್ದಾಗ್ಯೂ, ಸರಿಯಾದ ತತ್ವಗಳ ಅಜ್ಞಾನ ಅಥವಾ ಬಲಹೀನತೆಗಳು ಬೆರತಂತೆ ಇಲ್ಲವೇ ಎರಡನ್ನೂ ಉಳ್ಳ ಇಚ್ಛಾಪೂರ್ವಿಕೆಯನ್ನು ಕೆಲಮಟ್ಟದಲ್ಲಿ ಒಳಗೊಂಡ ಅನೇಕ ಪಾಪಗಳು ಇವೆ ಎಂಬುದನ್ನು ನಾವು ಮರೆಯಬಾರದು. ಅದರ ಅಜ್ಞಾನ ಮತ್ತು ಬಲಹೀನತೆಯ ಅನುಪಾತಕ್ಕೆ ತಕ್ಕಂತೆ ಯಾವುದೇ ಪಾಪವೂ ಕ್ರಿಸ್ತನ ಮೂಲಕವಾದ ದೇವರ ಕೃಪೆಯಿಂದ, ಆತನ ಈಡುಬಲಿಯ ಮೇಲಿನ ನಂಬಿಕೆ ಮತ್ತು ಅದನ್ನು ಸ್ವೀಕರಿಸುವ ದೆಸೆಯಿಂದ ಕ್ಷಮಾರ್ಹವಾದುದು; ಯಾವುದೇ ಪಾಪವು ಇಚ್ಛಾಪೂರ್ವಕವೂ, ಉದ್ದೇಶಪೂರ್ವಕವೂ ಆಗಿರುವ ಅನುಪಾತದಲ್ಲಿ ಅಕ್ಷಮ್ಯವಾಗಿದೆ – ಆ ಪಾಪದಲ್ಲಿ ಯಾವುದೇ ಕ್ಷಮಾರ್ಹವಾದ ಗುಣವು ಕಂಡುಬರುವವರೆಗೆ ಛಾವಟಿ ಏಟಿನ ಶಿಕ್ಷೆಯ ಮೂಲಕವೇ ಅದರ ದಂಡ ತೆರಬೇಕಾಗುತ್ತದೆ; ಅಂದರೆ ಶಿಕ್ಷೆಕೊಟ್ಟು ಕ್ಷಮಿಸಿ ಬಿಡುವುದು.

ಯಾವುದೇ ಕ್ಷಮಾರ್ಹ ಗುಣವು ಕಂಡುಬಾರದಿದ್ದಲ್ಲಿ ಮರಣ, ನಾಶನಗಳುಂಟಾಗುತ್ತವೆ.

ಈ ರೀತಿಯಲ್ಲಿ ಎಲ್ಲಾ ಇಚ್ಛಾಪೂರ್ವಕವಾದ ಪಾಪಗಳು ಬೆಳಕಿನ ವಿರುದ್ಧ, ಪವಿತ್ರವಾದ ಸತ್ಯಾತ್ಮನ ವಿರುದ್ಧವಾದ ಪಾಪಗಳಾಗಿವೆ ಮತ್ತು ಅಂಥಾಃ ಪಾಪಗಳಿಗೆ ಕ್ಷಮಾಪಣೆ ಎಂಬುದೇ ಇಲ್ಲ.

### ದೇವರಾತ್ಮನು ಫಿಲಿಪ್ಪನಿಗೆ – ನೀನು ಆ ರಥದ ಹತ್ತಿರ ಹೋಗಿ ಅದರ ಸಂಗಡಲೇ ನಡೆ ಎಂದು ಹೇಳಿದನು – ಅ.ಕೃ. 8:29

**The Spirit said unto Philip Go Near, and Join Thyself to the Chariot** - Acts. 8:29

ಈ ಮಾತುಗಳಿಗಾಗಲೀ, ಈ ಸನ್ನಿವೇಶವಾಗಲೀ ಮತ್ತೊಬ್ಬ ದೇವರ ಅಗತ್ಯತೆಯ ಬಗ್ಗೆ ಯಾವುದೇ ರೀತಿಯಲ್ಲಿ ಸಂಬಂಧಿಸಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ನಾವು ದೇವರು ಪವಿತ್ರಾತ್ಮನ ಮೂಲಕವಾಗಿ, ಆತನ ಪ್ರಭಾವದಿಂದ, ಶಕ್ತಿಯಿಂದ ಫಿಲಿಪ್ಪನನ್ನು ಕುಂಚಕಿಯ ರಥದ ಬಳಿಗೆ ಹೋಗುವಂತೆ ನಿರ್ದೇಶಿಸಿದನು ಮತ್ತು ಸೂಚಿಸಿದನು ಎಂದು ಅರಿತುಕೊಳ್ಳುವಾಗ, ಎಲ್ಲಾ ಅಗತ್ಯಗಳೂ ಪೂರೈಸಲ್ಪಟ್ಟಿವೆ ಮತ್ತು ಅವುಗಳು ದೇವರ ಶೇಷಭಾಗಗಳೊಂದಿಗೆ ಸಾಮರಸ್ಯದಲ್ಲಿವೆ ಎಂದು ಕಂಡುಬರುತ್ತದೆ. ದೇವರಾತ್ಮನು ಫಿಲಿಪ್ಪನಿಗೆ ಯಾವ ರೀತಿಯಲ್ಲಿ ನಿರ್ದೇಶಿಸಿದನು ಎಂದು ನಮಗೆ ತಿಳಿಸಲ್ಪಟ್ಟಿಲ್ಲ. ಈ ಬಗ್ಗೆ ನಾವು ಊಹಿಸಿಕೊಳ್ಳುವುದು ಅವಿವೇಕವೆನಿಸುತ್ತದೆ. ದೇವರ ಬಳಿ ತನ್ನ ಇಚ್ಛೆಗಳನ್ನು ತನ್ನ ಜನರಿಗೆ ತಿಳಿಸುವಂಥಾಃ ಮಿತಿಯಿಲ್ಲದ ಮಾರ್ಗಗಳಿವೆ (39ನೇ ವಚನದೊಂದಿಗೆ ಹೋಲಿಸಿರಿ)

### "ದೇವರಾತ್ಮನು ಅವನಿಗೆ ಇಗೋ, ಮೂವರು ಮನುಷ್ಯರು ನಿನ್ನನ್ನು ವಿಚಾರಿಸುತ್ತಾರೆ. . . . ಎಂದು ಹೇಳಿದನು" – ಅ.ಕೃ. 10 :19

**The Spirit said unto Him, Behold, Three Men Seek Thee** - Acts. 10:19

ಮುಂಚಿನ ವಿರುದ್ಧ ಹೇಳಿಕೆಯಂತೆ ಇಲ್ಲಿಯೂ ಅದೇ ಉತ್ತರ ಅನ್ವಯವಾಗುತ್ತದೆ. ಯಾವ ರೀತಿಯಲ್ಲಿ ಶಕ್ತಿಯು, ಪ್ರಭಾವವು, ದೇವರ ಆತ್ಮನು ಪೇತ್ರನಿಗೆ ಸಂಬೋಧಿಸಿತೆಂಬುದು ನಮಗೆ ಅಪ್ರಧಾನವಾದುದು. ದೇವರು ಅಪೋಸ್ತಲನಿಗೆ ಸ್ಪಷ್ಟವಾಗಿ ಅರ್ಥವಾಗುವ ರೀತಿಯಲ್ಲಿ ನಿರ್ದೇಶಿಸಿದನು ಎಂಬುದಷ್ಟೇ ನಮಗೆ ಸಾಕು. ಇದು ಸರಿಯಾದ ರೀತಿಯಲ್ಲಿ ಈ ಹೇಳಿಕೆಯ ಮುಂದಿನ ಪ್ರಕರಣದಲ್ಲಿ ನಿರೂಪಣೆಯಾಗಿ ಕಂಡುಬರುತ್ತದೆ.

### ಪವಿತ್ರಾತ್ಮನು – "ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು" – ಅ.ಕೃ. 13:02

**The Holy Ghost said, Separate me Barnabas and Saul For The Work Whereunto I have Called Them** - Acts. 13.2

ಇತರ ಕಡೆಗಳಲ್ಲಿ ಇದ್ದಂತೆ ಇಲ್ಲಿಯೂ ಪವಿತ್ರಾತ್ಮನು ವ್ಯಕ್ತಿಗತವಾದ ಮತ್ತು ಪುರುಷ ರೂಪದ ಹೇಳಿಕೆಯನ್ನು ವ್ಯಕ್ತಪಡಿಸುತ್ತಾನೆ. ಖಂಡಿತವಾಗಿಯೂ ಇದಕ್ಕೆ ಯಾವ ಅಭ್ಯಂತರವೂ ಇರದು. ಯಾಕೆಂದರೆ ದೇವರು ಎಲ್ಲಾ ಕಡೆಯಲ್ಲಿಯೂ ತನ್ನ ಸಂಬಂಧವಾಗಿಯೂ ವ್ಯಕ್ತಿಗತವಾದ ಮತ್ತು ಪುಲ್ಲಿಂಗ ರೂಪದ ಹೇಳಿಕೆಗಳನ್ನು ಉಪಯೋಗಿಸುತ್ತಾ ಬಂದಿದ್ದಾನೆ. ಇಲ್ಲಿ ಯೆಹೋವನ ಶಕ್ತಿಯ ಬಗ್ಗೆ ಮತ್ತು ಆತನು ನೀಡಿದ ಮಾಹಿತಿಯ ಬಗ್ಗೆ ಮಾತನಾಡುವುದು ಕಡಿಮೆ ಸೂಕ್ತವೆನಿಸುವುದಿಲ್ಲ. ಯಾವ ರೀತಿಯಲ್ಲಿ ಪವಿತ್ರಾತ್ಮನು ಸಂಪರ್ಕಿಸಿದನೋ, 'ಹೇಳಿದನೋ' ಪೌಲ ಬಾರ್ನಬರನ್ನು ಪ್ರತ್ಯೇಕಿಸುವಂತೆ ಸೂಚಿಸಿದನೋ ನಮಗೆ ತಿಳಿಸಲ್ಪಟ್ಟಿಲ್ಲ. ದೇವರ ಎಲ್ಲಾ ಪ್ರತಿಷ್ಠೆಗೊಂಡ ಜನರು ದೇವರ ಸೇವೆಗಾಗಿ, ಸತ್ಯದ ಸೇವಕರಾಗುವಂತೆ ಪವಿತ್ರಾತ್ಮನಿಂದಲೇ ಕರೆಯಲ್ಪಟ್ಟವರು ಎಂಬುದು ಹೇಗೂ ನಮಗೆ ಗೊತ್ತಿದೆ. ಅವರವರ ಯೋಗ್ಯತೆಗೆ ಮತ್ತು ಅವಕಾಶಗಳಿಗೆ ತಕ್ಕಂತೆ ಅವರು ಪ್ರಾಮಾಣಿಕರೂ, ಕ್ರಿಯಾಶೀಲ ಸೇವಕರೂ ಆಗಿರಬೇಕಾಗುತ್ತದೆ. ಅಂಥವರೆಲ್ಲರಿಗೆ ಪವಿತ್ರಾತ್ಮನು "ನೀನೇಕೆ ಇಲ್ಲಿ ಸೋಮಾರಿಯಾಗಿ ನಿಂತಿದ್ದೀ? . . . ನೀನೂ ದ್ರಾಕ್ಷೇ ತೋಟಕ್ಕೆ ಹೋಗು"ಎಂಬ ಸರ್ವ ಸಾಮಾನ್ಯವಾದ ಕರೆಯೊಂದನ್ನು ನೀಡುವುದಾಗಿದೆ. ವಿಶೇಷವಾದ ಅರ್ಹತೆ ಮತ್ತು ಅನುಕೂಲಕರ ಅವಕಾಶಗಳು ಇವುಗಳನ್ನು ಸತ್ಯದ ಸೇವೆಯಲ್ಲಿ ಹೆಚ್ಚಾದ ಸಾರ್ವಜನಿಕ ಕಾರ್ಯಕ್ಕಾಗಿ ದೇವರ ವಿಶೇಷವಾದ ಕರೆ ಎಂಬುದಾಗಿ ಗ್ರಹಿಸಿಕೊಳ್ಳಬೇಕು. ಆದರೆ ಪೌಲ ಮತ್ತು ಮತ್ತು ಬಾರ್ನಬರ ಮೇಧಾಶಕ್ತಿಗಳನ್ನು ಅದು ಅವರಲ್ಲಿರುವ ವಿಶೇಷವಾದ ಮೇಧಾಶಕ್ತಿಗಳಿಗನುಸಾರವಾದ ಸೇವೆಗೆ ಪವಿತ್ರಾತ್ಮನ ಸಾಮಾನ್ಯ ಕರೆಯ ಒತ್ತಡವನ್ನಾಗಿ ಪರಿಗಣಿಸುವಾಗ, ಆ ಸಮಯದಲ್ಲಿ ಪವಿತ್ರಾತ್ಮನು ಸಭೆಯಲ್ಲಿ ಕಾರ್ಯಾಚರಣೆಯಲ್ಲಿರುವ ಒಂದು ವರವನ್ನು ಮಾತ್ರವೇ ಅವರಿಂದ ಉಪಯೋಗಿಸಿರುವ ಸಾಧ್ಯತೆ ಇದೆ, ಇದು ಪ್ರವಾದನೆಯ ವರವಾಗಿದ್ದಿರಬಹುದು ಮತ್ತು ಪೌಲ ಬಾರ್ನಬರ ಬಗ್ಗೆ ಸೂಚಿಸುವಂತೆ – **"ಅಂತಿಯೋಕ್ಯದಲ್ಲಿದ್ದ ಸಭೆಯೊಳಗೆ ಪ್ರವಾದಿಗಳೂ ಬೋಧಕರೂ ಇದ್ದರು"** (ಅ.ಕೃ. 13:1) ಎಂದು ನಾವು ಓದುತ್ತೇವೆ.

ಗಲಾತ್ಯ 1:1ರಲ್ಲಿ ನಾವು ಹೇಗೂ ಪೌಲನು ದೇವರ ಸೇವೆಗೆ ತನ್ನ ಕರೆಯ ಬಗ್ಗೆ ಗಲಾತ್ಯದವರಿಗೆ ಬರೆದ

**"ಮನುಷ್ಯರ ಕಡೆಯಿಂದಾಗಲೀ ಮನುಷ್ಯರ ಮುಖಾಂತರದಿಂದಾಗಲೀ ಅಪೋಸ್ತಲನಾಗಿರದೆ ಯೇಸುಕ್ರಿಸ್ತನ ಮುಖಾಂತರವೂ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ತಂದೆಯಾದ ದೇವರಿಂದಲೂ ಅಪೋಸ್ತಲ ಉದ್ಯೋಗವನ್ನು ಹೊಂದಿ..."** ಎಂಬ ಮಾತುಗಳನ್ನು ನೆನಪಿಗೆ ತಂದುಕೊಳ್ಳಬೇಕಾಗುತ್ತದೆ. ಇಲ್ಲಿ ಆತನು ತನ್ನ ಅಧಿಕಾರವು ತಂದೆಯಿಂದಲೂ, ಮಗನಿಂದಲೂ ಬಂದಿದೆ ಎಂಬುದಾಗಿ ಪ್ರಕಟಿಸುತ್ತಾನೆ. ಆದರೆ ಆತನು ಪವಿತ್ರಾತ್ಮನನ್ನು ಸಮಾನನಾದ ಮತ್ತೊಬ್ಬ ದೇವರು ಎಂಬುದನ್ನು ಉಪೇಕ್ಷಿಸುತ್ತಾನೆ. ಒಂದು ವೇಳೆ ಪವಿತ್ರಾತ್ಮನೂ ಒಬ್ಬ ವ್ಯಕ್ತಿಯಾಗಿದ್ದರೆ ಮತ್ತು ಆತನು ಸತ್ಯದ ಸೇವಕರನ್ನು ನೇಮಿಸುವ ವಿಶೇಷವಾದ ಅನುಗ್ರಹ ಹೊಂದಿದವನಾಗಿದ್ದರೆ (ಇದು ಸಾಮಾನ್ಯವಾದ ಹೇಳಿಕೆಯಾಗಿದೆ) ಇಲ್ಲಿ ಪವಿತ್ರಾತ್ಮನ ಹೆಸರನ್ನು ಹೇಳದೇ ಇರುವುದು ಸಂಪೂರ್ಣವಾಗಿ ಅವಿವೇಕತನ, ಅಸಮಂಜಸ ಮತ್ತು ಅನುಚಿತವೆನಿಸುತ್ತದೆ. ಆದರೆ ನಮಗೆ ಪವಿತ್ರಾತ್ಮನ ಬಗ್ಗೆ ಸರಿಯಾದ ದೃಷ್ಟಿಕೋನವಿರುವುದಾದರೆ ಅಂದರೆ ಅದೊಂದು ಆತ್ಮ, ಪ್ರಭಾವ, ಶಕ್ತಿ, ತಂದೆಯ ಮತ್ತು ಮಗನ ಅಥವಾ ಇಬ್ಬರೂ ಸಂಯೋಗವಾದ ಅಧಿಕಾರ ಹೊಂದಿರುವುದು – ಯಾಕೆಂದರೆ ಅವರಿಬ್ಬರ ಉದ್ದೇಶ ಒಂದೇ ಎಂಬುದು ತಿಳಿದಿದ್ದರೆ ಎಲ್ಲವೂ ಸಾಮರಸ್ಯವುಳ್ಳದ್ದೂ, ವಿವೇಚನಾ ಪೂರ್ವಕವಾದುದೂ ಆಗುತ್ತವೆ.

## "ಅದು ಪವಿತ್ರಾತ್ಮನಿಗೂ ನಮಗೂ ವಿಹಿತವಾಗಿ ತೋರಿತು" – ಅ.ಕೃ. 15:28

## "It seemed Good to the Holy Spirit and to Us" - Acts. 15:28

ಜನ್ಮತಃ ಯೆಹೂದ್ಯರಲ್ಲದವರು ಯೆಹೂದ್ಯರ ಮಾತಾಚಾರಣೆಗಳನ್ನು ಅಥವಾ ಧರ್ಮಶಾಸ್ತ್ರದ ನಿಯಮಗಳನ್ನು ಅನುಸರಿಸುವುದರ ಬಗ್ಗೆ ಅಂತಿಯೋಕ್ಯ ಸಭೆಯ ಪ್ರಶ್ನೆಗಳಿಗೆ ಉತ್ತರಿಸುವುದಕ್ಕಾಗಿ ಅಪೋಸ್ತಲರುಗಳು ಒಂದು ಸಮ್ಮೇಳನವಾಗಿ ಕೂಡಿಬಂದರು. ಅವರು ಕೈಕೊಂಡ ನಿರ್ಣಯದ ಬಗ್ಗೆ ನಮಗೆ ಭರವಸೆ ಕೊಡುವುದೇನೆಂದರೆ ಅದು ಕೇವಲ ಅಪೋಸ್ತಲರ ನಿರ್ಣಯವಾಗಿರಲಿಲ್ಲ; ಇನ್ನೂ ಹೆಚ್ಚಾಗಿ ಅವರ ನಿರ್ಣಯವು ಯಾವುದೋ ಒಂದು ರೀತಿಯಲ್ಲಿ ದೇವರಿಂದ ಸಮರ್ಥಿಸಲ್ಪಟ್ಟಿತ್ತು. ಅವರಿಗೆ ನಮ್ಮ ಈ ನಿರ್ಣಯವು ಕರ್ತನ ಮನಸ್ಸಿನಂತಿದೆ ಅದು ಕರ್ತನ ಆತ್ಮದ್ದಾಗಿದೆ, ಕರ್ತನ ಚಿತ್ತವೇ ಆಗಿದೆ ಎಂಬ ಸಾಕ್ಷಿ ಅವರಿಗಿತ್ತು.

ಆ ಸಮ್ಮೇಳನದ ಮುಖ್ಯ ವಕ್ತಾರನಾಗಿದ್ದ ಅಪೋಸ್ತಲನಾದ ಯಾಕೋಬನು ಇದರಲ್ಲಿ ದೇವರ ಮನಸ್ಸು ಅಥವಾ ಚಿತ್ತವನ್ನು ಯಾವ ರೀತಿಯಲ್ಲಿ ನಿಶ್ಚಯಪಡಿಸಿಕೊಳ್ಳಲಾಯಿತು ಎಂಬುದರ ಬಗ್ಗೆ ಸುಳಿವನ್ನು ನೀಡುತ್ತಾನೆ: ಮುಂದೆ ಇದೇ ಪದ್ಧತಿಯನ್ನು ಸಮಗ್ರ ಸಭೆಗೂ ವಿಧಿಸಿದ್ದಾನೆ ಮತ್ತು ನಂಬಿಗಸ್ಥರು ಇಂದಿಗೂ ಅನುಸರಿಸುತ್ತಿದ್ದಾರೆ. ಅಂದರೆ ದೇವರ ಅನುಗ್ರಹವೆಂಬ ಬೆಳಕಿನ ಸಹಾಯದಿಂದ ಪರಿಶುದ್ಧ ಗ್ರಂಥಗಳಲ್ಲಿನ ಸತ್ಯತೆಯನ್ನು ಹುಡುಕುತ್ತಿರುವವರು ಅದನ್ನೇ ಅನುಸರಿಸುವುದನ್ನು ನಾವು ನೋಡುತ್ತೇವೆ. ಈ ಪ್ರಸ್ತಾಪದಲ್ಲಿ ಆತನು ಪೇತ್ರನ ವಿಶೇಷವಾದ ಭಾಗ್ಯಕರ ಮುಂದಾಳತ್ವವನ್ನು ಪುನರಾವಲೋಕಿಸುವ ಮೂಲಕ ಕರ್ತನ ಮನಸ್ಸನ್ನು ಕಾರಣವನ್ನಾಗಿ ಮಾಡುತ್ತಾನೆ – ಆತನನ್ನು ಅನ್ಯಜನರಿಂದ ಮೊಟ್ಟಮೊದಲಿಗೆ ಮತಾಂತರ ಗೊಂಡ ಕೊರ್ನೇಲ್ಯನ ಬಳಿಗೆ ಕಳುಹಿಸಿಕೊಡುತ್ತಾನೆ – ಆತನು ಇನ್ನೂ ನೆರವೇರದ ಪ್ರವಾದನೆಗೆ ಮನವಿ ಮಾಡುವುದರ ಮೂಲಕ ಇದನ್ನು ಅನುಸರಿಸುತ್ತಾನೆ ಮತ್ತು ಇದನ್ನು ಆತನು ಉಲ್ಲೇಖಿಸುತ್ತಾನೆ. ಇವುಗಳಿಂದ ಬಂದ ನಿರ್ಣಯಕ್ಕೆ ಆತನೂ ಮತ್ತು ಎಲ್ಲಾ ಸಭೆಯೂ ಇದು ಪವಿತ್ರಾತ್ಮನ ಬೋಧನೆಯಾಗಿದೆ ಎಂದು ಒಪ್ಪಿಕೊಳ್ಳುತ್ತವೆ ಅ.ಕೃ. 15:13–18ನ್ನು ಪರಿಶೀಲಿಸಿರಿ.

## "ಆಸ್ಯ ಸೀಮೆಯಲ್ಲಿ ವಾಕ್ಯವನ್ನು ಹೇಳಬಾರದೆಂದು ಪವಿತ್ರಾತ್ಮನಿಂದ ತಡೆಯುಂಟಾಯಿತು" – ಅ.ಕೃ. 16:6

## "Forbidden of the Holy Ghost to Preach The Word in Asia" - Acts. 16:6

ಈ ಹೇಳಿಕೆಯ ಶೈಲಿಯನ್ನು ನೋಡುವಾಗ ಪವಿತ್ರಾತ್ಮನು ಒಬ್ಬ ವ್ಯಕ್ತಿಯಾಗಿದ್ದಾನೆ, ಅವನು ಮಾತನಾಡುತ್ತಾನೆ ಮತ್ತು ಅಡ್ಡಿಪಡಿಸುತ್ತಾನೆ ಮುಂತಾದ ಅರ್ಥ ಕೊಡುವಂತೆ ಕಂಡುಬರುತ್ತದೆ. ಆದರೆ ಈ ಸನ್ನಿವೇಶಕ್ಕನುಸಾರವಾಗಿ ಈ ವಾಕ್ಯವನ್ನು ಪರಿಶೀಲಿಸುವಾಗ ನಾವು ಈ ಪ್ರಸ್ತಾಪದ ಬಗ್ಗೆ ತಿಳಿದಿರುವುದಕ್ಕೆ ಎಲ್ಲವೂ ಸರಿಯಾಗಿಯೇ ಇದೆ ಮತ್ತು ಪವಿತ್ರಾತ್ಮನು ಪವಿತ್ರ ಪ್ರಭಾವವಾಗಿದ್ದಾನೆ ಅಥವಾ ಯೆಹೋವ ದೇವರ ಮತ್ತು ಕರ್ತನಾದ ಯೇಸುವಿನ ಶಕ್ತಿಯಾಗಿದ್ದಾನೆ ಎಂಬ ಆಲೋಚನೆಯನ್ನು ಮತ್ತಷ್ಟು ಸಮರ್ಥಿಸುತ್ತದೆ ಮತ್ತು ಇದರ ಮೂಲಕವಾಗಿ ತಂದೆಯ ಮತ್ತು ಮಗನ ಚಿತ್ತವು ಪ್ರತಿಷ್ಠೆ ಹೊಂದಿದವರ ಗಮನಕ್ಕೆ ಅದು ಯಾವುದೇ ಪ್ರಕ್ರಿಯೆಯಾಗಿರಲಿ ಅದರ ಮೂಲಕ ತರುವುದಾಗಿದೆ ಎಂದು ತಿಳಿದುಬರುತ್ತದೆ. ಅಪೋಸ್ತಲರಾಗಲೀ ಅವರ ಸಂಗಡಿಗರಾಗಲೀ ಯಾವ ರೀತಿಯಲ್ಲಿ ಆಸ್ಯ ಸೀಮೆಯಲ್ಲಿ

ದೇವರ ವಾಕ್ಯವನ್ನು ಸಾರಬಾರದೆಂದು ನಿರ್ಧಿಷ್ಟವಾಗಿ ನಿಷೇಧಿಸಲಾಗಿತ್ತೆಂದು ನಮಗೆ ಮಾಹಿತಿ ಇಲ್ಲ. ಆದರೆ ಸಹಜವಾಗಿ ಅವರನ್ನು ತಡೆಹಿಡಿಯಲಾಯಿತು ಮತ್ತು ಆಸ್ಯ ಸೀಮೆಗೆ ಹೋಗಲು ಅನುಮತಿಸಲಿಲ್ಲ. ಅಲ್ಲಿ ಯಾವುದೇ ಅನಾನುಕೂಲ ಸಂಧರ್ಭಗಳು ಇದ್ದಿರಬಹುದು. ಅವರನ್ನು ಯಾವ ರೀತಿಯಲ್ಲಿ ಅಡ್ಡಿಪಡಿಸಲಾಯಿತು ಎಂಬುದು ನಮಗೆ ಬೇಕಿಲ್ಲ ; ಆದರೆ ಇದರಿಂದ ನಮಗೆ ದೊರೆಯುವ ಪಾಠವೇನೆಂದರೆ, ದೇವರು ತಾನೇ ತನ್ನ ಕಾರ್ಯಗಳನ್ನು ನಿರ್ದೇಶಿಸುತ್ತಾನೆ ಮತ್ತು ಅಪೋಸ್ತಲರಿಗೆ ಮಾರ್ಗದರ್ಶನ ನೀಡುವುದು ದೇವರ ಮೇಲ್ವಿಚಾರಣೆಗೆ ಒಳಪಟ್ಟಿದೆ ಎಂಬುದು. ಅವರುಗಳು ದೇವರಾತ್ಮನ ಮೂಲಕವಾಗಿ ನಿರ್ದೇಶಿಸಲ್ಪಟ್ಟರು; ದೇವರು ಅವರನ್ನು ತನ್ನ ಸೇವಕರನ್ನಾಗಿ ಉಪಯೋಗಿಸಲು ತನ್ನ ಅದೃಶ್ಯವಾದ ಶಕ್ತಿಯನ್ನು ಉಪಯೋಗಿಸಿದನು.

ಯಾವುದೇ ಸಂದರ್ಭದಲ್ಲಿಯಾಗಲೀ ದೇವರ ಮಾರ್ಗದರ್ಶನವು ಅಪೋಸ್ತಲನಿಗೆ ಕೇವಲ ಮಾನಸಿಕ ಅಭಿಪ್ರಾಯಕ್ಕಿಂತ ಮಿಗಿಲಾದುದು, ಇಂಥಾಃ ಒಂದು ಉದಾಹರಣೆಯು ನಮಗೆ ಒಂದು ಸನ್ನಿವೇಶದಲ್ಲಿ ಕಂಡು ಬರುತ್ತದೆ. – ರಾತ್ರಿಯ ವೇಳೆಯಲ್ಲಿ ಪೌಲನಿಗೆ ಒಂದು ದರ್ಶನವಾಯಿತು. ಅದರಲ್ಲಿ ಮೆಕದೋನ್ಯದಿಂದ ಬಂದಿದ್ದ ಒಬ್ಬ ವ್ಯಕ್ತಿಯು ಕಾಣಿಸಿಕೊಂಡು ಆತನನ್ನು ಮೆಕದೋನ್ಯಕ್ಕೆ ಬಂದು ತಮಗೆ ಸಹಾಯಮಾಡುವಂತೆ ಕೋರಿಕೊಂಡನು; **"ಅವನಿಗೆ ಆ ದರ್ಶನವಾದ ಮೇಲೆ ಆ ಸೀಮೆಯವರಿಗೆ ಸುವಾರ್ತೆಯನ್ನು ಸಾರುವುದಕ್ಕೆ ದೇವರು ನಮ್ಮನ್ನು ಕರೆದಿದ್ದಾನೆಂದು ನಾವು ನಿಶ್ಚಯಿಸಿ ಕೂಡಲೇ ಮೆಕೆದೋನ್ಯಕ್ಕೆ ಹೊರಟುಹೋಗುವ ಪ್ರಯತ್ನ ಮಾಡಿದೆವು"** (ವಚನ 9) ಎಂದು ಬರೆಯಲ್ಪಟ್ಟಿದೆ. ಈ ವಿವಿಧ ವ್ಯವಹಾರಗಳು ದೇವರು ಆ ದಿನಗಳಲ್ಲಿ ಬೋಧಿಸಿದ ಪದ್ಧತಿಗಳು ಈಗಿನ ದಿನಗಳಲ್ಲಿ ಆತನ ಸೇವಕರುಗಳಿಗೆ ನೀಡುವವುಗಳಿಗಿಂತ ಬಹಳವಾಗಿ ಬೇರೆಯಾಗಿರಲಿಲ್ಲ ಎಂದು ತೋರಿಸುತ್ತವೆ. ಈ ರೀತಿಯಾದ ಎಲ್ಲಾ ಅಪ್ರತ್ಯಕ್ಷವೂ ಮತ್ತು ಅವ್ಯಕ್ತಿಗತವಾದ ಸೂಚನೆಗಳು ಬಹುಶಃ ಪವಿತ್ರಾತ್ಮನಿಂದ ದೇವರ ಪ್ರಭಾವ ಮತ್ತು ಶಕ್ತಿಯೊಂದಿಗೆ ಸರಿಯಾದ ರೀತಿಯಲ್ಲಿ ಭೋಧಿಸಲಾಗುತ್ತಿತ್ತು. ದೇವದೂತನೊಬ್ಬನು ಪೇತ್ರನಿಗೆ ಸೆರೆಮನೆಯಲ್ಲಿ ಕಾಣಿಸಿಕೊಂಡು ದೇವರ ಸಂದೇಶವನ್ನು ತಿಳಿಸಿದ್ದು (ಅ.ಕೃ 5:19, 12:7) ಅಥವಾ ನಮ್ಮ ಕರ್ತನು ಸೌಲನಿಗೆ ದಮಸ್ಕದ ಹಾದಿಯಲ್ಲಿ ಖುದ್ದಾಗಿ ದರ್ಶನ ನೀಡಿದ್ದು (ಅ.ಕೃ. 9:4; 1 ಕೊರಿಂಥ 15:8) ಇವುಗಳು ಪವಿತ್ರಾತ್ಮನಿಗೆ ಅಥವಾ ದೇವ ಶಕ್ತಿಗೆ ಸಲ್ಲುವುದಿಲ್ಲ ಇದು ದೇವದೂತನಿಗೆ ಅಥವಾ ಕರ್ತನಿಗೆ ತಾನೇ ಸಲ್ಲುತ್ತದೆ.

## "ನಿನಗೆ ಬೇಡಿಗಳೂ ಸಂಕಟಗಳೂ ಕಾದುಕೊಂಡವೆ ಎಂದು ಪವಿತ್ರಾತ್ಮನು ಎಲ್ಲಾ ಪಟ್ಟಣಗಳಲ್ಲಿಯೂ ನನಗೆ ಖಂಡಿತವಾಗಿ ಹೇಳುತ್ತಾನೆ"

– ಅ.ಕೃ. 20:23

**"The Holy Ghost Witnesseth in Every City, saying that Bonds and Afflictions Abide me"** - Acts. 20:23

ಪವಿತ್ರಾತ್ಮನ ವ್ಯಕ್ತಿತ್ವದ ಆಲೋಚನೆಯ ಅಗತ್ಯತೆಯು ಇಲ್ಲಿ ಕಂಡುಬರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಉದಾಹರಣೆಯಾಗಿ, ದೇವರ ಪವಿತ್ರ ಚಿತ್ತ ಅಥವಾ ಆತ್ಮನು ಯೆರೂಸಲೇಮಿನಲ್ಲಿ ಕಾದುಕೊಂಡಿರುವ ಬೇಡಿಗಳು, ಸಂಕಟಗಳು ಇವುಗಳ ಬಗ್ಗೆ ಪೌಲನಿಗೆ ತಿಳಿಸುವುದಾಗಿದೆ. ಇಂಥಾಃ ಒಂದು ಸಂದರ್ಭವನ್ನು ಕೈಸರ್ಯೆಯದಲ್ಲಿ ಉಂಟಾದ ವಿವರಗಳನ್ನು ಗಮನಿಸಿರಿ. ಆ ಸಭೆಯಲ್ಲಿ ಅಗಬನೆಂಬಾತನು ಇದ್ದನು. ಆ ಕಾಲದಲ್ಲಿ ಸಾಮಾನ್ಯವಾದ ಪ್ರವಾದನಾ ವರವನ್ನು ಆತನು ಹೊಂದಿದ್ದನು. ಆತನು ಅವರ ಬಳಿಗೆ ಬಂದು **"ಪೌಲನ ನಡುಕಟ್ಟನ್ನು ತೆಗೆದು ತನ್ನ ಕೈಕಾಲುಗಳನ್ನು ಕಟ್ಟಿಕೊಂಡು – ಈ ನಡುಕಟ್ಟು ಯಾವನದೋ ಆ ಮನುಷ್ಯನನ್ನು ಯೆಹೂದ್ಯರು ಇದೇ ರೀತಿಯಾಗಿ ಯೆರೂಸಲೇಮಿನಲ್ಲಿ ಕಟ್ಟಿ ಅನ್ಯಜರ ಕೈಗೆ ಒಪ್ಪಿಸಿ ಕೊಡುವರು, ಹೀಗೆ ಪವಿತ್ರಾತ್ಮನು ಹೇಳುತ್ತಾನೆಂಬುದಾಗಿ ಹೇಳಿದನು"** (ಅ.ಕೃ.21:10–11) ಎಂದು ಬರೆಯಲ್ಪಟ್ಟಿದೆ. ಇದಕ್ಕೆ ಕಾರಣರಾದ ಸ್ನೇಹಿತರು ಮೊದಲಿಗೆ ಪೌಲನನ್ನು ಯೆರೂಸಲೇಮಿಗೆ ಹೋಗಲು ಅಡ್ಡಿಪಡಿಸ ಪ್ರಯತ್ನಿಸಿದರು. ಆದರೆ ತನ್ನ ಬಗ್ಗೆ ದೇವರ ಕಾರ್ಯಕ್ರಮಕ್ಕೆ ತಾನು ಎಂದಿಗೂ ಮಧ್ಯಪ್ರವೇಶಿಸುವುದಿಲ್ಲ ಎಂದು ಆತನು ದೃಢ ನಿರ್ಧಾರ ಕೈಕೊಂಡಿದ್ದನು; ಇದಕ್ಕೆ ವ್ಯತಿರಿಕ್ತವಾಗಿ ಆತನು **"ನಾನು ಕರ್ತನಾದ ಯೇಸುವಿನ ಹೆಸರಿನಲ್ಲಿ ಬೇಡಿಹಾಕಿಸಿಕೊಳ್ಳುವುದಕ್ಕೆ ಮಾತ್ರವಲ್ಲದೆ ಸಾಯುವುದಕ್ಕೂ ಸಿದ್ಧವಾಗಿದ್ದೇನೆ"** (ವಚನ 11) ಎಂದು ಹೇಳಿದನು (ಇಲ್ಲಿ ಅಪೋಸ್ತಲನು ಪವಿತ್ರಾತ್ಮನನ್ನು ಉಲ್ಲೇಖಿಸಲಿಲ್ಲ – ತಾನು ಪವಿತ್ರಾತ್ಮನ ಸಲುವಾಗಿ ಸಾಯಲಿಕ್ಕೂ ಸಿದ್ಧ ಎಂಬುದಾಗಿ ಹೇಳಲಿಲ್ಲ ಎಂಬುದನ್ನು ಗಮನಿಸಬೇಕು)

ಕೈಸರ್ಯೆಯದ ಸ್ನೇಹಿತರು ಅಪೋಸ್ತಲನ ಅಚಲತೆಯನ್ನು ಗ್ರಹಿಸಿ – **"ಅವನು ಒಡಂಬಡದೆ ಇದ್ದದರಿಂದ ಕರ್ತನ ಚಿತ್ತವಿದ್ದಂತೆ ಆಗಲಿ ಎಂದು ಹೇಳಿ ಸುಮ್ಮನಾದರು"** (ವ 14). ಹಾಗಾಗಿ, ಪ್ರತೀ ಸಂದರ್ಭದಲ್ಲೂ ಪವಿತ್ರಾತ್ಮದ ಸಾಕ್ಷ್ಯವನ್ನು ಆದಿ ಸಭೆ ಅಂಗೀಕರಿಸುತ್ತಿತ್ತು. ಅದು ಕರ್ತನಾದ ಯೇಸುವಿನ ಆ ಚಿತ್ತವು, ತಂದೆಯ ಚಿತ್ತವೂ ಸಹ (ಅ.ಕೃ. 21.10–14).

## ಪವಿತ್ರಾತ್ಮನು ಕೆಲವೊಂದು ಮೇಲ್ವಿಚಾರಕರನ್ನು ನೇಮಿಸಿತು

## The Holy Spirit Made Some Overseers

**"ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವುದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರ್ರಿ"** – ಅ.ಕೃ 20:28

ಮೇಲಿನ ಮಾತುಗಳನ್ನು ಎಫೆಸ ಸಭೆಯ ಹಿರಿಯರನ್ನು ಉದ್ದೇಶಿಸಿ ಹೇಳಲಾಗಿದೆ. ಅಪೋಸ್ತಲನು ಇಲ್ಲಿ ಸಭೆಯಲ್ಲಿನ ಅವರ ಸೇವಕ ಸ್ಥಾನವು ಕೇವಲ ತಾವೇ ನೇಮಿಸಿಕೊಂಡಿದ್ದಲ್ಲ ಅಥವಾ ಕೇವಲ ಸಭೆಯಿಂದ ನೇಮಿಸಲ್ಪಟ್ಟದ್ದಲ್ಲ ಅಥವಾ ಮಾನ್ಯಮಾಡಲ್ಪಟ್ಟದ್ದಲ್ಲ; ಆದರೆ ದೇವರು ತನ್ನ ಪವಿತ್ರಾತ್ಮನ ಮೂಲಕ ಅವರ ಆಯ್ಕೆಯ ಕಾರ್ಯಾಚರಣೆ ನಡೆಸಿದ್ದಾನೆ ಎಂಬ ಸತ್ಯವನ್ನು ಅವರ ಗಮನಕ್ಕೆ ತರುವವನಾಗಿದ್ದಾನೆ. ಅವರ ಅಧಿಕಾರದ ಎಲ್ಲಾ ಸುಲಕ್ಷಣಗಳೂ ದೇವರ ಮಾನ್ಯತೆಯನ್ನು ಪಡೆದಿದೆ ಮತ್ತು ಅವರು ದೇವರ ಪವಿತ್ರಾತ್ಮ ಅಥವಾ ಪ್ರಭಾವದ ಮಾರ್ಗದರ್ಶನದಲ್ಲಿ, ನಿದರ್ಶನದಲ್ಲಿ ನೇಮಕವಾದ ದೆಸೆಯಿಂದ ಸಭೆಯ ಸೇವಕರಾಗಿದ್ದಾರೆ ಮತ್ತು ಅವರ ಆಯ್ಕೆಯ ಸಂಬಂಧದಲ್ಲಿ ಇತರ ವಿಚಾರಗಳು ತಳ್ಳಿಹಾಕಲ್ಪಟ್ಟಿವೆ ಎಂಬ ದೃಷ್ಟಿಕೋನವುಳ್ಳ ಸತ್ಯತೆಯನ್ನು ಅವರು ಗ್ರಹಿಸಿಕೊಳ್ಳುವಂತೆ ಆತನು ಮಾಡಿದ್ದಾನೆ. ಹೀಗೆ ಮತ್ತೊಂದು ಸ್ಥಳದಲ್ಲಿ. ಅಪೋಸ್ತಲನು ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ – **"ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು, ಸರ್ವರಲ್ಲಿಯೂ ಸರ್ವ ಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ. ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿವೆ. . . . ದೇವರು ತನ್ನ ಸಭೆಯಲ್ಲಿ ಮೊದಲು ಅಪೋಸ್ತಲರನ್ನು, ಎರಡನೆಯದಾಗಿ ಪ್ರವಾದಿಗಳನ್ನು, ಮೂರನೆಯದಾಗಿ ಉಪದೇಶಕರನ್ನೂ ಇಟ್ಟಿದ್ದಾನೆ. . .** (1 ಕೊರಿಂಥ 12:6,7,28) ಎಂದು ಹೇಳುವವನಾಗಿದ್ದಾನೆ.

ಈ ಹೇಳಿಕೆಯಲ್ಲಿ ಅಪೋಸ್ತಲನು ಸಭೆಯ ಸೇವಕರ ಎಲ್ಲಾ ನೇಮಕಾತಿಗಳೂ ದೇವರದ್ದಾಗಿದೆ, ದೇವರಿಂದ ಇಲ್ಲವೇ ಆತನ ಪವಿತ್ರಾತ್ಮನ ಪ್ರಕಟನೆಯ ಮೂಲಕವಾಗಿ ಮಾಡಲ್ಪಟ್ಟಿವೆ ಎಂದು ತೋರಿಸಿ ಕೊಡುವವನಾಗಿದ್ದಾನೆ – ಇದು ತಂದೆ ಮತ್ತು ಮಗನನ್ನು ಹೊರತುಪಡಿಸಿದ ಪ್ರತ್ಯೇಕವಾದ ಪವಿತ್ರಾತ್ಮನ ಕಾರ್ಯವಲ್ಲ. ಕ್ರಿಸ್ತನಲ್ಲಿರುವ ದೇವರು ತನ್ನ ಸ್ವಂತ ಜನರ, ಸಭೆಯ ಸಂಗತಿಗಳನ್ನು ತನ್ನ ಆತ್ಮನ ಮೂಲಕ ಮೇಲ್ವಿಚಾರಣೆ ಮಾಡುವವನಾಗಿದ್ದಾನೆ. ಆತನ ಪವಿತ್ರಾತ್ಮನು ಪ್ರಭಾವಶಾಲಿಯಾಗಿ ಮತ್ತು ಎಲ್ಲವನ್ನೂ ತಿಳಿದವನಾಗಿ ವಿಶ್ವದಾದ್ಯಂತ ಕಾರ್ಯ ಸಾಧಿಸುವವನಾಗಿದ್ದಾನೆ. ಪವಿತ್ರಾತ್ಮನು ಮತ್ತೊಬ್ಬ ವ್ಯಕ್ತಿ ಎಂಬ ಆಲೋಚನೆಯನ್ನು ಇದು ಅಲ್ಲಗಳೆಯುತ್ತದೆ ಮತ್ತು ಎಲ್ಲಾ ಕಾರ್ಯಗಳು ಪವಿತ್ರಾತ್ಮನ ಮೂಲಕವಾಗಿ ದೇವರಿಂದಲೇ ನೆರವೇರುತ್ತದೆ ಎಂದು ತೋರಿಸಿ ಕೊಡುತ್ತದೆ. ಆ ಸಭಾ ಹಿರಿಯರು ಕರ್ತನ ಸೇವೆಗಾಗಿ ತಮ್ಮನ್ನು ಪ್ರತಿಷ್ಟೆಪಡಿಸಿಕೊಂಡಿದ್ದಾರೆ ಮತ್ತು ದೇವರ ಸೇವಕರಾಗಿ, ಬೋಧಕರುಗಳಾಗಿ, ಸಭಾ ಹಿರಿಯರಾಗಿ ಅವರವರಲ್ಲಿರುವ ವಿಶೇಷವಾದ ಯೋಗ್ಯತೆ ಮತ್ತು ಮೇಧಾ ಶಕ್ತಿಯ ಮೂಲಕ ಪವಿತ್ರಾತ್ಮನ ನಿರ್ದೇಶನದಲ್ಲಿ ದೇವರ ಚಿತ್ತ, ಆತ್ಮ ಅಥವಾ ಮನಸ್ಸು ಹಾಗೂ ಉದ್ದೇಶಕ್ಕನುಸಾರವಾಗಿ ಆರಿಸಲ್ಪಟ್ಟಿದ್ದಾರೆ. ಅವರು ಈ ಹುದ್ದೆಗಳಿಗೆ ಮಾನವ ಸಾಧನತೆಗಳ ಮೂಲಕ ಕರೆಯಲ್ಪಟ್ಟವರರಾದರೂ ಅವರುಗಳು ದೇವರ ನಿರ್ದೇಶನವನ್ನು, ನೇಮಕಾತಿಯನ್ನು ಅಂಗೀಕರಿಸಿದ್ದಾರೆ ಮತ್ತು ಅದೇ ರೀತಿಯಲ್ಲಿ ತಮ್ಮ ಜವಾಬ್ಧಾರಿಗಳನ್ನು ಗ್ರಹಿಸಿಕೊಂಡಿದ್ದಾರೆ.

## ಪವಿತ್ರಾತ್ಮನು ಒಬ್ಬ ಬೋಧಕನಾಗಿದ್ದಾನೆ

## The Holy Spirit A Teacher

**"ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು ಕೂಡಾ ಪರಿಶೋಧಿಸುವವನಾಗಿದ್ದಾನೆ . . . ಇವುಗಳನ್ನು ಮಾನುಷಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ"** – 1 ಕೊರಿಂಥ 2: 10, 13.

ನಾವೀಗಾಗಲೇ ಸಲಹೆ ನೀಡಿರುವಂತೆ ಈ ವಾಕ್ಯಭಾಗವು ದೇವರ ಪವಿತ್ರಾತ್ಮನು ಅಥವಾ ದೇವರ ಮನಸ್ಸು ಆತನ ಮಕ್ಕಳಿಂದ ಅಂಗೀಕರಿಸಲ್ಪಟ್ಟಾಗ, ಅವರ ಮನಸ್ಸುಗಳನ್ನು ಆತನ ಯೋಜನೆಗಳಿಗೆ ಹೊಂದಿಸುತ್ತವೆ ಮತ್ತು ಅದರ ನೆರವೇರಿಕೆ ಸಿದ್ಧಪಡಿಸುತ್ತವೆ. ದೇವರಿಂದ ಆತನ ಸತ್ಯ ವಾಕ್ಯಗಳ ಮೂಲಕ ಪೂರ್ಣ ಸಾಮರಸ್ಯಕ್ಕೆ ಬರುವುದರಿಂದ ಮಾತ್ರವೇ ಮತ್ತು ಆತ್ಮನ ಮೂಲಕ ಅಥವಾ ಆ ಮಾತಿನ ಸತ್ಯವಾದ ಅರ್ಥದ ಮೂಲಕ ನಾವು ದೇವರ ಆಗಾಧವಾದ ಸಂಗತಿಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಇಲ್ಲಿ ಅಪೋಸ್ತಲನು ದೇವರ ಅಥವಾ ದೇವರಿಂದ ಬಂದ ಆತ್ಮನನ್ನು ನಮ್ಮಲ್ಲಿ ಕಾರ್ಯವೆಸಗುತ್ತಿರುವ ಈ ಲೋಕದ ಆತ್ಮನಿಂದ ಪ್ರತ್ಯೇಕಿಸುವುದನ್ನು ಗಮನಿಸಬಹುದು. ಈ ಲೋಕದ ಆತ್ಮನು ಸಾಮಾನ್ಯ ಮನುಷ್ಯರಲ್ಲಿದ್ದುಕೊಂಡು ಅವರನ್ನು ನಿರ್ದೇಶಿಸುತ್ತಿರುತ್ತದೆ. ಈ ಲೋಕದ ಆತ್ಮನು ಒಬ್ಬ ವ್ಯಕ್ತಿ

ಅಲ್ಲ ಎಂಬುದು ಎಷ್ಟೋ ಸ್ಪಷ್ಟವಾಗಿದೆ. ಆದರೆ ಅದು ಈ ಲೋಕದ ಮನಸ್ಸು ಅಥವಾ ಪ್ರವೃತ್ತಿ ಅಥವಾ ಪ್ರಭಾವವಾಗಿದೆ! ಅದರಂತೆ ದೇವಜನರಲ್ಲಿರುವ ಪವಿತ್ರಾತ್ಮನು ಸಹಾ ಒಬ್ಬ ವ್ಯಕ್ತಿಯಾಗಿರದೆ ಅವರಲ್ಲಿರುವ ದೇವರ ಪವಿತ್ರವಾದ ಮನಸ್ಸು ಅಥವಾ ಪ್ರಭಾವ ಅಥವಾ ದೇವ ಪ್ರವೃತ್ತಿಯಾಗಿದೆ.

## ದೇವರಾತ್ಮನ ಸಂಗತಿಗಳು
## The Things of the Spirit of God

**"ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚುಮಾತಾಗಿ ತೋರುತ್ತವೆ; ಅವುಗಳು ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು"**. . . – 2 ಕೊರಿಂಥ 2:14.

ಇದೊಂದು ಬಹಳ ಪ್ರಬಲವಾದ ಹೇಳಿಕೆಯಾಗಿದೆ ಮತ್ತು ಇದು ನಾವು ಇದುವರೆಗೆ ನೋಡಿದ ಎಲ್ಲವುಗಳೊಂದಿಗೆ ಸಾಮರಸ್ಯದಿಂದಿದೆ. ಈ ಲೋಕದ ಆತ್ಮನಿಂದ ತುಂಬಿರುವವನು ದೇವರ ಆಳವಾದ, ಗಹನವಾದ, ರಹಸ್ಯ ಮತ್ತು ಭವ್ಯವಾದ ಸಂಗತಿಗಳನ್ನು ಅಂದರೆ ದೇವರ ತನ್ನನ್ನು ಪ್ರೀತಿಸುವವರಿಗಾಗಿ ಕಾದಿರಿಸಿರುವ ಸಂಗತಿಗಳನ್ನು ಅಷ್ಟೇ ಅನುಪಾತದಲ್ಲಿ ನೋಡಲಾರನು. ದೇವರು ಮುತ್ತುಗಳು ಎಂದು ಹೇಳುವ ಈ ಗಹನವಾದ ಸಂಗತಿಗಳು ಹಂದಿಗಳಿಗಾಗಿ, ಈ ಲೋಕದ ಆತ್ಮನನ್ನು ಪೂರ್ಣವಾಗಿ ಹೊಂದಿರುವ ಸ್ವಾರ್ಥಿಗಳಿಗಾಗಿ ಅಲ್ಲ: ಆದರೆ ದೇವರ ವಾಕ್ಯೋಪದೇಶಗಳ ಜಲಸ್ನಾನ ಮಾಡಿ ಶುದ್ಧರಾದವರಿಗೆ, ಆತನ ಅಮೂಲ್ಯವಾದ ರಕ್ತದ ಮೇಲಿಟ್ಟ ನಂಬಿಕೆಯ ಮೂಲಕ ಕರ್ತನ ಬಳಿಗೆ ಬಂದು ಪವಿತ್ರತೆ ಹೊಂದಿದವರಿಗೆ, ಕರ್ತನಿಗೆ ಪೂರ್ಣ ಪ್ರತಿಷ್ಠೆಗೊಂಡವರಿಗೆ ಮಾತ್ರ. ಇವರುಗಳಿಗೆ ದೇವರು ತನ್ನ ಅಗಾಧವಾದ ಸಂಗತಿಗಳನ್ನು ಬಹಿರಂಗಗೊಳಿಸಲು ಸಂತೋಷಿಸುತ್ತಾನೆ. ಹೌದು ಆತನ ಕೃಪೆಯ ಎಲ್ಲಾ ಶ್ರೀಮಂತಿಕೆಗಳು ಹಂತ ಹಂತವಾಗಿ ಸತ್ಯದ ವಿವಿಧ ಸಂಗತಿಗಳ ಹೊತ್ತು ಹೊತ್ತಿನ ಆಹಾರವಾಗಿಬಿಡುತ್ತದೆ.

ಎಲ್ಲರೂ ಗ್ರಹಿಸುವಂತೆ, ಇದೊಂದು ನಿರ್ಣಾಯಕವಾದ ಪರೀಕ್ಷೆಯಾಗಿದೆ. ಇದು ಅವನತಿಗೊಳಗಾದ ಮನುಷ್ಯ ಮತ್ತು ಆತ್ಮೀಕರಾದ ನೂತನ ಸೃಷ್ಟಿಯ ನಡುವಣ ಬೇಧವನ್ನು ತೋರಿಸಿಕೊಡುತ್ತದೆ. ಆಳವಾದ ಆತ್ಮೀಕ ಸತ್ಯಗಳಿಗೆ ಯಾರು ಕುರುಡರಾಗಿದ್ದಾರೋ ಅಂಥವರು ನಿಶ್ಚಯವಾಗಿ ಆತನ ಪುತ್ರತ್ವವನ್ನು, ಪರಲೋಕದ ತಂದೆಯೊಂದಿಗೆ ಆತನ ಸಂಬಂಧ ಮತ್ತು ಆ ಸಂಬಂಧದಡಿಯಲ್ಲಿ ಆತನ ಸ್ವಾಮಿನಿಷ್ಠೆಯ ಪುರಾವೆಗಳ ಕೊರತೆಯುಳ್ಳವರಾಗಿದ್ದಾರೆ. ಅಪೋಸ್ತಲನು ಇಲ್ಲಿ ಹೇಳುವ ಸಂಗತಿಗಳು ಅಂದರೆ 'ಆತನನ್ನು ಪ್ರೀತಿಸುವವರಿಗಾಗಿ ಆತನು ಕಾದಿರಿಸಿರುವ ಸಂಗತಿಗಳ ಬಗ್ಗೆ' ಉದಾಸೀನಮಾಡುವವರಿಗೆ ಇದಕ್ಕೆ ಕಾರಣವು ಅವರಲ್ಲಿ ಕರ್ತನ ಆತ್ಮದ ಕೊರತೆಯಾಗಿದೆ ಎಂಬ ಸಲಹೆಯು ಇಲ್ಲಿ ನಮಗೆ ದೊರೆಯುತ್ತದೆ. ಹೀಗಿದ್ದರೂ ಸಭೆಯಲ್ಲಿ ಬಹಿರಂಗವಾಗಿ ಬೋಧಿಸುವ ಕೆಲವೊಂದು ಬೋಧಕರುಗಳು ಈ ಸಂಗತಿಗಳ ಬಗ್ಗೆ ತಮ್ಮ ಅಜ್ಞಾನವನ್ನು ಒಪ್ಪಿಕೊಂಡಿರುವವರನ್ನು ಮಾತ್ರವಲ್ಲದೆ ತಮ್ಮ ಅಜ್ಞಾನದ ಬಗ್ಗೆ ಬಡಾಯಿಕೊಚ್ಚಿಕೊಳ್ಳುವವರನ್ನೂ ನಾವು ತಿಳಿದಿದ್ದೇವೆ. ಈ ರೀತಿಯಲ್ಲಿ ಅವರು ತಮ್ಮಲ್ಲಿ ದೇವರ ಮನಸ್ಸು ಇಲ್ಲವೆಂದು, ಆತನ ಯೋಜನೆಗಳು ತಮಗೆ ತಿಳಿಯವೆಂದು ಆದುದರಿಂದ ತಾವು ಆತನ ಆತ್ಮನನ್ನು ಅಂದರೆ ಸತ್ಯದ ಆತ್ಮನನ್ನು ಹೆಚ್ಚಾಗಿ ಹೊಂದಿಕೊಂಡಿಲ್ಲವೆಂದು ಘೋಷಿಸಿಕೊಂಡಿದ್ದಾರೆ. ಇದಕ್ಕೆ ಅನುಪಾತವಾಗಿ ಅವರಲ್ಲಿ ಹೆಚ್ಚಾದ ಸತ್ಯತೆ ಇರುವುದಿಲ್ಲ. ಇಲ್ಲಿ ನೀಡಿರುವ ಪರೀಕ್ಷೆಯು ಆತನ ಆತ್ಮನನ್ನು ಹೊಂದಿಕೊಂಡಿರುವ ಬಗ್ಗೆ ಮತ್ತು ಈ ಲೋಕದಿಂದ ಮರೆಯಾಗಿರುವ ದೇವರ ಸಂಗತಿಗಳನ್ನು ತಿಳಿದು ಅವುಗಳನ್ನು ಮೆಚ್ಚಿಕೊಳ್ಳುವ ನಮ್ಮ ಸಾಮರ್ಥ್ಯದ ಬಗ್ಗೆ – **"ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ನಮಗೆ ಪ್ರಕಟಿಸಿದನು"** – 1 ಕೊರಿಂಥ 2:10.

## ಪವಿತ್ರವಾಗಿರುವಾತನ ಒಂದು ಲೇಪನ (ಅಭ್ಯಂಜನ)
## An Unction from The Holy One

**"ನೀವು ಪವಿತ್ರವಾಗಿರುವಾತನಿಂದ ಅಭಿಷೇಕವನ್ನು ಹೊಂದುವವರಾಗಿದ್ದು ಎಲ್ಲವನ್ನೂ ತಿಳಿದವರಾಗಿದ್ದೀರಿ ... ಆದರೆ ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವುದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವುದು ಅವಶ್ಯವಿಲ್ಲ"** – 1 ಯೋಹಾನ 2:20, 27.

'ಅಭ್ಯಂಜನ' ಮತ್ತು 'ಅಭಿಷೇಕ' ಎಂಬ ಪದಗಳು ಬುದ್ಧಿವಂತ ಸತ್ಯವೇದ ವಿದ್ಯಾರ್ಥಿಗಳನ್ನು ಚುರುಕುಗೊಳಿಸಿ ಹಿಂದೆ ಇಸ್ರಾಯೇಲ್ಯರ ಉತ್ತರಾಧಿಕಾರಿ ಮಹಾಯಾಜಕರುಗಳನ್ನೂ, ರಾಜರುಗಳನ್ನು ಅವರ ತಲೆಯ ಮೇಲೆ ತೈಲ ಸುರಿದು ಪ್ರತಿಷ್ಠಾಪಿಸುತ್ತಿದ್ದುದನ್ನು ನೆನಪಿಸಿಕೊಳ್ಳುವಂತೆ ಮಾಡುತ್ತದೆ. ಇಸ್ರಾಯೇಲ್ಯ ಜನರು ದೇವರ ಸತ್ಯಪರರಾದ ಇಸ್ರಾಯೇಲ್ಯರ ನಮೂನೆ ಯಾಗಿರುವಂತೆ ಅವರ ರಾಜರುಗಳೂ ಯಾಜಕರೂ ಮಹಾ ಯಾಜಕನ ಸಂಕೇತದಂತಿರುವ ಕ್ರಿಸ್ತನ ನಮೂನೆಯಾಗಿದ್ದರು. ಅವರ ರಾಜರುಗಳು ಮತ್ತು

ಯಾಜಕರುಗಳು ತಮ್ಮ ಹುದ್ದೆಗೆ ಪ್ರತಿಷ್ಠೆಗೊಳ್ಳುವಂತೆ ಪವಿತ್ರವಾದ ತೈಲಾಭಿಷೇಕ ಹೊಂದಿಕೊಳ್ಳುವಂತೆ ನಮ್ಮ ಕರ್ತನಾದ ಯೇಸುವು ತನ್ನ ಪ್ರತಿಷ್ಠೆಯ ಸಮಯದಲ್ಲಿ ಪವಿತ್ರಾತ್ಮನಿಂದ ಅಭಿಷೇಕ ಹೊಂದಿದನು. ಹೀಗಾಗಿ ಯೇಸುವು 'ಕ್ರಿಸ್ತನಾದನು' ಅಂದರೆ ದೇವರಾದ ಯೆಹೋವನಿಂದ ಅಭಿಷೇಕಿಸಲ್ಪಟ್ಟವನಾದನು.

ಆಯ್ಕೆಗೊಂಡ ಸಭೆಯು ಕರ್ತನ ಮತ್ತು ಶಿರಸ್ಸಿನ ಅಧೀನದಲ್ಲಿನ 'ರಾಜ ವಂಶಸ್ಥ ಯಾಜಕತ್ವ' (ರಾಜ ಯಾಜಕರುಗಳ) ಉಳ್ಳದ್ದಾಗಿದೆ – ಪ್ರತಿಷ್ಠೆಗೊಂಡಾತನ (ಕ್ರಿಸ್ತನ) ದೇಹದ ಅಂಗವಾಗಿದೆ. ನಮ್ಮ ಕರ್ತನಾದ ಯೇಸು ಯೋರ್ದಾನ್ ಹೊಳೆಯಲ್ಲಿ ದೀಕ್ಷಾಸ್ನಾನ ಹೊಂದಿಕೊಂಡಾಗ ಭೂಪರಲೋಕಗಳಲ್ಲಿರುವ ಎಲ್ಲಾ ಅಧಿಕಾರಗಳೊಂದಿಗೆ ಇಳಿದು ಬಂದ ಪ್ರತಿಷ್ಠೆಪಡಿಸುವ ಆತ್ಮನಿಂದ ಆತನು ಸತ್ತು ಪುನರುತ್ಥಾನ ಹೊಂದಿದ ಮೇಲೆ ಭೂಪರಲೋಕದಲ್ಲಿರುವ ಎಲ್ಲಾ ಅಧಿಕಾರಗಳನ್ನು ಹೊಂದಿದ್ದನು (ಮತ್ತಾಯ 28:18, ಎಫೆಸ 1: 19.20 ಇವುಗಳನ್ನು ನೋಡಿರಿ). ಆತನು ತನ್ನ ತಂದೆಯ ಅನುಮತಿಯೊಂದಿಗೆ ಪಂಚಾಶತ್ತಮ ದಿನದಂದು ತನ್ನ ಸಭೆಯ ಪ್ರತಿನಿಧಿಗಳ ಮೇಲೆ ಅಭಿಷೇಕ ತೈಲದ ನಮೂನೆಯನ್ನು ಸುರಿಸಿದನು. ಅಲ್ಲಿ (ಪಂಚಾಶತ್ತಮ ದಿನದಲ್ಲಿನ ಸಭೆಯನ್ನು ಆಲೋಚನೆಯಲ್ಲಿಟ್ಟುಕೊಂಡು) ಈ ಅಭಿಷೇಕ ತೈಲವು ಶಿರಸ್ಸಿನಿಂದ ಆತನ ದೇಹವಾದ ಸಭೆಗೆ ಹರಿದು ಬಂತು. ಇನ್ನು ಮುಂದೆ ಈ ದೇಹದಲ್ಲಿ ವಾಸಿಸುವವರು ದೇವರ ಮಾತುಗಳಲ್ಲಿ ದೇವರಿಂದಲೇ ಆಯ್ಕೆಗೊಂಡವರು, ಆತನಿಂದ ಕ್ರಿಸ್ತನಿಂದ ಪ್ರತಿಷ್ಠಿಸಲ್ಪಟ್ಟವರು. ಈ ಲೋಕವನ್ನು ಆಳುವಂತೆ ಅದನ್ನು ಆಶೀರ್ವದಿಸುವಂತೆ ದೇವರಿಂದ ಶಿಕ್ಷಿತರಾಗಿ, ಆ ಪುಷ್ಟಿಗೊಳಿಸುವ ಆತ್ಮನಿಂದ ನಿರ್ದೇಶಿಸಲ್ಪಟ್ಟವರಾಗಿದ್ದಾರೆ ಎಂದು ಮಾನ್ಯ ಮಾಡಲ್ಪಡುತ್ತಾರೆ.

(Unction) ತೈಲಾಭಿಷೇಕದ (ಅದರ ಗ್ರೀಕ್ ಮೂಲ ಪದ Chrisma) ಮಹತ್ವವು ಮೃದುವಾಗಿರುವುದು, ಎಣ್ಣೆಯಂತಿರುವುದು, ನುಣುಪಾಗಿಸುವುದು. ಸಂಪ್ರದಾಯ ದಿಂದ ಈ ಪದವು ಪರಿಮಳ ಅಥವಾ ಸುಗಂಧ ಎಂಬ ಅರ್ಥವನ್ನು ಹೊಂದಿದೆ. ಎಷ್ಟು ಸುಂದರವಾಗಿ ಮತ್ತು ಬಲಯುತವಾಗಿ ಇದು ದೇವರ ಪ್ರಭಾವವನ್ನು ಮೇಲೆ ಸಾಂಕೇತಿಕವಾಗಿ ಪ್ರತಿಷ್ಠೆಗೊಂಡವರ ಮೇಲೆ ಒಳ್ಳೆಯತನದ, ಪವಿತ್ರತೆಯ, ಸಾಧು ಸ್ವಭಾವದ, ತಾಳ್ಮೆಯ, ಸಹೋದರ ಕರುಣೆಯ – ಪ್ರೀತಿಯ ದೇವರ ಪ್ರಭಾವವನ್ನು ಪರಿಣಾಮಕಾರಿಯಾಗಿ ಉಂಟು ಮಾಡುತ್ತದೆ! ಪ್ರತಿಷ್ಠೆಗೊಳಿಸುವ ಈ ಪ್ರೀತಿಯ ಪವಿತ್ರಾತ್ಮನಲ್ಲಿ ಅದನ್ನು ಸ್ವೀಕರಿಸುವವರಿಗೆಲ್ಲಾ ಎಂಥಾಃ ಮಧುರವಾದ, ತಾಜಾ ಸುಗಂಧವನ್ನು ತರುತ್ತದೆ! ಹೀಗಿದ್ದಾಗ್ಯೂ ಬಾಹ್ಯ ಮನುಷ್ಯನು, ಮಣ್ಣಿನ ಘಟವು ಎಷ್ಟೇ ವಿಕಾರನಾದರೂ ಅಥವಾ ಒರಟನಾದರೂ, ಉದ್ಧಟತನದವನಾದರೂ, ಅಥವಾ ಅಜ್ಞಾನಿಯಾದರೂ ಪವಿತ್ರಾತ್ಮನಿಂದ ಅಭಿಷೇಕಗೊಂಡ ನೂತನ ಹೃದಯದ ಶ್ರೀಮಂತಿಕೆಯನ್ನು, ಆಂತರಿಕವಾದ ನೂತನ ಚಿತ್ತವನ್ನು ಮಧುರಗೊಳಿಸುವ, ಪರಿಶುದ್ಧಗೊಳಿಸುವುದರಲ್ಲಿ ಅದು ಎಷ್ಟು ತ್ವರಿತವಾಗಿ ಪಾಲುತೆಗೆದುಕೊಳ್ಳುತ್ತದೆ ಮತ್ತು **"ಯಾವುದು ಸತ್ಯವೂ ಮಾನ್ಯವೂ, ನ್ಯಾಯವೂ ಶುದ್ಧವೂ, ಪ್ರೀತಿಕರವೂ, ಮನೋಹರವೂ ಆಗಿದೆಯೋ, ಯಾವುದು ಸದ್ಗುಣವಾಗಿದೆಯೋ, ಯಾವುದು ಕೀರ್ತಿಗೆ ಯೋಗ್ಯವೋ ಅವುಗಳನ್ನು ಲಕ್ಷ್ಯಕ್ಕೆ ತರುತ್ತದೆ"** – ಫಿಲಿಪ್ಪ 4:8.

'ತೈಲ ಅಭ್ಯಂಜನ' ಮತ್ತು 'ಅಭಿಷೇಕ' ಎಂಬ ಈ ಪದಗಳು ದೇವರ ಪವಿತ್ರಾತ್ಮನಿಗೆ ತಕ್ಕಂತೆ ಸರಿಯಾದ ದೃಷ್ಟಿಕೋನದಲ್ಲಿವೆ – ಅದು ದೇವರ ಪ್ರಭಾವವಾಗಿದೆ, ದೇವರ ಅದೃಶ್ಯವಾದ ಶಕ್ತಿಯಾಗಿದ್ದು ಆತನ ಕಟ್ಟಳೆಯಂತೆ, ಆತನ ವಾಗ್ದಾನಗಳಿಗನುಸಾರವಾಗಿ ಅಥವಾ ಸಕಲ ಜ್ಞಾನ ಹೊಂದಿರುವಾತನು ಸರ್ವಶಕ್ತನಾದವನು ತನಗೆ ಸರಿದೋರಿದಂತೆ ಕಾರ್ಯವೆಸಗುತ್ತಾನೆ. ಈ ಮಾತುಗಳು ಒಬ್ಬ ವ್ಯಕ್ತಿ ಎಂಬ ಆಲೋಚನೆಯನ್ನು ಖಂಡಿತವಾಗಿಯೂ ಹೊಂದಿರುವುದಿಲ್ಲ. ನಾವು ಒಬ್ಬ ವ್ಯಕ್ತಿಯೊಡನೆ ಅಭಿಷೇಕ ಹೊಂದಿಕೊಳ್ಳುವುದು ಹೇಗೆ ಸಾಧ್ಯ?

ಆದರೆ 'ಪವಿತ್ರವಾಗಿರುವಾತನ ಒಂದು ಲೇಪನ (ಅಭಿಷೇಕ)' ಎಂಬ ಈ ಪದಗಳಲ್ಲಿ ಲೇಪನ (ಅಭಿಷೇಕ) ಎಂಬುದಲ್ಲ, 'ಪವಿತ್ರವಾಗಿರುವಾತನು' ಎಂಬುದು ಪವಿತ್ರಾತ್ಮನನ್ನು ಪ್ರತಿನಿಧಿಸುತ್ತದೆ ಎಂಬ ಸಲಹೆಯನ್ನು ಯಾರಾದರೂ ನೀಡಬಹುದು. ನಾವು ಇದಕ್ಕೆ 'ಅಲ್ಲ'ವೆಂದು ಉತ್ತರಿಸುತ್ತೇವೆ. ಪವಿತ್ರವಾಗಿರುವಾತನು ದೇವರು ತಾನೇ. ಪೇತ್ರನು ಪಂಚಾಶತ್ತಮ ಆಶೀರ್ವಾದವನ್ನು ವಿವರಿಸುವಾಗ, ಅದು ತೈಲಾಭಿಷೇಕ ಮಾಡುವಂತೆ, ಸುರಿಸಲ್ಪಟ್ಟಿತು ಅಥವಾ ಹರಿಸಲ್ಪಟ್ಟಿತು ಆದರೆ ಕಳುಹಿಸಲ್ಪಟ್ಟನು ಎಂದು ಹೇಳುವ ಒಬ್ಬ ವ್ಯಕ್ತಿಯಂತಲ್ಲ ಎಂದು ಹೇಳುತ್ತಾನೆ. ಯೇಸುವಿನ ಬಗ್ಗೆ ಮಾತನಾಡುತ್ತಾ ಆತನು "ತಂದೆಯಿಂದ ಯೋವೇಲನ ಮೂಲಕ ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನನ್ನು ಪಡಕೊಂಡವನಾಗಿ ಆತನು ಇದನ್ನು ನೀವು ನೋಡುವಂತೆ ಮತ್ತು ಕೇಳುವಂತೆ ನಿಮಗಾಗಿ ಸುರಿಸಿದ್ದಾನೆ" ಎಂದು ಹೇಳುತ್ತಾನೆ. ಈ ಅದ್ಭುತವಾದ ಶಕ್ತಿಯು ಅಥವಾ ಪ್ರಭಾವವು ತಾನಾಗಿಯೇ ವಿವಿಧವಾದ ರೀತಿಯಲ್ಲಿ ಪ್ರಕಟಗೊಂಡು ಅಲೋಚನೆಗಳನ್ನು ತ್ವರಿತಗೊಳಿಸಿ, ಬೆಂಕಿಯ ನಾಲಿಗೆಯೋಪಾದಿಯಲ್ಲಿ ಅವಿದ್ಯಾವಂತರಿಂದ ವಿವಿಧ ಭಾಷೆಗಳನ್ನು ಮಾತನಾಡಿಸಿತು. ಮನಃ ಯೋವೇಲನ ಪ್ರವಾದನೆಯಲ್ಲಿ "ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮನನ್ನು ಸುರಿಸುವೆನು" (ಅ.ಕೃ. 2:17)

ಎಂದಿದೆ. ಇದು ಒಬ್ಬ ವ್ಯಕ್ತಿಗೆ ಉಪಯೋಗಿಸಬಹುದಾದ ಯುಕ್ತವಾದ ಮಾತುಗಳೆಂದು ಯಾರಾದರೂ ಹಕ್ಕಿನಿಂದ ಹೇಳಬಲ್ಲರೋ? ಆತನನ್ನು ತಂದೆಯಿಂದ ಮಗನಿಗೆ ಕೊಡಲಾಯಿತು ಮತ್ತು ಆತನು ಸುರಿಸಲ್ಪಟ್ಟನು ಅಥವಾ ಹರಿಸಲ್ಪಟ್ಟನು ಮತ್ತು ಈ ರೀತಿಯಾಗಿ ಕಾಣಿಸಲ್ಪಟ್ಟನೋ ಮತ್ತು ಕೇಳಿಸಲ್ಪಟ್ಟನೋ? ಖಂಡಿತವಾಗಿಯೂ ಇಲ್ಲ. ನಿಶ್ಚಯವಾಗಿಯೂ ಅಂಥಾಃ ಭಾಷೆಯನ್ನು ದೇವರಿಗೆ ಸರಿಸಮಾನವಾದ ಶಕ್ತಿ ಮತ್ತು ಮಹಿಮೆಯನ್ನು ಹೊಂದಿರುವ ತ್ರೈಯೇಕತ್ವದ ಮೂರನೆಯ ವ್ಯಕ್ತಿಗೆ ಅನ್ವಯಿಸುವುದಾದರೆ ಅದು ಅವಮಾನಕರವಾದುದು.

ಪ್ರತಿಯೊಬ್ಬರಿಗೂ ಅತ್ಯಂತ ಧಿಗ್ಭ್ರಮೆಗೊಳಿಸುವುದಾಗಿ ಕಂಡುಬರುವ ಸಂಗತಿಯೆಂದರೆ ಈ ರೀತಿಯ ಲೇಪನ ಹೊಂದುವವರು "ಎಲ್ಲಾ ಸಂಗತಿಗಳನ್ನು ಬಲ್ಲವರಾಗಿರುತ್ತಾರೆ" ಎಂಬುದು. ದೇವ ಜನರಲ್ಲಿ ಎಷ್ಟು ಮಂದಿಗೆ ತಾವು ಎಲ್ಲವನ್ನು ತಿಳಿದಿರುವುದಿಲ್ಲ ಎಂಬ ನಿರಪೇಕ್ಷವಾದ ನಿಶ್ಚಯತ್ವವಿದೆ ಮತ್ತು ಈ ಕಾರಣದಿಂದ ಅವರಲ್ಲಿ ತಾವು ನಿಜವಾಗಿಯೂ ಪವಿತ್ರಾತ್ಮನ ಅಭಿಷೇಕವನ್ನು ಹೊಂದಿದ್ದೇವೆಯೋ ಎಂಬ ಅನುಮಾನವಿದೆ? ಈ ಮಾತುಗಳನ್ನು **"ನೀವು ಪವಿತ್ರವಾಗಿರುವಾತನಿಂದ ಅಭಿಷೇಕವನ್ನು ಹೊಂದುವವರಾಗಿದ್ದೀರೆಂದು ಎಲ್ಲರೂ ತಿಳಿದವರಾಗಿದ್ದೀರಿ ..."*** ಎಂದು ಭಾಷಾಂತರಿಸುತ್ತಿದ್ದರೆ ಎಷ್ಟು ಸರಳವಾಗಿರುತ್ತಿತ್ತು ! ಹೌದು, ನಿಶ್ಚಯವಾಗಿಯೂ ; ದೇವರ ಸತ್ಯಪರರಾದ ಮಕ್ಕಳಿಗೆ ಸ್ವಾಭಾವಿಕ ಮನಸ್ಸು ಅಥವಾ ಹೃದಯ ಅಥವಾ ಚಿತ್ತ ಅಥವಾ ನೂತನ ಮನಸ್ಸು ಹಾಗೂ ಮನೋ ಪ್ರವೃತ್ತಿಗೂ ಇರುವ ವ್ಯತ್ಯಾಸ ತಿಳಿದಿದೆ ಮತ್ತು ಇವುಗಳು ಪ್ರೀತಿ ಮತ್ತು ನೈತಿಕತೆಗಳಿಂದ ನಿಯಂತ್ರಿಸಲ್ಪಟ್ಟಿವೆ ಎಂದೂ ಬಲ್ಲವರಾಗಿದ್ದಾರೆ.

ದೇವರ ಅತ್ಯುತ್ತಮ ಹಾಗೂ ವಿನೀತರಾದ ಮಕ್ಕಳಲ್ಲಿ ಎಷ್ಟು ಮಂದಿ **"ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವುದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವುದು ಅವಶ್ಯವಿಲ್ಲ"** (1 ಯೋಹಾನ 2: 27) ಎಂಬ ಮಾತುಗಳನ್ನು ಆಶ್ಚರ್ಯಚಕಿತರಾಗಿ ಓದಿಕೊಳ್ಳುತ್ತಾರೆ ?

ಅಯ್ಯೋ! ಅವರು ತಮಗೆ ಅಂಥಾಃ ಅಭೀಷೇಕ ಇನ್ನೂ ಉಂಟಾಗಿಲ್ಲ ಮತ್ತು ನಮಗೆ ಯಾರಾದರೂ ಉಪದೇಶಿಸುವ ಅಗತ್ಯ ಬಹಳವಿದೆ ಹಾಗೂ ನಮಗೆ ನೇರವಾಗಿ ಅಥವಾ ಮಾನವ ಸಾಧನಗಳಿಂದ ಬರದೇ ಬಹಳ ಕಡಿಮೆ ಸಂಗತಿಗಳು ಮಾತ್ರವೇ ತಿಳಿದಿದೆ ಎಂದು ಹೇಳುತ್ತಾರೆ! ಈ ವಿನಮ್ರವಾದ ಆತ್ಮಗಳು ತಮ್ಮ ಪ್ರಾಮಾಣಿಕತೆಯ ಆಲೋಚನೆಗಳ ಕಾರಣದಿಂದ ತಾವು ತಿರಸ್ಕರಿಸಲ್ಪಟ್ಟಿದ್ದೇವೆ ಮತ್ತು ನಮ್ಮನ್ನು ನಿರುತ್ಸಾಹ ಗೊಳಿಸಲಾಗಿದೆ ಎಂದು ಬಹಳವಾಗಿ ಭಾವಿಸುವಾಗ ಅವರು ತಮಗೆ ಪರಿಚಯವುಳ್ಳ ಅನೇಕ ಅತ್ಯುತ್ತಮರಾದ ಭಕ್ತಜನರಿಗೂ ಸಹಾ ಇದೇ ರೀತಿಯಲ್ಲಿ ಮಾನವ ಬೋಧಕರ ಅವಶ್ಯಕತೆ ಇತ್ತು ಮತ್ತು ಅವರನ್ನು ಮೆಚ್ಚಿಕೊಂಡಿದ್ದರು ಎಂಬುದನ್ನು ಅವರು ನೋಡುವುದಿಲ್ಲ. ಮತ್ತೊಂದೆಡೆಯಲ್ಲಿ, ಸ್ವಲ್ಪ ಕಡಿಮೆ ನಿಷ್ಠೆಯುಳ್ಳ, ಕಡಿಮೆ ನಿಷ್ಕಪಟರಾದ, ಕಡಿಮೆ ಭಕ್ತರಾದ ಕೆಲವರು ತಮ್ಮನ್ನು ಮತ್ತು ಇತರರನ್ನು ಮೋಸಪಡಿಸಲು ಪ್ರಯತ್ನಿಸುವವರಾಗಿ ತಾವು ಮಾನವರಿಂದ ಏನನ್ನೂ ಕಲಿತುಕೊಳ್ಳಲಿಲ್ಲ ಮತ್ತು ತಮಗೆ ತಿಳಿದುವುಗಳೆಲ್ಲವೂ ಪವಿತ್ರಾತ್ಮನ ಸ್ಫೂರ್ತಿಯಿಂದ ನೇರವಾಗಿ ಬೋಧಿಸಲ್ಪಟ್ಟವುಗಳು ಎಂದು ಹೇಳಿಕೊಳ್ಳುತ್ತಾರೆ. ಅವರು ತಮ್ಮ ಆಲೋಚನೆಗಳು ಮತ್ತು ಮಾತುಗಳು ಸಂಪೂರ್ಣವಾಗಿ ದೋಷರಹಿತವಾದದ್ದು ಎಂದು ಸಾಧಿಸುತ್ತಿದ್ದಾರೆ ಎಂದು ಅವರು ಕಾಣುವುದಿಲ್ಲ. ಅವರು ತಮ್ಮ ತಪ್ಪಾದ ಆಲೋಚನೆಗಳು, ಮಾತು ಮತ್ತು ಕೃತಿ ಪವಿತ್ರಾತ್ಮನ ಸಮಗ್ರ ಪ್ರಭಾವಕ್ಕೊಳಗಾಗಿದೆ ಎಂದು ಸಾಧಿಸುವುದು ದೇವರ ಪವಿತ್ರಾತ್ಮನಿಗೆ ವಿರುದ್ಧವಾದದ್ದು. ದೇವರು ತಪ್ಪುಗಳಿಗೆ ದೋಷಗಳಿಗೆ ಮೂಲನು ಎಂಬುದಾಗಿ ಪ್ರತಿಬಿಂಬಿಸುತ್ತದೆ ಎಂಬುದನ್ನು ಅರಿಯಲು ವಿಫಲರಾಗಿದ್ದೇವೆ.

ಈ ವಾಕ್ಯಭಾಗವನ್ನು ಅದು ಇರುವಂತೆಯೇ ತೆಗೆದುಕೊಳ್ಳುವುದಾದರೆ ಇದು ಸತ್ಯವೇದದ ಸಾಮಾನ್ಯ ಸಾಕ್ಷಿಯೊಂದಿಗೆ ವ್ಯತ್ಯಾಸವುಳ್ಳದ್ದಾಗಿದೆ. ಅಪೋಸ್ತಲನಾದ ಪೌಲನು ಸಭೆಯ ಅನೇಕರಿಗೆ – ಅಪೋಸ್ತಲರು, ಪ್ರವಾದಿಗಳು (ಉಪನ್ಯಾಸಕಾರರು), ಬೋಧಕರುಗಳು, ಉಪದೇಶಿಗಳು ಮತ್ತು ಸುವಾರ್ತಿಕರು ಇವರುಗಳಿಗೆ ಕೊಡಲ್ಪಟ್ಟ ಪವಿತ್ರಾತ್ಮನ ವರಗಳ ಬಗ್ಗೆ ಹೇಳಿರುವುದಿಲ್ಲವೇ? ಸಭೆಗೆ ಯಾವ ಮನುಷ್ಯನೂ ಉಪದೇಶಿಸುವ ಅಗತ್ಯವಿಲ್ಲವಾದರೆ ಈ ವರಗಳನ್ನು ಕೊಟ್ಟಿದ್ದಾದರೂ ಏಕೆ? ಸಭೆಯಲ್ಲಿ ಈ ವಿಶೇಷವರಗಳನ್ನು ಇಟ್ಟಿರುವ ಕಾರಣಗಳ ಬಗ್ಗೆ ಅಪೋಸ್ತಲನು ಏನು ಹೇಳುತ್ತಾನೆ? ಆತನನ್ನೇ ಕೇಳಿಸಿಕೊಳ್ಳಿರಿ – **"ಆತನು ಕೆಲವರನ್ನು ಅಪೋಸ್ತಲರನ್ನಾಗಿಯೂ, ಕೆಲವರನ್ನು ಪ್ರವಾದಿ ಗಳನ್ನಾಗಿಯೂ, ಕೆಲವರನ್ನು ಸೌವಾರ್ತಿಕರನ್ನಾಗಿಯೂ, ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ನಾವೆಲ್ಲರೂ ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿ**

* "ಎಲ್ಲಾ ಸಂಗತಿಗಳೂ" ಎಂಬ ಮಾತುಗಳು ಅತ್ಯಂತ ಹಳೆಯ ಗ್ರೀಕ್ ಎಂ.ಎಸ್.ಎಸ್. ನಲ್ಲಿ ಬಿಟ್ಟುಹೋಗಿದೆ.

**ಯಾಗುವುದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು"** (ಎಫೆಸ 4:11–14). ಇದನ್ನು 1 ಕೊರಿಂಥ 12:28–31ರೊಂದಿಗೆ ಹೋಲಿಸಿರಿ.

ಅಪೋಸ್ತಲನಾದ ಯೋಹಾನನು ಅಪೋಸ್ತಲನಾದ ಪೌಲ ಮತ್ತು ಇತರ ಅಪೋಸ್ತಲರೊಂದಿಗೆ ಈ ವಿಷಯದಲ್ಲಿ ಬೇಧವನ್ನು ಹೊಂದಿದ್ದಾನೆ ಎಂದು ಊಹಿಸಲಾಗದು. – ಇವರೆಲ್ಲರೂ ಬೋಧಕರುಗಳೇ ಮತ್ತು ಸಭೆಗೆ ಬೋಧಕರುಗಳ, ಉಪದೇಶಿಗಳ, ಮೇಲ್ವಿಚಾರಕರುಗಳ ಬಗ್ಗೆ ಪವಿತ್ರಾತ್ಮನ ಆಯ್ಕೆಯನ್ನು ಹುಡುಕಿ ಈ ರೀತಿಯಾಗಿ ಸಭೆಯ ಆಡಳಿತ ಮಾಡುವವರನ್ನು ಗೌರವಿಸ ಬೇಕು. ಯಾಕೆಂದರೆ **"ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ. ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ"** (ಇಬ್ರಿಯ 13:17) ಎಂದು ಬರೆದದೆ. ಇದು ನಿಸ್ಸಂದೇಹವಾಗಿ ಪೌಲನು ಹೇಳಿರುವಂತೆ **"ಸಭೆಯು ಬೋಧಿಸುವುದರಲ್ಲಿ ಪ್ರವೀಣನಾದವನನ್ನು ಸಭಾ ಸೇವಕನನ್ನಾಗಿ ಆರಿಸಬೇಕು"** (1 ತಿಮೋ. 3:2 ನೋಡಿರಿ) **"ಆತನು ನಿಧಾನವಾಗಿ ತಿದ್ದುವವನೂ ಆಗಿರಬೇಕು"** (2 ತಿಮೋ. 2:25) ಮತ್ತು **"ಸ್ವಸ್ಥಬೋಧನೆಯಿಂದ ಜನರನ್ನು ಎಚ್ಚರಿಸುವುದಕ್ಕೂ, ಎದುರಿಸುವವರ ಬಾಯಿ ಕಟ್ಟುವುದಕ್ಕೂ ಶಕ್ತನಾಗಿರುವಂತೆ ಕ್ರಿಸ್ತಬೋಧಾನುಸಾರವಾದ ನಂಬತಕ್ಕ ವಾಕ್ಯವನ್ನು ದೃಢವಾಗಿ ಹಿಡುಕೊಂಡವನಾಗಿರಬೇಕು"** (ತೀತ. 1:9) ಮತ್ತು **"ಆದಕಾರಣ ಅವರು ಯೆಹೂದ್ಯರ ಕಲ್ಪನಾ ಕಥೆಗಳಿಗೂ ಸತ್ಯಭ್ರಷ್ಟರಾದ ಮನುಷ್ಯರ ವಿಧಿಗಳಿಗೂ ಲಕ್ಷ್ಯಕೊಡದೆ ಕ್ರಿಸ್ತನ ನಂಬಿಕೆಯಲ್ಲಿ ಸ್ವಸ್ಥಚಿತ್ತರಾಗಿರುವಂತೆ ಅವರನ್ನು ಕಠಿಣವಾಗಿ ಖಂಡಿಸು"** (ತೀತ. 1:13–14) ಎನ್ನುವ ಮಾತುಗಳಿಗೆ ಸರಿಯಾಗಿಯೇ ಅದೆ. ಅದರಂತೆ ಪೇತ್ರನು ಸಹಾ ಎಚ್ಚರಿಸಿ ಹೇಳುವುದೇನೆಂದರೆ **"ನಿಮ್ಮಲ್ಲಿರುವ ದೇವರ ಮಂದೆಯನ್ನು ಕಾಯಿರಿ. ಬಲಾತ್ಕಾರದಿಂದಲ್ಲ, ದೇವರ ಚಿತ್ತದ ಪ್ರಕಾರ ಇಷ್ಟಪೂರ್ವಕವಾಗಿಯೂ, ನೀಚವಾದ ದ್ರವ್ಯಾಶೆಯಿಂದಲ್ಲ ಸಿದ್ಧಮನಸ್ಸಿನಿಂದಲೂ ಮೇಲ್ವಿಚಾರಣೆಮಾಡಿರಿ. ದೇವರು ನಿಮ್ಮ ವಶದಲ್ಲಿರುವ ಸಭೆಗಳ ಮೇಲೆ ದೊರೆತನ ಮಾಡುವವರಂತೆ ನಡೆಯದೆ ಮಂದೆಗೆ ಮಾದರಿಯಾಗಿಯೇ ನಡೆದುಕೊಳ್ಳಿರಿ"** (1 ಪೇತ್ರ 5:2–4) ಎಂಬುದಾಗಿ.

ಇದಕ್ಕೂ ಹೆಚ್ಚಾಗಿ ಯೋಹಾನನು ತಾನೇ ಬೋಧಕನಾಗಿದ್ದನು ಮತ್ತು ಈ ಪತ್ರಿಕೆಯಲ್ಲಿ ನಾವು ಸ್ವಸ್ಥವಾದ ಬೋಧನೆಯೆಂದು ತಿಳಿದು ಮೆಚ್ಚಿಕೊಂಡಿದ್ದು ಅವುಗಳು ಬೋಧನೆಗೆ ಅವಶ್ಯವಾಗಿವೆ ಎಂದು ಕೊಂಡಿರುವುದರ ಬಗ್ಗೆ ಆತನು ಬೋಧಿಸುವವ ನಾಗಿದ್ದಾನೆ. ಯೋಹಾನನ ಬರಹಗಳನ್ನು ಓದುವ ಯಾವನಾದರೂ ಆತನು ಅವನ್ನು ಯಾವುದೇ ಸಿದ್ಧಂತ ಅಥವಾ ಬೋಧನೆಗಳಿಲ್ಲದ ಕೇವಲ ಒಂದು ಸಾಮಾಜಿಕ ಪತ್ರಗಳನ್ನಾಗಿ ಬರೆದಿದ್ದಾನೆಂದು ನಿಶ್ಚಯವಾಗಿಯೂ ಭಾವಿಸಲಾರನು. ಆತನು ತನ್ನ ಪತ್ರಿಕೆಯ ಪ್ರಾರಂಭದಲ್ಲಿಯೇ **"ನಾವು ಕಂಡು ಕೇಳಿದ್ದು ನಿಮಗೂ ಗೊತ್ತಾಗಿ ನಮಗಿರುವ ಅನ್ಯೋನ್ಯತೆಯಲ್ಲಿ ನೀವೂ ಸೇರಬೇಕೆಂದು ಅದನ್ನು ನಿಮಗೆ ಪ್ರಸಿದ್ಧಿಪಡಿಸುತ್ತೇವೆ"** (1 ಯೋಹಾನ 1:3) ಎಂದು ಹೇಳಿಲ್ಲವೇ? ಪುನಃ ಆತನು **"ನೀವು ಪಾಪ ಮಾಡದಂತೆ ಈ ಮಾತುಗಳನ್ನು ನಿಮಗೆ ಬರೆಯುತ್ತೇನೆ"** (1 ಯೋಹಾನ 2:1) ಮತ್ತು **"ಆದರೂ ನಾನು ನಿಮಗೆ ಬರೆಯುವುದು ಹೊಸ ಅಪ್ಪಣೆಯೇ"** (1 ಯೋಹಾನ 2:8) ಎಂದಿದ್ದಾನೆ. ಮುಂದೆ ಆತನು **"ಪ್ರಿಯರಾದ ಮಕ್ಕಳೇ ನಿಮ್ಮನ್ನು ಸನ್ಮಾರ್ಗದಿಂದ ತಪ್ಪಿಸುವುದಕ್ಕೆ ಯಾರಿಗೂ ಅವಕಾಶಕೊಡಬೇಡಿರಿ"** (1 ಯೋಹಾನ 3:7) [ಆದರೆ ನನ್ನ ಬೋಧನೆಗಳನ್ನು ಗಮನಿಸಿರಿ] ನೀತಿಯನ್ನು ಅನುಸರಿಸುವವನು ನೀತಿವಂತನಾಗಿರುತ್ತಾನೆ ಎಂತಲೂ ಮುಂದೆ ಆತನು**"ನಾವಂತೂ ದೇವರಿಂದ ಹುಟ್ಟಿದವರಾಗಿದ್ದೇವೆ; ದೇವರನ್ನು ಬಲ್ಲವನು ನಮ್ಮ ಮಾತನ್ನು ಕೇಳುತ್ತಾನೆ; ದೇವರಿಂದ ಹುಟ್ಟದವನು ನಮ್ಮ ಮಾತನ್ನು ಕೇಳುವುದಿಲ್ಲ" (ಉಪದೇಶಗಳಿಗೆ, ಬೋಧನೆಗಳಿಗೆ ವಿಧೇಯನಾಗಿರುತ್ತಾನೆ)** (1 ಯೋಹಾನ 4:6) ಎಂತಲೂ ಹೇಳುತ್ತಾನೆ . ಮುಂದೆ ಆತನು **"ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ (ಬೋಧಿಸಲ್ಪಡುವಂತೆ) ಈ ಮಾತುಗಳನ್ನು ಬರೆದಿದ್ದೇನೆ"** (1 ಯೋಹಾನ 5:13) ಎನ್ನುತ್ತಾನೆ. ಆತನು ತನ್ನ ಪತ್ರಿಕೆಯನ್ನು **"ಪ್ರಿಯರಾದ ಮಕ್ಕಳೇ, ವಿಗ್ರಹಗಳಿಗೆ ದೂರವಾಗಿರುವಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ"** (1 ಯೋಹಾನ 5:21) ಎಂಬ ಒಂದು ಮುಖ್ಯವಾದ ಬೋಧನೆಯೊಡನೆ ಮುಕ್ತಾಯ ಗೊಳಿಸುತ್ತಾನೆ. [ಅಂದರೆ "ಯಾವುದೇ ವ್ಯಕ್ತಿಗೂ ಅಥವಾ ಸಂಗತಿಗೂ ದೇವರು ತಾನೇ ನಿಮ್ಮ ವಾತ್ಸಲ್ಯ ಮತ್ತು ಪೂಜ್ಯಭಾವದಲ್ಲಿರುವುದನ್ನು ಭ್ರಷ್ಟಗೊಳಿಸುವ ಅವಕಾಶ ನೀಡದಿರಿ"] ಎಂಬರ್ಥ.

ಹಾಗಾದಲ್ಲಿ ಅಪೋಸ್ತಲನು ಸಭೆಗೆ ಮಾನವ ಬೋಧಕರ ಅಗತ್ಯವಿಲ್ಲ ಎಂಬ ರೀತಿಯ ಅರ್ಥದಲ್ಲಿ ಹೇಳಿದನೆಂದು ಅರಿತುಕೊಳ್ಳಲು ಸಾಧ್ಯವಾಗುವುದಿಲ್ಲ. – ವಿರುದ್ಧ ದಿಕ್ಕಿನಲ್ಲಿ ನೋಡುವಾಗ, ಆತನು ಮಾನವ ಬೋಧಕರುಗಳನ್ನು ಪವಿತ್ರಾತ್ಮನಿಂದ ನೇಮಿಸಲ್ಪಟ್ಟ ನಿಯೋಗವೆಂಬಂತೆ ನೋಡಿದನು. ವಿಶೇಷವಾಗಿ ಸಭೆಯಲ್ಲಿ ಈ ಸೇವೆಗಾಗಿಯೇ 'ನಿಯೋಜಿಸಲ್ಪಟ್ಟವರು' ಎಂಬ ಅರ್ಥದಲ್ಲಿ ಆತನು **"ಯಾವ ಮನುಷ್ಯನಾದರೂ ನಿಮಗೆ ಬೋಧಿಸುವ ಅಗತ್ಯವಿಲ್ಲ"** ಮತ್ತು **"ಅಭಿಷೇಕಿಸುವವನು ನಿಮಗೆ ಎಲ್ಲವನ್ನೂ ಬೋಧಿಸುತ್ತಾನೆ"**. ನಾವೀಗಾಗಲೇ

ಚರ್ಚಿಸಿದ ಸಂಗತಿಗಳ ಬೆಳಕಿನಲ್ಲಿ ನಾವು ಪರೀಕ್ಷಿಸುವಾಗ ನಮ್ಮ ತಕರಾರಿಗೆ ಸೂಕ್ತವಾದ ಉತ್ತರವು ಸಿದ್ಧವಾಗಿ ದೊರೆಯುತ್ತದೆ.

ಈ ಪತ್ರಿಕೆಯನ್ನು ವಿಧ್ವಾಂಸರುಗಳಿಂದ ಕ್ರಿ.ಶ. 90ರಲ್ಲಿ ಬರೆಯಲಾಗಿದೆ ಎಂದು ಊಹಿಸಬಹುದು. ಆ ವೇಳೆಗೆ ಕ್ರೈಸ್ತ ಧರ್ಮವು ಪ್ರಪಂಚದಲ್ಲಿ ಸಾಕಷ್ಟು ಪ್ರಾಮುಖ್ಯತೆಯನ್ನು ಪಡಕೊಂಡಿತ್ತು. ಐಹಿಕರಾದ ಇಸ್ರಾಯೇಲ್ಯರ ಶೇಷ ಜನರನ್ನು ಇದು ಸಂಗ್ರಹಿಸಿತ್ತು. ಹೀಗಾಗಿ ಆ ಅಂಧಜನರ ದ್ವೇಷವನ್ನು ಮತ್ತು ಹಿಂಸೆಯನ್ನು ತನ್ನ ಮೇಲೆ ಎಳೆದುಕೊಂಡಿದ್ದು ಮತ್ತು ಆಗಿನ ನಾಗರೀಕ ಪ್ರಪಂಚದಲ್ಲೆಲ್ಲಾ ಚದುರಿಹೋಗಿತ್ತು. ಕ್ರೈಸ್ತತ್ವದ ಅನೇಕ ಸಂಗತಿಗಳು ಆಗಿನ ಕಾಲದ ಗ್ರೀಕ್ ವೇದಾಂತಿಗಳ ಸುರಕ್ಷತೆಗಾಗಿ ಒಪ್ಪಿಸಲ್ಪಟ್ಟವುಗಳಾಗಿದ್ದು ಅವರು ತಮ್ಮವುಗಳನ್ನು ಇದರೊಂದಿಗೆ ಬೆರೆಸಿ ತಮ್ಮ ವೇದಾಂತಗಳನ್ನು ಇಟ್ಟುಕೊಂಡೇ ತಾವು ವೇದಾಂತಿ ಕ್ರೈಸ್ತರು ಮತ್ತು ಕ್ರೈಸ್ತ ವೇದಾಂತಿಗಳಾಗಬೇಕೆಂದು ಬಯಸಿದರು. ಪೌಲನು ಇದನ್ನೇ "ಸುಳ್ಳಾದ ಜ್ಞಾನ" ಎಂಬುದಾಗಿ 1 ತಿಮೋಥೆ 6:20–21ರಲ್ಲಿ ಬರೆಯುತ್ತಾನೆ. ಈ ವೇದಾಂತಿಗಳು ಯೇಸು ಒಬ್ಬ ಒಳ್ಳೆಯ ವ್ಯಕ್ತಿ ಮತ್ತು ಬುದ್ಧಿವಂತನಾದ ಬೋಧಕ ಎಂದು ಒಪ್ಪಿಕೊಳ್ಳುವವರಾದರೂ ಆತನು ದೇವ ಕುಮಾರನು, ದೇವ ಸ್ವರೂಪವುಳ್ಳವನು, ಮಾನವ ವಿಮೋಚನಾರ್ಥವಾಗಿ ಮಾಂಸಧಾರಿಯಾಗಿ ಮಾಡಲ್ಪಟ್ಟವನು, ಆತನಿಗೆ ವಿಧೇಯರಾಗುವವರಿಗೆ ನಿತ್ಯಜೀವದ ಕಾರಣನು ಎಂಬುದನ್ನ ನಿಜವೆಂದು ಒಪ್ಪಲಿಲ್ಲ. ಹೀಗಿದ್ದಾಗ್ಯೂ ಅವರು ಭವಿಷ್ಯದ ಬಗ್ಗೆ, ನಿತ್ಯ ಜೀವದ ಬಗ್ಗೆ ಬೋಧಿಸುವವರಾಗಿದ್ದರು ಮತ್ತು ಕ್ರೈಸ್ತರು ಸಹಾ ಈ ಬಗ್ಗೆ ಬೋಧಿಸುವುದಕ್ಕೆ ಸಂತೋಷಿಸುತ್ತಿದ್ದರು; ವ್ಯತ್ಯಾಸವೇನೆಂದರೆ, ಈ ವೇದಾಂತಿಗಳು (ಪ್ಲಾಟೊ ಹಾಗೂ ಮುಂತಾದವರು) ನಿತ್ಯಜೀವವೆಂಬುದು ಮಾನವ ಸಹಜವಾದ ಗುಣ, ಅದು ಮಾನವರಲ್ಲಿನ ಅಂತರ್ಜಾತವಾದ ಶಕ್ತಿ – ಮರಣವಿಲ್ಲದಿರುವಿಕೆ, ನಿರ್ಲಯತ್ವ ಎಂದು ಬೋಧಿಸಿದರೆ, ಕ್ರೈಸ್ತರಾದರೋ ನಿತ್ಯಜೀವವೆಂಬುದು ಮಾನವರಲ್ಲಿ ಅಂತರ್ಜಾತ ವಾದುದಲ್ಲ, ಅದು ಕ್ರಿಸ್ತನ ಮೂಲಕ ದಯಪಾಲಿಸಲ್ಪಟ್ಟಿರುವ ದೇವರ ವರವಾಗಿದ್ದು ಆತನನ್ನು ಅಂಗೀಕರಿಸಿದವರಿಗೆ ಮಾತ್ರವೇ ದೊರೆಯುವಂಥಾದ್ದು ಎಂದು ಬೋಧಿಸಿದರು – ರೋಮಾ. 2:7, 5:15, 21, 6:23, 2 ಕೊರಿಂಥ 9:15.

ಈ ವೇದಾಂತಿಗಳು ಕ್ರೈಸ್ತರಿಗೆ ವ್ಯವಹಾರಿಕವಾಗಿ ಹೇಳಿದ್ದೇನೆಂದರೆ – ನಾವು ನಿಮ್ಮಂಥಾಃ ಗೌರವಾನ್ವಿತರಾದ ಮತ್ತು ಒಳ್ಳೆಯ ತಿಳುವಳಿಕೆಯುಳ್ಳ ಸ್ವತಂತ್ರವಾದವರನ್ನು ಭೇಟಿಯಾಗಲು ಸಂತೋಷಿಸುತ್ತೇವೆ. ನಿಮ್ಮ ಮಹಾ ಬೋಧಕನಾದ ಯೇಸುವು ನಿಜವಾಗಿಯೂ ನಿಮ್ಮನ್ನು ಯೆಹೂದ್ಯರ ಅನೇಕ ಸಂಪ್ರದಾಯಗಳಿಂದ, ಮೂಢನಂಬಿಕೆಗಳಿಂದ ಮುಕ್ತರನ್ನಾಗಿ ಮಾಡಿದ್ದಾನೆ. ಇದಕ್ಕಾಗಿ ನಾವು ನಿಮ್ಮನ್ನು ಅಭಿನಂದಿಸುತ್ತೇವೆ. ಆದಾಗ್ಯೂ, ನೀವು ಇನ್ನೂ ಸ್ವಲ್ಪ ಮಟ್ಟಿನ ಬಂಧನದಲ್ಲಿದ್ದೀರಿ; ನೀವು ನಮ್ಮ ವೇದಾಂತಗಳನ್ನು ಪರಿಶೀಲಿಸುವಾಗ ನಿಮಗೆ ಇನ್ನೂ ಹೆಚ್ಚಿನ ಸ್ವಾತಂತ್ರ್ಯ ಕಂಡು ಬರುತ್ತದೆ. ನೀವಿನ್ನೂ ಯೆಹೂದ್ಯರೊಂದಿಗೆ ಮೆಸ್ಸಿಯನ ರಾಜ್ಯದ ನಿರೀಕ್ಷೆಯ ಮಟ್ಟಿಗೆ, ಒಬ್ಬನೇ ದೇವರೆಂಬ ಅವರ ವಿಚಿತ್ರವಾದ ಕಲ್ಪನೆಗೆ ಸಮನಾಗಿದ್ದೀರಿ ಮತ್ತು ನಿಮ್ಮ ಬೋಧಕನಾದ ಯೇಸು ದೇವರ ಒಬ್ಬನೇ ಮಗ ಮುಂತಾದ ಆಲೋಚನೆಗೆ ಕಟ್ಟು ಬಿದ್ದಿದ್ದೀರಿ. ನೀವು ನಮ್ಮ ವೇದಾಂತದ ಸಹಾಯದಿಂದ ಇವುಗಳನ್ನು ಮೀರಿ ವೇಗವಾಗಿ ಬೆಳೆಯುತ್ತೀರಿ" (2 ಪೇತ್ರ 2:19, ಯೂದ :4) ಎಂಬುದಾಗಿ.

ಇಂಥಾಃ ಬುಡಮೇಲು ಮಾಡುವ ಬೋಧನೆಗಳನ್ನು ಹತ್ತಿಕ್ಕುವ ಸಲುವಾಗಿಯೇ ಯೋಹಾನನ ಪತ್ರಿಕೆಯನ್ನು ಬರೆಯಲಾಯಿತು. ಆತನು ತನ್ನ ಎರಡನೆಯ ಅಧ್ಯಾಯದಲ್ಲಿ ಕ್ರೈಸ್ತರನ್ನು ಅಂಥಾಃ ಬೋಧನೆಗಳ ಬಗ್ಗೆ ಎಚ್ಚರಿಸುತ್ತಾ ತಾವು ಮೊದಲಿನಿಂದಲೂ ಕೇಳಿದ ಬೋಧನೆಗಳಿಗೆ ನೆಲೆಗೊಂಡಿರಬೇಕೆಂದು ಹೇಳುತ್ತಾನೆ (2:24) ಮತ್ತು ಅಂಥಾಃ ಸುಳ್ಳು ಬೋಧಕರುಗಳು ಕ್ರಿಸ್ತ ವಿರೋಧಿಯ ಪ್ರತಿನಿಧಿಗಳು ಎಂದು ತಿಳಿಸುತ್ತಾನೆ. ನಾವು ಆಗಾಗ್ಯೆ ಕೇಳಿರುವಂತೆ ಇಂಥವರು ಸಭೆಯೊಳಗೆ ಸೇರಿಕೊಂಡಿದ್ದಾರೆ ಎಂದು ಬರೆಯುತ್ತಾ ಹೇಳುತ್ತಾನೆ (2 ಥೆಸ. 2:3–7; 1 ಯೋಹಾನ 2:18 ಇವುಗಳನ್ನು ನೋಡಿರಿ).

**"ನಿಮ್ಮನ್ನು(ಕ್ರಿಸ್ತನ) ಸನ್ಮಾರ್ಗದಿಂದ ತಪ್ಪಿಸ ಬೇಕೆಂದಿರುವವರ (ಬಯಸುವವರ) ವಿಷಯವಾಗಿ ಈ ಸಂಗತಿಗಳನ್ನು ನಿಮಗೆ ಬರೆದಿದ್ದೇನೆ"** (1 ಯೋಹಾನ 2:26) ಎಂಬ ಮಾತುಗಳನ್ನು ಸೇರಿಸುತ್ತಾನೆ.

ನಂತರದಲ್ಲಿ, ನಾವೀಗ ಚರ್ಚಿಸುತ್ತಿರುವ 27ನೇ ವಚನದ ವಿಚಿತ್ರವಾದ ಭಾಷೆಯು ಕಂಡು ಬರುತ್ತದೆ. ನಾವು ಈ ಮಾತುಗಳಿಗೆ ಈ ರೀತಿಯಾದ ವಿವರಣೆ ಕೊಡ ಬಯಸುತ್ತೇವೆ :

ಆದರೆ, ಅಚ್ಚುಮೆಚ್ಚಿನ ಪ್ರಿಯರೇ, ದೇವರ ಸತ್ಯಪರರಾದ ಮಕ್ಕಳನ್ನು ಅಂಥಾಃ ಬೋಧನೆಗಳಿಂದ ದುರ್ಮಾರ್ಗಕ್ಕೆ ಎಳೆಯಲು ಸಾಧ್ಯವಿಲ್ಲ; ನಮ್ಮೊಂದಿಗೆ ಯಾವ ವೇದಾಂತವೂ ಕ್ರಿಸ್ತನ ಸ್ಥಾನವನ್ನು ನಮ್ಮ ಹೃದಯಗಳಲ್ಲಿ ತೆಗೆದುಕೊಳ್ಳಲಾಗದು. – ಯಾವ ತತ್ವವೂ ದೇವರ ಪ್ರಿಯನಾಗಿರುವ, ದೇವರಿಂದ ಅಭಿಷೇಕಿಸಲ್ಪಟ್ಟ ಕ್ರಿಸ್ತನ ಸುವಾರ್ತೆಯಾಗಿ ನಾವು ಹೊಂದಿರುವ ಮಹಾ

ಸಂದೇಶವನ್ನು ಪ್ರಶ್ನಿಸುವಂತೆ ನಮಗೆ ಮಾಡಲಾರವು. "ದೇವಜನರಿಗೆ ಶಾಶ್ವತವಾಗಿರುವುದಕ್ಕೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆ ನಿಮ್ಮ ಮೇಲೆ ಬೀರಿದ ಆ ಸಂದೇಶದ ಅಮೋಘವಾದ ಪರಿಣಾಮವನ್ನು ಗಣನೆಗೆ ತಂದುಕೊಳ್ಳಿರಿ. ಇದು ವಾಣಿಗಳನ್ನಾಡುವುದು, ಅದ್ಭುತ ಕಾರ್ಯಗಳನ್ನು ಮಾಡುವುದು ಇವೇ ಮುಂತಾದ ಅದ್ಭುತವಾದ ವರಗಳನ್ನು ಹೊಂದಿದೆ. ಇದನ್ನು ಈ ವೇದಾಂತಿಗಳು ಮೂಡಣ ದೇಶಗಳ ಮಾಂತ್ರಿಕರಿಗೆ ಹೋಲಿಸುತ್ತಾರೆ. ಆದರೆ, ಇವುಗಳಲ್ಲದೆ ನಿಮ್ಮ ಹೃದಯಗಳಲ್ಲಿ ಮತ್ತೊಂದು ಸಾಕ್ಷಿಯಿದೆ – ಅಭಿಷೇಕವು ನಿಮ್ಮ ಹೃದಯಗಳನ್ನು ಮಾರ್ಪಡಿಸಿದೆ ಮತ್ತು ನೂತನ ಹೃದಯವನ್ನು ನಿಮಗೆ ದಯಪಾಲಿಸಿದೆ ಮತ್ತು ನಿಮ್ಮ ದಿನ ನಿತ್ಯದ ಜೀವಿತದಲ್ಲಿ ಪವಿತ್ರಾತ್ಮನ ಫಲಗಳನ್ನು ಉತ್ಪತ್ತಿ ಮಾಡುತ್ತವೆ. ಇವುಗಳನ್ನು ಯಾವ ಮಾಂತ್ರಿಕನೂ ಮಾಡಲು ಸಾಧ್ಯವಿಲ್ಲ. ನಿಮ್ಮನ್ನು ದುರ್ಮಾರ್ಗಕ್ಕೆ ಸೆಳೆಯಲು ಪ್ರಯತ್ನಿಸುವವರೂ ಇದನ್ನು ನಿರಾಕರಿಸಲು ಸಾಧ್ಯವಿಲ್ಲ.

ನಮ್ಮ ಪವಿತ್ರವಾದ ಧರ್ಮದ ಈ ಮೂಲಭೂತ ವಾದವುಗಳ ಮೇಲೆ – ಅಂದರೆ ಯೇಸು ಕ್ರಿಸ್ತನು ಒಬ್ಬ ಮೋಸಗಾರನಲ್ಲ, ಆತನು ಅಪ್ಪಟವಾಗಿ ದೇವರ ಮಗನೇ ಹೌದು ಮತ್ತು ಆತನು ನಮ್ಮ ವಿಮೋಚಕನು ಅಂದಮೇಲೆ ನಿತ್ಯಜೀವವೆಂಬುದು ನಾವು ಆತನೊಂದಿಗೆ ಹೊಂದಿಕೊಳ್ಳುವ ಮಹತ್ವದ ಅನ್ಯೋನ್ಯತೆಯಲ್ಲಿ ನಮಗೆ ದೊರೆಯುತ್ತದೆ ಎಂಬುದರ ಮೇಲೆ ಈ ಸುಳ್ಳು ಬೋಧಕರಿಂದಾಗಲೀ, ಮಾನವರಿಂದಾಗಲೀ ಅಥವಾ ನನ್ನಿಂದಾಗಲೀ ನಮಗೆ ಯಾವ ಬೋಧನೆಯ ಅಗತ್ಯವೂ ಇಲ್ಲ. ಈ ಪ್ರೀತಿಯ ಪವಿತ್ರಾತ್ಮನು ನಿಮ್ಮಲ್ಲಿ ನೆಲೆಯಾಗಿರುವವರೆಗೆ ಅದು ನಿಮ್ಮನ್ನು ಎಲ್ಲಾ ದೇವದೂಷಣೆಗಳಿಂದ, ಕ್ರಿಸ್ತ ವಿರೋಧಿ ತತ್ವಗಳಿಂದ ನಿಮ್ಮನ್ನು ರಕ್ಷಕನಂತೆ ಕಾಪಾಡುವುದು. ನೀವು ಯೇಸುಕ್ರಿಸ್ತನನ್ನು ದೇವರ ಮಗನೆಂದೂ, ರಕ್ಷಣೆಯ ಏಕೈಕ ಶಕ್ತಿಯೆಂದು ಒಪ್ಪಿಕೊಳ್ಳುವಾಗ "ಎಲ್ಲಾ ಗ್ರಹಿಕೆಯನ್ನು ಮೀರುವ ದೇವರ ಶಾಂತಿಯು" ನಿಮ್ಮ ಹೃದಯಗಳಲ್ಲಿ ಪ್ರವೇಶಿಸುವುದು ಎಂಬುದನ್ನು ನೀವು ನೆನಪಿನಲ್ಲಿಟ್ಟು ಕೊಂಡಿರುವ ತನಕ ಈ ಆತ್ಮವು ನಿಮ್ಮನ್ನು ಭದ್ರವಾಗಿ ಹಿಡುಕೊಂಡಿರುವುದು, ನೀವು ಈ ಅಂಶದಲ್ಲಿ ಭದ್ರವಾಗಿರುವಿರಿ. ಈ ಪರೀಕ್ಷೆಯು (ತಂದೆ ಮತ್ತು ಮಗನ ಮೂಲಕ ನೀಡಲ್ಪಟ್ಟ ಪ್ರೀತಿಯ ಪವಿತ್ರಾತ್ಮನಿಗೆ ನಿಷ್ಠೆಯಿಂದಿರುವುದು) ಸಂಗತಿಗಳನ್ನು ಸಾಬೀತು ಪಡಿಸಲು ನಿಮಗೆ ಸಹಕಾರಿಯಾಗಿದೆ; ಈ ಆತ್ಮಕ್ಕೆ ವಿರೋಧವಾದುದು, ಈ ಪ್ರೀತಿಯ ಆತ್ಮನನ್ನು ನಿರ್ಲಕ್ಷ್ಯಮಾಡುವುದು ಅಶುದ್ಧವಾದ ಆತ್ಮವಾಗಿದೆ. ಇದು ಸುಳ್ಳು ಬೋಧನೆಯಾಗಿದೆ. ಇದರ ಬೋಧನೆಯನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ನಾವು ಯಾವುದೇ ವರವನ್ನು ಹೊಂದಿದರೆ ನಾವು ಆತನಲ್ಲಿ ನೆಲೆಗೊಂಡಿರತಕ್ಕದ್ದು – ಕ್ರಿಸ್ತನನ್ನು ತೊರೆದಲ್ಲಿ ಎಲ್ಲವನ್ನೂ ತೊರೆದಂತಾಗುವುದು ಎಂಬ ಇದರ ಬೋಧನೆಯನ್ನು ನೆನಪಿನಲ್ಲಿಟ್ಟುಕೊಳ್ಳಿರಿ.

## ಮಾತಿಲ್ಲದಂಥಾಃ ನರಳಾಟ

## Groanings which Cannot be Uttered

**"ಹಾಗೆ ಪವಿತ್ರಾತ್ಮನು ಸಹಾ ನಮ್ಮ ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆ. ಹೇಗೆಂದರೆ, ನಾವು ತಕ್ಕಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥಾಃ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ. ಆದರೆ, ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದದೆ"** (ರೋಮಾ. : 8:26–27)

ಈ ಶಬ್ದಪ್ರಯೋಗವು ದೇವಜನರಿಗೆ ಅವರ ಬಗ್ಗೆ ಪರಲೋಕದ ತಂದೆಯ ಪ್ರೀತಿ ಮತ್ತು ಪಾಲನೆಯ ತಿಳುವಳಿಕೆಯನ್ನು ತಿಳಿಯಪಡಿಸುವ ಉದ್ದೇಶ ಹೊಂದಿದ್ದರೂ ಅನೇಕರು ಇದನ್ನು ತಪ್ಪಾಗಿ ಅರ್ಥಮಾಡಿ ಕೊಂಡಿರುವುದು ದುಃಖದ ಸಂಗತಿ. ಪವಿತ್ರಾತ್ಮನು ತಂದೆಯ ಬಳಿ ನಮಗಾಗಿ ನರಳಾಡುತ್ತದೆ ಎಂದು ಅವರು ನಮಗೆ ಹೇಳುತ್ತಾರೆ: ಕೆಲವರು ಈ ಗೋಳಾಟದ ಬಗ್ಗೆ ತಮಗೆ ಕೇಳಿಸುವಂಥಾಃ ಹೇಳಿಕೆಗಳನ್ನೂ ನೀಡಲು ಪ್ರಯತ್ನಿಸುತ್ತಾರೆ: ಕೆಲವರಿಂದ ಅವರು ಮಾಡುವ ಗೋಳಾಟದ ಮೊತ್ತವು ಹೇಗೋ ಪವಿತ್ರಾತ್ಮನಿಗೆ ಸಹಾಯಮಾಡುವುದೆಂದು, ಮತ್ತು ತಾವೀಗ ನೋಡಲಾಗದ ಮಾತಿಲ್ಲದಂಥಾಃ ನರಳುವಿಕೆಯನ್ನು ಸರಿದೂಗಿಸುವುದೆಂದು ಭಾವಿಸುತ್ತಾರೆ. ಪವಿತ್ರಾತ್ಮನು ಒಬ್ಬ ವ್ಯಕ್ತಿಯಾಗಿದ್ದರೆ, ಇದು ನಿಜವಾಗಿಯೂ ಆಶ್ಚರ್ಯವಾದುದು. ಪ್ರಶ್ನೋತ್ತರ ರೂಪದ ಗ್ರಂಥದವರು ಹೇಳುವಂತೆ, ಆತನು ತಂದೆ ಮತ್ತು ಮಗನೊಂದಿಗೆ ಸಮಾನ ಅಧಿಕಾರವುಳ್ಳವನು. ಆದರೂ ಇಲ್ಲಿ ಆತನು ತನ್ನ ಜನರ ಪರವಾಗಿ ತಂದೆ ಮತ್ತು ಮಗನನ್ನು ಮಾತಿಲ್ಲದಂಥಾಃ ನರಳಾಟದಿಂದ ವಿಜ್ಞಾಪಿಸು ವವನಾಗಿದ್ದಾನೆ. ನಮ್ಮ ಕರ್ತನಾದ ಯೇಸುವು ನಾವು ತಂದೆಯ ಬಳಿಗೆ ನೇರವಾಗಿ ಹೋಗಬಹುದೆಂದು ಹೇಳಿದ್ದಾನೆ. "ದೇವರು ತಾನೇ ನಿಮ್ಮನ್ನು ಪ್ರೀತಿಸುತ್ತಾನೆ" ಎಂಬ ಭರವಸೆಯನ್ನು ನೀಡುತ್ತಾನೆ. ಹೀಗಿದ್ದಾಗ್ಯೂ, ನಾವೀಗ ಪರಿಶೀಲಿಸುತ್ತಿರುವ ವಾಕ್ಯಭಾಗದಿಂದ ಕೆಲವರು ನಾವು ತಂದೆ ಮತ್ತು ಮಗನ ಬಳಿಗೆ ಪವಿತ್ರಾತ್ಮನ ಮೂಲಕ ಹೋಗಬೇಕಾಗುತ್ತದೆ, ಆತನು ನಾವು ತಂದೆ ಮತ್ತು ಮಗನಿಂದ ಅಂಗೀಕರಿಸಲ್ಪಡುವಂತೆ ನಮಗಾಗಿ ನರಳಾಟದಿಂದ ಮಾತಿಲ್ಲದಂಥಾಃ ನರಳಾಟದಿಂದ

ನಮಗಾಗಿ ಮಧ್ಯಸ್ಥನಾಗಿ ವಿಜ್ಞಾಪಿಸುತ್ತಾನೆ ಎಂಬ ಕಲ್ಪನೆಯನ್ನು ಮಾಡುತ್ತಾರೆ. ಇದು ಪವಿತ್ರಾತ್ಮ ಮತ್ತು ಆತನ ಕಾರ್ಯಾಚರಣೆಯ ಬಗ್ಗೆ ಪ್ರಚಲಿತವಾಗಿರುವ ಗೊಂದಲಕ್ಕೆ ಅನುಸಾರವಾಗಿದೆ.

ಗೋಳಾಡುವಿಕೆಯು ಮಾತಿಲ್ಲವಾದರೆ ಅದು ಗೋಳಾಡುವಿಕೆಯೇ ಅಲ್ಲ ಎಂಬುದಾಗಿ ನಾವು ಪರಿಗಣಿಸುವುದಾದರೆ ಈ ಅರ್ಥವಿವರಣೆಯ ತಪ್ಪನ್ನು ಇನ್ನೂ ಹೆಚ್ಚಾಗಿ ಗಮನಿಸಬಹುದು; ಯಾಕೆಂದರೆ ಮಾತನಾಡದಿರುವುದು ಗೋಳಾಟವಾಗದು. ಆದರೆ ಸರ್ವಶಕ್ತ ದೇವರಾದ ಯೆಹೋವನ ಪ್ರಭಾವವೂ ಅಥವಾ ಶಕ್ತಿಯೂ ಆದ ಪವಿತ್ರಾತ್ಮನು ತನ್ನನ್ನು ಬುದ್ಧಿವಂತಿಕೆಯಿಂದ ಪ್ರಕಟಿಸಿಕೊಳ್ಳಲಾರನು ಎಂದು ನಾವು ಅರ್ಥೈಸುವುದಾದರೆ, ಈ ವಚನವು ಅಷ್ಟೇ ವಿಚಿತ್ರವಾದುದು ಮತ್ತು ವಿರೋಧಾಬಾಸವಾದದ್ದು ಎಂಬುದಾಗಿ ಕಂಡುಬರುತ್ತದೆ. ಪೂರ್ವಕಾಲದಲ್ಲಿ ದೇವರ ಮನಸ್ಸು, ಚಿತ್ತವು, ಆತ್ಮವು, ಪ್ರವಾದಿಗಳ ವಿಫುಲವಾದ ಮಾತುಗಳಲ್ಲಿ ಮತ್ತು ಕಾರ್ಯಗಳಲ್ಲಿ ಪ್ರಕಟಗೊಂಡಿತೆಂಬುದನ್ನು ನಾವು ಬಲ್ಲವರಾಗಿದ್ದೇವೆ. ಪವಿತ್ರಾತ್ಮನು ಈಗ ಕಡಿಮೆ ಶಕ್ತಿ ಅಥವಾ ಸಾಮರ್ಥ್ಯವುಳ್ಳವನಾಗಿದ್ದಾನೆಂದು ನಾವು ಊಹಿಸಲು ಸಾಧ್ಯವಿಲ್ಲ. ಹಾಗಾದರೆ, – **"ಪವಿತ್ರಾತ್ಮನು ತಾನೇ ಮಾತಿಲ್ಲದಂಥಾಃ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ"** ಎಂಬ ಈ ವ್ಯಾಖ್ಯಾಯನವು ಸೂಚಿಸುವುದಾದರೂ ಏನನ್ನು?

ದೇವರಾತ್ಮನು ಯಾಚಿಸುತ್ತಾನೆಂದು ಊಹಿಸುವುದೇ ತಪ್ಪು. ಇದಕ್ಕೆ ವ್ಯತಿರಿಕ್ತವಾಗಿ, ನಮಗಾಗಿ ವಿಜ್ಞಾಪನೆಮಾಡುತ್ತಿರುವುದು ನಮ್ಮ ಸ್ವಂತ ಆತ್ಮವೇ. ಸಂತರ ಆತ್ಮಗಳು ದೇವರನ್ನು ಯಾಚಿಸುತ್ತಿರುತ್ತವೆ ಮತ್ತು ಅವುಗಳು ಕೆಲವೊಮ್ಮೆ ತನ್ನನ್ನು ಸರಿಯಾದ ರೀತಿಯಲ್ಲಿ ವ್ಯಕ್ತಪಡಿಸಲು ವಿಫಲಗೊಳ್ಳುತ್ತವೆ. ಈ ವಾಕ್ಯಭಾಗದ ಕ್ಷಣ ದರ್ಶನ ಅದರ ಸಂಬಂಧಗಳೊಂದಿಗೆ ಈ ಅರ್ಥವಿವರಣೆಯ ಔಚಿತ್ಯತೆಯನ್ನು ಪ್ರಕಟಗೊಳಿಸುತ್ತದೆ. ಅಪೋಸ್ತಲನು ಪಾಪ ಭರಿತವಾದ ಮಾನವ ಕುಲವು ತನ್ನ ಬಂಧನದಲ್ಲಿನ ಗೋಳಾಡುವಿಕೆಯ ಬಗ್ಗೆಯಷ್ಟೇ ಇಲ್ಲಿ ಬರೆಯುವವನಾಗಿದ್ದಾನೆ. ಅದಕ್ಕೆ ಅದರ ಬಂಧನದಿಂದ ಮುಕ್ತಿ ದೊರೆಯುತ್ತದೆಂಬ ಭರವಸೆಯನ್ನು ಆತನು ನಮಗೆ ನೀಡುವವನಾಗಿದ್ದಾನೆ. ಆಗ ಸಭೆಯು, 'ದೇವರ ಮಕ್ಕಳು' ತಮ್ಮ ವಿಮೋಚನಾ ಕರ್ತನೊಂದಿಗೆ ಮಹಿಮೆ ಹೊಂದಿಕೊಳ್ಳುವುದು (ವಚನಗಳು 19 ರಿಂದ 21ರ ವರೆಗೆ ನೋಡಿರಿ). ನಂತರದಲ್ಲಿ ಆತನು ಈ ಲೋಕದ ನರಳಾಟದಿಂದ ಸಭೆಯ ಪ್ರಸ್ತುತ ಪರಿಸ್ಥಿತಿಯ ಕಡೆಗೆ ಸಾಗುತ್ತಾನೆ. ಅದರಲ್ಲಿ ನಾವು ಗೋಳಾಡುವವರಾಗಿದ್ದೇವೆ – **"ಪ್ರಥಮಫಲವಾಗಿರುವ ಪವಿತ್ರಾತ್ಮ ವರವನ್ನು ಹೊಂದಿದ ನಾವಾದರೋ ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರುನೋಡುತ್ತಾ ನಮ್ಮೊಳಗೆ ನರಳುತ್ತೇವೆ"** (ರೋಮಾ. 8:23).

ಸಭೆಯಲ್ಲಿನ ನೂತನವಾದ ಅಥವಾ ಪರಿವರ್ತನೆ ಹೊಂದಿದ ಮನಸ್ಸು ಅಥವಾ ಆತ್ಮನು ಒಮ್ಮೆ ಐಹಿಕವಾದುದಾಗಿದ್ದು, ಈಗ ಪವಿತ್ರವೂ ಆತ್ಮೀಕವೂ ಆಗಿದೆ; ಆದರೆ ನಮ್ಮ ಶರೀರಗಳು ಇನ್ನೂ ಮಾನವ ಶರೀರಗಳಾಗಿದ್ದು ಆದಾಮನ ಅಸಮರ್ಪಕತೆಗಳನ್ನು ಹೊಂದಿವೆ. ಆದುದರಿಂದ, ನಾವು ನೂತನ ಸೃಷ್ಟಿಗಳಾಗಿ ಮಾಂಸಿಕ ಭಾರಹೊತ್ತವರಾಗಿದ್ದು ಪ್ರಥಮ ಪುನರುತ್ಥಾನದಲ್ಲಿ ಕ್ರಿಸ್ತನಂತಾಗುವ ವಾಗ್ದತ್ತವಾದ ವಿಮೋಚನೆಗಾಗಿ ಗೋಳಾಡುತ್ತೇವೆ. ಅಪೋಸ್ತಲನು ವಿವರಿಸುತ್ತಾನೆ; ನಾವು ನಮ್ಮ ನಂಬಿಕೆಯ ಮೂಲಕವಾಗಿ ನಮ್ಮ ಈ ಐಹಿಕವಾದ ದೇಹವು ಸತ್ತಿದೆಯೆಂದೂ ಮತ್ತು ನಮ್ಮನ್ನು ನೂತನ ಸೃಷ್ಟಿಗಳೆಂದೂ, ಸರ್ವ ಸಂಪೂರ್ಣರೆಂದೂ ಈಗ ರಕ್ಷಣೆ ಹೊಂದಿದವರೆಂದೂ ಎಣಿಸಿಕೊಳ್ಳಬಹುದು – **ನಂಬಿಕೆಯ ಮೂಲಕ ರಕ್ಷಣೆ** (24ನೇ ವಚನ). ನಾವು ನಮ್ಮನ್ನು ಹೇಗೆಂದು ಎಣಿಸಿಕೊಳ್ಳಬಹುದೆಂದು ತೋರಿಸಿದ ಮೇಲೆ, ನಾವು ದೇವರ ದೃಷ್ಟಿಯಲ್ಲಿ ನಾವು 'ನೂತನ' ಮತ್ತು 'ಪವಿತ್ರ' ಹಾಗೂ 'ಆತ್ಮೀಕ'ರೆಂದು ಎಣಿಸಲ್ಪಟ್ಟಿದ್ದೇವೆ ಎಂಬುದನ್ನು ವಿವರಿಸುತ್ತಾನೆ; ದೇವರು ನಮ್ಮನ್ನು ಈ ದೃಷ್ಟಿಕೋನದಲ್ಲಿ ನೋಡುವವನಾಗಿದ್ದು ನಮ್ಮ ಮಾಂಸಧಾರಿ ದೇಹವನ್ನಾಗಲೀ, ಬಲಹೀನತೆಗಳನ್ನಾಗಲೀ, ಅಸಮರ್ಪಕತೆಗಳನ್ನಾಗಲೀ ಮಾನ್ಯ ಮಾಡದೆ ನಮ್ಮ ಆತ್ಮವನ್ನು, ಮನಸ್ಸನ್ನು, ಉದ್ದೇಶಗಳನ್ನು, ಚಿತ್ತವನ್ನು ಮತ್ತು ನೂತನ ಸೃಷ್ಟಿಗಳಾಗಿ ನಮ್ಮನ್ನು ಆತನ ಸೇವೆಗೆ ಸಮರ್ಪಿಸಿಕೊಂಡಿರುವುದನ್ನು ಮಾತ್ರವೇ ಮಾನ್ಯ ಮಾಡುವವನಾಗಿದ್ದಾನೆ. ನಮ್ಮ ಪರಿಶುದ್ಧ ಆತ್ಮವು (ನೂತನ ಮನಸ್ಸು) ಸಿದ್ಧವಾಗಿರುವುದಾದರೂ ನಮ್ಮ ಶರೀರಕ್ಕೆ ಬಲಸಾಲದು ಎಂಬುದನ್ನು ದೇವರು ಬಲ್ಲವನಾಗಿದ್ದಾನೆ. ಆದುದರಿಂದ ಆತನು ನಮ್ಮನ್ನು ನಮ್ಮ ಶರೀರಕ್ಕನುಸಾರವಾಗಿ ನಿರ್ಣಯಿಸುವುದಿಲ್ಲ ಆದರೆ ಆತ್ಮಕ್ಕೆ ಅನುಸಾರವಾಗಿ ನಿರ್ಣಯಿಸುವವನಾಗಿದ್ದಾನೆ.

ನಾವು ಆತ್ಮನಿಂದ ಪಡಕೊಂಡವರಾಗಿರುವುದು, ನೂತನ ಚಿತ್ತವನ್ನು ನಾವು ಸ್ವೀಕರಿಸಿರುವುದು, ದೇವರಿಗೆ ಸಂಪೂರ್ಣವಾಗಿ ನಮ್ಮನ್ನು ಪ್ರತಿಷ್ಠಿಸಿಕೊಂಡಿರುವುದು, ಇವುಗಳು ದೇವರೊಂದಿಗೆ ನಮ್ಮನ್ನು ನೂತನ ಸಂಬಂಧಕ್ಕೆ ಮತ್ತು ನಾವೀಗ ಅನುಭವಿಸುತ್ತಿರುವ ಈ ಸಂತೋಷಕ್ಕೆ ತಂದಿರುವುದಾಗಿದೆ. ಅದರಂತೆ ಆತ್ಮನೂ (ನಮ್ಮ ನೂತನವಾದ ಪವಿತ್ರ ಮನಸ್ಸು) ಸಹಾ ನಮ್ಮ (ದೇಹದ) ದೌರ್ಬಲ್ಯತೆಗಳಿಂದ ನಮಗೆ ಸಹಾಯ ಮಾಡುವುದಾಗಿದೆ.

ನಮಗೆ ಎಷ್ಟೋ ವೇಳೆ ಏನು ಪ್ರಾರ್ಥನೆ ಮಾಡಬೇಕೆಂದು ತಿಳಿದಿರುವುದಿಲ್ಲ. ಆದರೆ ನಮ್ಮ ಆತ್ಮನು ತಾನೇ ನಮಗಾಗಿ ಮಾತುಗಳಿಂದ ಹೇಳಲಾಗದಂಥಾ ನರಳಾಟದೊಂದಿಗೆ ಬಿನ್ನಹಗಳನ್ನು ಮಾಡುತ್ತದೆ. ನಮ್ಮ ಹೃದಯಗಳನ್ನು ಹುಡುಕುವ ದೇವರು ನಮ್ಮ ಆತ್ಮನ ಮನಸ್ಸು (ಗ್ರೀಕ್– Phronema – inclination) ಏನೆಂದು ಬಲ್ಲವನಾಗಿದ್ದಾನೆ. ಯಾಕೆಂದರೆ ಅದುವೇ (ನಮ್ಮ ಆತ್ಮವೇ) ಸಂತರುಗಳಿಗಾಗಿ ದೇವರ ಚಿತ್ತಾನುಸಾರವಾದ ವಿಜ್ಞಾಪನೆಗಳನ್ನು ಮಾಡುವಂಥಾದ್ದು.

ಮತ್ತೊಂದು ಮಾತುಗಳಲ್ಲಿ ಹೇಳುವುದಾದರೆ, ದೇವರು ತನ್ನ ಜನರ ಹೃದಯಗಳನ್ನು ಪ್ರಾರ್ಥನೆಯಲ್ಲಿಯೂ, ಸೇವೆಯಲ್ಲಿಯೂ ಅವರ ಈ ಮಣ್ಣಿನ ಘಟವಾದ ದೇಹದ ಅಸಮರ್ಪಕತೆಯ ಹೊರತಾಗಿಯೂ ಅಂಗೀಕರಿಸಲು ಸಂತೋಷಿಸುತ್ತಾನೆ. ಆತನೂ ಈ ಹೃದಯದ ಆಕಾಂಕ್ಷೆಗಳನ್ನು ಅಂಗೀಕರಿಸುತ್ತಾನೆ.

ನಮ್ಮ ತಿಳಿಗೇಡಿತನ ಮತ್ತು ಬಲಹೀನತೆಗಳಲ್ಲಿಯೂ, ಪರಲೋಕದ ನಮ್ಮ ತಂದೆಯು ನಮ್ಮ ಮಾತುಗಳನ್ನಲ್ಲದೆ ನಮ್ಮ ಹೃದಯದ ಉದ್ದೇಶಗಳನ್ನು ಅಂಗೀಕರಿಸುವುದು ಎಷ್ಟೊಂದು ಅದೃಷ್ಟಕರ! ಇದಕ್ಕಾಗಿ ಆತನ ಜನರು ಆಗಾಗ್ಗೆ ಪ್ರಬಲವಾಗಿ ದುರಭಿಪ್ರಾಯಪಟ್ಟು ಬೇಡಿಕೊಂಡಿದ್ದಾರೆ! (ಯಾಕೋಬ 4:3). ದೇವಜನರು ತಮ್ಮನ್ನು ಪವಿತ್ರಾತ್ಮ ಮತ್ತು ಬೆಂಕಿಯಿಂದ ದೀಕ್ಷಾಸ್ನಾನಗೊಳಿಸುವಂತೆ ಬೇಡಿಕೊಳ್ಳುವಾಗಲೆಲ್ಲಾ ನಾವು ಈ ಬಗ್ಗೆ ಆಲೋಚಿಸುತ್ತೇವೆ. ಈ ಪ್ರಾರ್ಥನೆಯನ್ನು ಒಳ್ಳೆಯ ಮನಸ್ಸಾಕ್ಷಿಯಿಂದ ಮತ್ತು ಆಶೀರ್ವಾದ ಪಡಕೊಳ್ಳುವ ಬಯಕೆಯಿಂದಲೇ ಮಾಡಲಾಗುತ್ತದೆ. ಆದರೆ ಆತನು ಉಲ್ಲೇಖಿಸಿರುವ ದೇವರ ವಾಕ್ಯಭಾಗವನ್ನು ಅರ್ಥಮಾಡಿಕೊಳ್ಳದೆ ಬಿನ್ನಹ ಮಾಡುವಾತನು ನಿಜವಾಗಿಯೂ ಶಾಪವು ಅನುಸರಿಸುವ ಆಶೀರ್ವಾದವನ್ನು ಬೇಡಿಕೊಳ್ಳುವ ವನಾಗಿದ್ದಾನೆ. ಕ್ರಿಸ್ತನು ನಮ್ಮನ್ನು ಪವಿತ್ರಾತ್ಮ ಮತ್ತು ಬೆಂಕಿಯಿಂದ ದೀಕ್ಷಾಸ್ನಾನ ಮಾಡಿಸುತ್ತಾನೆಂಬ ಸ್ನಾನಿಕನಾದ ಯೋಹಾನನ ಭವಿಷ್ಯವಾಣಿಯು ಪಂಚಾಶತ್ತಮ ದಿನದಂದು ಕಾಯ್ದುಕೊಂಡಿದ್ದ ಸಭೆಯ ಮೇಲೆ ತರುವಾಯ 'ಉಳಿದ' ನಂಬಿಗಸ್ಥ ಇಸ್ರಾಯೇಲ್ಯರ ಮೇಲೆ ಬಂದಾಯಿತು. ಆದರೆ ಇದರ ನಂತರದ ಲಕ್ಷಣವು ತಿರಸ್ಕೃತ ಯೆಹೂದ್ಯ ಜನಾಂಗದ ಮೇಲೆ ಬೆಂಕಿಯ ದೀಕ್ಷಾಸ್ನಾನ, ನಾಶನ, ಉಪದ್ರವಗಳ ಮೂಲಕ ನೆರವೇರಿತು. ಅದು ಅವರ ರಾಜ್ಯಾಡಳಿತವನ್ನು ಕ್ರಿ.ಶ. 70ರಲ್ಲಿ ಸಂಪೂರ್ಣವಾಗಿ ನಾಶಗೊಳಿಸಿತು. ಆದರೆ ಕೃಪಾಪೂರ್ಣನಾದ ದೇವರು ಆತನ ಜನರು ಪ್ರಾರ್ಥನೆಯ ಮೂಲಕ ಕೇಳಿರುವುದಕ್ಕೆ ಉತ್ತರ ನೀಡದೆ ಬದಲಾಗಿ ಬೇಡುವವರ ಇಂಗಿತವನ್ನರಿತು – ಅವನಿಗೆ ಆಶೀರ್ವಾದವನ್ನು ಮಾತ್ರವೇ ದಯಪಾಲಿಸುವನು.

ಕೆಲವರಿಗೆ ತಾವು ಹಠಾತ್ತಾಗಿ ತಪ್ಪು ಹಾದಿಗೆ ಸೇರಲ್ಪಟ್ಟ ಹಾಗೂ ಪತನಗೊಂಡ ಮಾನವನ ಕೆಲವೊಂದು ಬಲಹೀನತೆಗಳ ಮೂಲಕ ವಿರೋಧಿಯ ಬಲೆಗೆ ಬಿದ್ದ ಅನುಭವ ಉಂಟಾಯಿತು. ಅವರು ಪ್ರಾರ್ಥನೆಯ ಮೂಲಕ ಪರಲೋಕದ ಕೃಪಾಸನವನ್ನು ಸಮೀಪಿಸುವಾಗ ಬಹುಮಟ್ಟಿಗೆ ಕುಂದಿದ ಹೃದಯವುಳ್ಳವರಾಗಿದ್ದರು. ಅವರು ಮಾತನಾಡುವ ಶಬ್ದಗಳೇ ದೊರೆಯದೆ 'ಹೊರೆಹೊತ್ತವರಾಗಿ' ಆತ್ಮದಲ್ಲಿಯೇ ನರಳುವವರಾದರು. ಆದರೆ ಪರಲೋಕದ ತಂದೆಯು ಅವರು ತಮ್ಮ ಬಿನ್ನಹಗಳನ್ನು ಆತನು ಸರಿಯಾಗಿ ಕೇಳುವಂತೆ ಉಚಿತವಾದ ಭಾಷೆಯಲ್ಲಿಯೇ ಮಾತಾಡಬೇಕೆಂದು ಒತ್ತಾಯಪಡಿಸಲಿಲ್ಲ; ಬದಲಾಗಿ ಆತನು ಕೃಪೆಯಿಂದ ಅವರ ಹೃದಯದ ಆಕಾಂಕ್ಷೆಗಳಿಗೆ, ಅವರ ಹೃದಯದ ಮಾತಿಲ್ಲದಂಥಾ ನರಳುವಿಕೆಗೆ ತಕ್ಕಂತೆ ಉತ್ತರಿಸಿದನು. ಅವು ಆತನ ಕ್ಷಮಾಪಣೆಯನ್ನು, ಆಶೀರ್ವಾದ ಮತ್ತು ಸಮಾಧಾನವನ್ನು ಬಯಸುವುದಾಗಿತ್ತು. ಅವರು ಬಾಯಿಂದ ಅರಿಕೆಮಾಡಲಾಗದ ಪ್ರಾರ್ಥನೆಗಳಿಗೆ ಆತನು ಉತ್ತರಿಸಿದನು, ಅವರಿಗೆ ಬಲವನ್ನೂ ಆಶೀರ್ವಾದಗಳನ್ನೂ ಮತ್ತು ಕ್ಷಮಾಪಣೆಯ ಆಶೀರ್ವಾದದಾಯಕವಾದ ಗ್ರಹಿಕೆಯನ್ನು ದಯಪಾಲಿಸಿದನು.

ಈ ಸಮಗ್ರವಾದ ಸಂಬಂಧದಲ್ಲಿ ಅಪೋಸ್ತಲನ ವಾದವು ಇದೇ ಆಗಿದೆ. – **"ಹಾಗಾದರೆ ಈ ವಿಷಯದಲ್ಲಿ ನಾವು ಏನು ಹೇಳೋಣ?"** ದೇವರು ನಮ್ಮ ಪರವಾಗಿ ಎಲ್ಲಾ ವ್ಯವಸ್ಥೆಯನ್ನು ಮಾಡಿರುತ್ತಾನೆ, ಹೀಗೆ ಮಾಡುವಾಗ ನಮ್ಮ ಬಲಹೀನತೆ ಮತ್ತು ಸಮರ್ಪಕತೆಯನ್ನು ಗಣನೆಗೆ ತರುವುದಿಲ್ಲ. ಇವು ನಮ್ಮ ಇಚ್ಛೆಗೆ ವಿರುದ್ಧವಾಗಿದೆ. ನಾವು ಮಾಡುವ ಈ ಕಾರ್ಯವನ್ನು ಆತನು ಪರಿಗಣಿಸುವುದಿಲ್ಲ – ನಾವು ಮಾಡಿದ ಬಿನ್ನಹಗಳ ಕೊರತೆಯನ್ನು ಮತ್ತು ಆಕಾಂಕ್ಷೆಗಳನ್ನು ವ್ಯಕ್ತಪಡಿಸಲಾಗದ ಅಸಮರ್ಥತೆಯನ್ನು ಲೆಕ್ಕಿಸುವುದಿಲ್ಲ. ಬದಲಾಗಿ ಆತನು ನಮ್ಮ ಮನಸ್ಸಿನ ಪವಿತ್ರತೆಗೆ ಪ್ರಕಾರವಾಗಿ ಆಶೀರ್ವದಿಸಲು ವ್ಯವಸ್ಥೆ ಮಾಡಿದ್ದಾನೆ. ಏಕೆಂದರೆ ನಮ್ಮ ಅಪರಿಪೂರ್ಣತೆಯ ಪ್ರಾರ್ಥನೆಯ ನರಳಾಟವನ್ನು ನಾವು ಸರಿಯಾಗಿ ತಿಳಿಸಲು ಆಗದು. ಆತನು "ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು? ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; ಮಗನನ್ನು ಕೊಟ್ಟಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೇ ಇರುವನೇ? (ರೋಮಾ. 8:31) ಎಂಬ ಮಾತುಗಳಿಂದ ಅಪೋಸ್ತಲನು ತನ್ನ ವಾದವನ್ನು ಮುಕ್ತಾಯಗೊಳಿಸುತ್ತಾನೆ.

## ಆತ್ಮನು ಯಾವ ರೀತಿಯಲ್ಲಿ ಈ ಲೋಕವನ್ನು ಆಕ್ಷೇಪಿಸುತ್ತದೆ ?

## How The Spirit Reprove The World

**"ಆತನು (ಸತ್ಯದ ಆತ್ಮನು) ಬಂದಾಗ ಸತ್ಯ, ನೀತಿ, ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು**" – ಯೋಹಾನ 16:8.

ಸತ್ಯದ ಆತ್ಮನಿಗೆ ಪುಲ್ಲಿಂಗವನ್ನು ಬಳಸುವ ಉದ್ದೇಶದ ಬಗ್ಗೆ ನಾವೀಗಾಗಲೇ ಪರಿಗಣಿಸಿದ್ದೇವೆ. ಯಾಕೆಂದರೆ, ಇದು ಪುರುಷನಾದ ದೇವರನ್ನು ಪುಲ್ಲಿಂಗದಲ್ಲಿ ಪ್ರತಿನಿಧಿಸುತ್ತದೆ. ಪವಿತ್ರಾತ್ಮನು ಪಾಪಿಗಳಲ್ಲಿ ಅವರ ಸುಧಾರಣೆಗಾಗಿ ಕಾರ್ಯವೆಸಗುತ್ತದೆ ಎಂಬುದನ್ನು ರುಜುವಾತು ಪಡಿಸಲು ಕೆಲವಾರು ಉದಾಹರಣೆಯ ವಾಕ್ಯಭಾಗವನ್ನು ನಾವೀಗ ಪರಿಶೀಲಿಸುತ್ತಿದ್ದೇವೆ. ಅಂಥಾಃ ದೃಷ್ಟಿಕೋನವು ಸಂಪೂರ್ಣವಾಗಿ ತಪ್ಪಾದುದು ಎಂದು ನಾವು ಒತ್ತಾಯ ಪೂರ್ವಕವಾಗಿ ಅಭಿಪ್ರಾಯಪಡುತ್ತೇವೆ – ಯಾಕೆಂದರೆ ಪವಿತ್ರಾತ್ಮವು ಕೇವಲ ಪ್ರತಿಷ್ಠೆಗೊಂಡ ವಿಶ್ವಾಸಿಗಳಿಗೆ ಮಾತ್ರವೇ ನೀಡಲಾಗಿದೆ; ಅದು ಅವಿಶ್ವಾಸಿಗಳಿಗೆ ನೀಡಲ್ಪಟ್ಟಿರುವುದಿಲ್ಲ. ಈ ಪರಿಣಾಮವಾಗಿ ಸಾಮಾನ್ಯವಾಗಿ ಹೇಳಿಕೊಳ್ಳುವಂತೆ ಅದು ಅವಿಶ್ವಾಸಿಗಳ ಮಧ್ಯೆ ಕಾರ್ಯಸಾಧಿಸುವುದಿಲ್ಲ. ಇದಕ್ಕೆ ತೀರಾ ವ್ಯತಿರಿಕ್ತವಾಗಿ, ಈ ಲೋಕದ ಮಕ್ಕಳು ಈ ಪ್ರಾಪಂಚಿಕ ಆತ್ಮನನ್ನು ಹೊಂದಿರುವರು; ದೇವರ ಮಕ್ಕಳು ಮಾತ್ರವೇ ದೇವರ ಆತ್ಮನನ್ನು, ಪವಿತ್ರಾತ್ಮನನ್ನು, ಮನಸ್ಸು, ಚಿತ್ತ ಅಥವಾ ಪ್ರವೃತ್ತಿಯನ್ನು ಹೊಂದಿಕೊಂಡಿರುತ್ತಾರೆ. ಈ ಪ್ರಾಪಂಚಿಕ ಆತ್ಮನು ಅಥವಾ ಶರೀರಭಾವದವುಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು. ಶರೀರಭಾವದ ಆತ್ಮವು ದೇವರಾತ್ಮನ ಸಂಗತಿಗಳನ್ನು ತಿಳಿದಿರಲು ಸಾಧ್ಯವಿಲ್ಲ ಯಾಕೆಂದರೆ ಅವುಗಳನ್ನು ಆತ್ಮೀಕವಾದ ರೀತಿಯಲ್ಲಿ ಮಾತ್ರವೇ ಗ್ರಹಿಸಬಹುದಾಗಿದೆ. – ಪವಿತ್ರಾತ್ಮನನ್ನು ಹೊಂದಿದವರು ಮಾತ್ರವೇ ಅವನ್ನು ಗ್ರಹಿಸಬಹುದು. ಆದುದರಿಂದ ಅದು ಕಂಡು ಬರುವ ಕಡೆಗಳಲ್ಲಿ ಎಲ್ಲವೂ ಪವಿತ್ರವೂ ದೇವಾನುಗ್ರಹವೂ, ಪುನಃಶ್ಚೇತನದ ಪುರಾವೆಯೂ, ನೂತನ ಜೀವಿತವನ್ನು ಪಡಕೊಳ್ಳುವಿಕೆಯೂ ಆಗಿದೆ. ಇದಕ್ಕನುಗುಣವಾಗಿ ನಾವು – **"ಯಾರಲ್ಲಿಯಾದರೂ ಕ್ರಿಸ್ತನ ಆತ್ಮನು ಇಲ್ಲವಾದರೆ, ಆತನು ದೇವರವನಲ್ಲ"** ಎಂದು ಓದುತ್ತೇವೆ. ಕ್ರಿಸ್ತನ ಆತ್ಮವಿಲ್ಲದವರು ಸಾಮಾನ್ಯವಾಗಿ ಈ ಲೋಕಕ್ಕೆ ಸೇರಿದವರು. ಅವರು ತಂದೆಯ ಆತ್ಮನನ್ನು ಹೊಂದಿಲ್ಲದ ಕಾರಣ ಅವರು ಆತನವರಲ್ಲ.

ದೇವರ ಆತ್ಮನು ಅದರ ಫಲಗಳು ಮತ್ತು ಮಾತುಗಳ ಮೂಲಕ ಸಾಕ್ಷಿಕೊಡುವುದರಿಂದ ನಾವು ಪುನಃಶ್ಚೇತನಗೊಂಡಿರುವುದಕ್ಕೆ ಪುರಾವೆಯಾಗಿದೆ. ಸಭೆಯಲ್ಲಿರುವ ದೇವರ ಆತ್ಮವು ಈ ಲೋಕದಲ್ಲಿರುವ ಆತ್ಮವಲ್ಲ ಎಂಬುದಕ್ಕೂ ಇದು ಪುರಾವೆಯಾಗಿದೆ. ಯಾಕೆಂದರೆ ದೇವರ ಆತ್ಮನು ಯಾವುದೇ ಅರ್ಥದಲ್ಲಿ ಶರೀರಭಾವವುಳ್ಳದ್ದಲ್ಲ. ಅಂಥವರನ್ನು ದೇವರ ವಾಕ್ಯದಲ್ಲಿ 'ಕ್ರೋಧದ ಮಕ್ಕಳು', 'ಈ ಲೋಕದ ಮಕ್ಕಳು' ಎಂದು ಕರೆಯಲಾಗಿದೆ. ಅವರ ತಂದೆಯು ಪಿಶಾಚನಾಗಿದ್ದಾನೆ. ಪರಂತು 'ಸತ್ಯದ ಆತ್ಮನು' 'ಪ್ರೀತಿಯ ಆತ್ಮನು' ಸಮಂಜಸವಾದ ರೀತಿಯಲ್ಲಿ ಈ ಲೋಕದ ಆತ್ಮನನ್ನು ಸುಧಾರಿಸಿದೆ ಎಂಬುದನ್ನು ನಾವು ಮರೆಯಲಾಗದು; ಹೀಗಿರುವುದರಿಂದ ಅದು ಅಂಧಕಾರದ ಆತ್ಮವಾಗಿರುವಾಗಲೂ, ಸ್ವಾರ್ಥತೆಯುಳ್ಳ ಆತ್ಮವಾಗಿರುವಾಗಲೂ, ಶಾರೀರತನವುಳ್ಳ ಆತ್ಮವಾಗಿರುವಾಗಲೂ, ಪ್ರಪಂಚವು ಕೆಲವು ಮಟ್ಟಿಗೆ ಔಪಚಾರಿಕವಾಗಿ, ಬಾಹ್ಯರೀತಿಯಲ್ಲಿ ಪವಿತ್ರಾತ್ಮನ ಕೆಲವೊಂದು ಸೊಬಗನ್ನು ಅನುಕರಿಸುತ್ತದೆ. ವಿನಯಶೀಲತೆ, ಕರುಣೆ ಮತ್ತು ತಾಳ್ಮೆಯಲ್ಲಿ ಪ್ರತಿನಿಧಿಸುವ ಪವಿತ್ರಾತ್ಮನ ಸೊಬಗು ಪುನಃಶ್ಚೇತನ ಹೊಂದದವರ ಮೇಲೆ ಯಾವುದೇ ಪರಿಣಾಮವನ್ನುಂಟುಮಾಡಿರುವುದಿಲ್ಲ.

ಈ ಲೋಕದ ಕೆಲವೊಂದು ಜನರು ಆತ್ಮನ ಈ ರೀತಿಯ ಸೊಬಗನ್ನು ಬೆಳೆಸಿಕೊಳ್ಳುತ್ತಾರೆ. ಯಾಕೆಂದರೆ ಅವುಗಳು ಅವರ ಜೀವನದ ಸನ್ನಡತೆಗಳಾಗಿ, ಉತ್ತಮ ಪೋಷಣೆ ಮುಂತಾಗಿ ರೂಪುಗೊಂಡಿವೆ. ಪವಿತ್ರ ಆತ್ಮನ ತತ್ವಗಳೊಂದಿಗೆ ಸಾಮರಸ್ಯವಿಲ್ಲದ ಹೃದಯವುಳ್ಳ ಅನೇಕರು ತಮ್ಮ ನೀತಿಭ್ರಷ್ಟತೆಯುಳ್ಳ, ಪುನಃಶ್ಚೇತನವಿಲ್ಲದ, ಅಪವಿತ್ರವೂ, ಸ್ವಾರ್ಥತೆಯುಳ್ಳದ್ದೂ, ಕರ್ತನ ಮತ್ತು ಆತನ ಆತ್ಮದೊಂದಿಗೆ ಆತನ ಆತ್ಮನ ಪವಿತ್ರತೆಯೊಂದಿಗೆ ಸಾಮರಸ್ಯವಿಲ್ಲದ್ದೂ ಆದ ತಮ್ಮ ಒಳಮೈಯನ್ನು ಮುಚ್ಚುವುದಕ್ಕಾಗಿ ಈ ಸೊಬಗನ್ನು ಹೊರತಳಕನ್ನಾಗಿ ಬಳಸಿಕೊಳ್ಳುತ್ತಾರೆ. ಆದುದರಿಂದ, ತಮ್ಮ ಗುಣನಡತೆಯ ಬಾಹ್ಯರೂಪವನ್ನು ಮಿಂಚಿಸುವವರ ಹಾಗೂ ದೇವರಾತ್ಮನಿಂದ ಹೃದಯ ಪರಿವರ್ತನೆಗೊಂಡವರ ನಡುವೆ ವ್ಯತ್ಯಾಸ ತಿಳಿಯಬೇಕು. ಎರಡನೆಯವರು ಮಾತ್ರವೇ ದೇವರ ಮಕ್ಕಳಾಗಿದ್ದಾರೆ. ಅವರಿಗೆ ಆತನ ಅನುಗ್ರಹವುಂಟು ಮತ್ತು ಅವರು ಇಷ್ಟರಲ್ಲಿಯೇ ಆಶೀರ್ವದಿಸಲ್ಪಡುವರು ಮತ್ತು ಮಹಿಮೆ ಹೊಂದಿಕೊಳ್ಳುವರು.

ಹೀಗಿರುವಲ್ಲಿ, ದೇವರ ಆತ್ಮನು ಕೇವಲ ಆತನವರಿಗೆ, ಕ್ರಿಸ್ತನಲ್ಲಿ ನಂಬಿಕೆಯುಳ್ಳವರಿಗೆ ಮತ್ತು ಪ್ರತಿಷ್ಠಿಸಿಕೊಂಡವರೊಂದಿಗೆ ಮಾತ್ರವೇ ಸಂಪರ್ಕವುಳ್ಳದ್ದಾಗಿದ್ದರೆ **"ಆತನು (ಸತ್ಯದ ಆತ್ಮನು) ಬಂದು ಸತ್ಯ ನೀತಿ ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು"** ಎಂಬ ನಮ್ಮ ಕರ್ತನ ಮೇಲಿನ ಮಾತುಗಳ ಅರ್ಥವಾದರೂ ಏನು? ಎಂಬ ಪ್ರಶ್ನೆ ಹುಟ್ಟಿಕೊಳ್ಳುವುದು.

ದೇವರಾತ್ಮವನ್ನು ಪಡಕೊಳ್ಳಲಿರುವ ತನ್ನ ಅನುಯಾಯಿಗಳು, ಮತ್ತು ಅದನ್ನು ಶ್ರೀಮಂತವಾಗಿ ಹೊಂದಿರುವ ಅವರುಗಳು ತಮ್ಮ ವಿಶ್ವಾಸ ಮತ್ತು ವಿಧೇಯತೆಗಳಿಗನುಸಾರವಾಗಿ ಈ ಲೋಕದ ಬೆಳಕಾಗಿರುತ್ತಾರೆ ಎಂಬ ಕರ್ತನ ಪ್ರಕಟನೆಯನ್ನು ನಾವು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಸತ್ಯವಾಗಿ ಪ್ರತಿಷ್ಠೆ ಹೊಂದಿದ ಸಭೆಗಳ ಮುಂದೆ ಬೆಳಗುವ ಈ ಬೆಳಕೇ ಪ್ರಪಂಚದ, ಲೌಕಿಕ ಮನಸ್ಸುಳ್ಳ ಹೆಸರು ಮಾತ್ರದ ಸಭೆಗಳ ಮೇಲೆ ಬೆಳಕು ಚೆಲ್ಲಿ ಅವರ ಅಂಧಕಾರವನ್ನು ಆಕ್ಷೇಪಿಸಲು ಹವಣಿಸುವುದು. ನಮ್ಮ ಕರ್ತನು ದೇವರಾತ್ಮನಿಂದ ಪ್ರತಿಷ್ಠೆಗೊಂಡ ಮೇಲೆ ತನ್ನ ಬಗ್ಗೆ ಹೀಗೆ ಹೇಳಿದನು. **"ನಾನೇ ಲೋಕಕ್ಕೆ ಬೆಳಕು, ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು"** (ಯೋಹಾನ 8:13) ಮತ್ತು ಪುನಃ **"ನಾನು ಲೋಕದಲ್ಲಿರುವಾಗ ಲೋಕಕ್ಕೆ ಬೆಳಕಾಗಿದ್ದೇನೆ"** (ಯೋಹಾನ 9:5) ಎಂತಲೂ ಹೇಳಿದ್ದಾನೆ. ಈ ಸುವಾರ್ತಾಯುಗದ ತನ್ನ ಸಭೆಯನ್ನುದ್ದೇಶಿಸಿ **"ನೀವು ಲೋಕಕ್ಕೆ ಬೆಳಕಾಗಿದ್ದೀರಿ . . . ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ"** (ಮತ್ತಾಯ 5:14–15) ಎಂದಿದ್ದಾನೆ.

ಅಪೋಸ್ತಲನಾದ ಪೌಲನು ಕ್ರಿಸ್ತನ ಅದೇ ದೇಹವನ್ನು ಉದ್ದೇಶಿಸಿ **"ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದಿರಿ. ಆದರೆ ಈಗ ನೀವು ಕ್ರಿಸ್ತನಲ್ಲಿ ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ"** (ಎಫೆಸ 5:8) ಎಂತಲೂ **"ನೀವೆಲ್ಲರೂ ಬೆಳಕಿನವರೂ ಹಗಲಿನವರೂ ಆಗೀದ್ದಿರಷ್ಟೆ; ನಾವು ರಾತ್ರಿಯವರೂ ಅಲ್ಲ, ಕತ್ತಲೆಯವರೂ ಅಲ್ಲ. ಆದಕಾರಣ ನಾವು ಇತರರಂತೆ ನಿದ್ದೆಮಾಡದೆ ಎಚ್ಚರವಾಗಿರೋಣ"** (1 ಥೆಸ. 5:5–6) ಎಂತಲೂ ಬುದ್ಧಿಮಾತುಗಳನ್ನು ಹೇಳುವವನಾಗಿದ್ದಾನೆ. ಪುನಃ ಆತನು **"ಕತ್ತಲೆ"ಯೊಳಗಿಂದ ಬೆಳಕು ಹೊಳೆಯಲಿ ಎಂದು ಹೇಳಿದ ದೇವರು ತಾನೇ ಯೇಸುಕ್ರಿಸ್ತನ ಮುಖದಲ್ಲಿ ತೋರುವ ದೇವಪ್ರಭಾವ ಜ್ಞಾನವೆಂಬ ಪ್ರಕಾಶವು ಅನೇಕರಿಗೆ ಉಂಟಾಗುವುದಕ್ಕಾಗಿ ನಮ್ಮ ಹೃದಯಗಳಲ್ಲಿ ಹೊಳೆದನು"** ಎಂದು ಬರೆಯುತ್ತಾನೆ (2 ಕೊರಿಂಥ 4:6). ಹೀಗಾಗಿ ನಾವು ಇದು ದೇವರ ಸತ್ಯತೆಯ, ಪವಿತ್ರ ಆತ್ಮ, ಮನಸ್ಸು ಅಥವಾ ಮನೋವೃತ್ತಿಯ ಬೆಳಕಾಗಿದ್ದು ನಮ್ಮ ಹೃದಯದಲ್ಲಿ ಪ್ರಕಾಶಿಸುತ್ತಿದ್ದು ಇದು ಲೋಕದ ಮೇಲೆಯೂ ಪ್ರಕಾಶಿಸುವುದನ್ನು ನೋಡುತ್ತೇವೆ ; ಆದುದರಿಂದ ಪೌಲನು ಎಚ್ಚರಿಸುತ್ತಾ **"ಗುಣಗುಟ್ಟದೆಯೂ ವಿವಾದವಿಲ್ಲದೆಯೂ ಎಲ್ಲವನ್ನು ಮಾಡಿರಿ. ಹೀಗೆ ನೀವು ನಿರ್ದೋಷಿಗಳೂ, ಯಥಾರ್ಥ ಮನಸ್ಸುಳ್ಳವರೂ ಆಗಿದ್ದು ವಕ್ರಬುದ್ಧಿಯುಳ್ಳ ಮೂರ್ಖ ಜಾತಿಯ ಮಧ್ಯದಲ್ಲಿ ದೇವರ ನಿಷ್ಕಳಂಕರಾದ ಮಕ್ಕಳಾಗಿರುವಿರಿ. ಇವರೊಳಗೆ ನೀವು ಸರ್ವರಿಗೂ ಜೀವದಾಯಕ ವಾಕ್ಯವನ್ನು ತೋರಿಸುವವರಾಗಿದ್ದು ಲೋಕದೊಳಗೆ ಹೊಳೆಯುವ ಜ್ಯೋತಿರ್ಮಂಡಲಗಳಂತೆ ಕಾಣಿಸುವವರಾಗಿದ್ದೀರಿ"** (ಫಿಲಿಪ್ಪಿ 2:14–16) ಎಂದು ಹೇಳುತ್ತಾನೆ.

ಈ ರೀತಿಯಲ್ಲಿ ಪವಿತ್ರಾತ್ಮವು ನೇರವಾಗಿ ಅಲ್ಲ, ಪ್ರತಿಫಲನೆಯಿಂದ ಲೋಕದ ಮೇಲೆ ಪ್ರಕಾಶಿಸುತ್ತದೆ ಎಂಬುದನ್ನು ನಾವು ನೋಡುತ್ತೇವೆ. ಅವರನ್ನು ಸಂಪರ್ಕಿಸಿ ಅವರಲ್ಲಿ ಕಾರ್ಯಸಾಧಿಸುತ್ತಿರುವುದು ದೇವರಾತ್ಮವಲ್ಲ, ಆದರೆ ದೇವರ ಪವಿತ್ರಾತ್ಮನು ಆತನ ಜನರಲ್ಲಿ ಕಾರ್ಯಸಾಧಿಸುತ್ತಿದ್ದಾನೆ, ಅವರು ಆತನಿಂದ ಮುದ್ರೆಹೊಂದಿದ್ದಾರೆ ಮತ್ತು ಇದು ಈ ಲೋಕದ ಅಂಧಕಾರದ ಮುಂದೆ ಪ್ರಕಾಶಿಸುತ್ತಿದೆ.

ಈ ಲೋಕವು ಪ್ರತಿಷ್ಠೆಗೊಂಡ ಸಭೆಯಲ್ಲಿ ಯಾವ ರೀತಿಯಲ್ಲಿ ಪವಿತ್ರಾತ್ಮನಿಂದ ನಿಂದನೆಗೊಳಗಾಗುತ್ತದೆ ಎಂಬುದರ ಬಗ್ಗೆ ಅಪೋಸ್ತಲನು ನಮಗೆ ಸುಳಿವು ಕೊಡುವಂತೆ – **"ಬೆಳಕಿನವರಂತೆ ನಡೆದುಕೊಳ್ಳಿರಿ. . . ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು. ಅವುಗಳಲ್ಲಿ ಪಾಲುದಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ . . . ಬೆಳಕಿನಿಂದ ಎಲ್ಲಾ ಕೃತ್ಯಗಳ ನಿಜಗುಣವು ತೋರಿಬರುತ್ತದೆ, ಆದರಿಂದ ಕೆಟ್ಟದ್ದು ಕೆಟ್ಟದ್ದೇ ಎಂದು ಕಾಣಿಸುವುದು"** (ಎಫೆಸ 5:8,11,13). ದೇವರ ಮನಸ್ಸು ಮತ್ತು ಆತ್ಮನನ್ನು ವ್ಯಕ್ತಪಡಿಸುವ ದೇವರ ಸತ್ಯದ ಬೆಳಕು ಪವಿತ್ರವಾದ ಜೀವಿತದ ಮೂಲಕ ಪ್ರಕಾಶಿಸುವಾಗ ಅದು ಪವಿತ್ರಾತ್ಮವಾಗಿದೆ ಮತ್ತು ಈ ಲೋಕದ ಅಂಧಕಾರವನ್ನು ಖಂಡಿಸುತ್ತದೆ ಮತ್ತು ಅದನ್ನು ನೋಡುವವರು ಪಾಪವು ನೀತಿವಂತಿಕೆಯ ವಿರುದ್ಧವಾಗಿದೆ ಎಂಬುದನ್ನು ಕಂಡುಕೊಳ್ಳುವರು. ಈ ಜ್ಞಾನೋದಯದಿಂದ ಅವರಿಗೆ ಮುಂಬರಲಿರುವ ನ್ಯಾಯತೀರ್ಪಿನ ಮನವರಿಕೆಯಾಗುತ್ತದೆ. ಆ ನ್ಯಾಯತೀರ್ಪಿನಲ್ಲಿ ನೀತಿವಂತಿಕೆಗೆ ಪ್ರತಿಫಲ ದೊರೆಯಲಿದೆ ಮತ್ತು ಪಾಪವು ಶಿಕ್ಷೆಹೊಂದಲಿದೆ. ಸತ್ಯದ ಮಾತುಗಳು ಸಾಧ್ಯವಿಲ್ಲದೆ ಹೋದಾಗ್ಯೂ ಭಕ್ತಿವಂತನ ಜೀವಿತವು ಭಕ್ತಿಹೀನರಿಗೆ ಯಾವಾಗಲೂ ಖಂಡನೀಯವೇ.

ದೇವಜನರಲ್ಲಿರುವ ಪವಿತ್ರಾತ್ಮನು ಅಪವಿತ್ರ ಮತ್ತು ಸ್ವಾರ್ಥವುಳ್ಳ ಆತ್ಮಗಳನ್ನು ಖಂಡಿಸುವುದರಿಂದ ಅಪೋಸ್ತಲನು ಗೌರವಾರ್ಹರನ್ನು **"ನೀವೇ ನಮ್ಮ ಯೋಗಾತ್ಯಾಪತ್ರ; ಅದು ನಮ್ಮ ಹೃದಯಗಳಲ್ಲೇ ಬರೆದದೆ; ಆ ಪತ್ರವನ್ನು ಎಲ್ಲರೂ ಬಲ್ಲರು, ಎಲ್ಲರೂ ಓದುತ್ತಾರೆ"** (2 ಕೊರಿಂಥ 3:2) ಎಂಬುದನ್ನು ನೆನಪು ಮಾಡಿಕೊಳ್ಳುವಂತೆ ಒತ್ತಾಯಿಸುತ್ತಾನೆ. ಕ್ರಿಸ್ತನ ಹೆಜ್ಜೆಜಾಡನ್ನು ಅನುಸರಿಸುತ್ತಿರುವ ನೀತಿನಿರ್ಣಯ ಹೊಂದಿದ ಮತ್ತು ಗೌರವಾನ್ವಿತವಾದ ಸಭೆಯ ಬೆಳಕು ನಿರೀಕ್ಷಿತ ರೀತಿಯಲ್ಲಿ ಹೆಚ್ಚಿನ ಪ್ರಭಾವ ಬೀರಲು ಸಾಧ್ಯವಿಲ್ಲದಿದ್ದಾಗ್ಯೂ ಅದು

ಸದಾಕಾಲಕ್ಕೆ ಲೋಕಕ್ಕೆ ಬೆಳಕಾಗಿದೆ. ನಮ್ಮ ಕರ್ತನ ವಿಷಯದಲ್ಲಿಯೂ ಅದೇ ಆಗಿತ್ತು. ಅಂಧಕಾರದ ಆತ್ಮದವರೆಲ್ಲರೂ ಆತನನ್ನು ಬಹಳವಾಗಿ ದ್ವೇಷಿಸಿದ್ದಾರೆ. ಯಾಕೆಂದರೆ ಅವರ ಅಂಧಕಾರದ ಆತ್ಮವು ಬೆಳಕಿನ ಆತ್ಮನ ನಿಂದನೆಗೊಳಗಾಗಿದೆ. ಈ ಕಾರಣದಿಂದ, ಮಹಾ ಪ್ರಕಾಶದೂತನಾದ ಕರ್ತನು ಮರಣದ ಪರ್ಯಂತವಾದ ಹಿಂಸೆಗೊಳಗಾಗಿದ್ದು ಮಾತ್ರವಲ್ಲ, ಅದೇ ರೀತಿಯಲ್ಲಿ ಆತನ ಹೆಜ್ಜೆಜಾಡಿನಲ್ಲಿ ನಡೆದ ಎಲ್ಲಾ ಪ್ರಕಾಶ ದೂತರಗಳೂ ಆತನ ಹಿಂಸೆ ಮತ್ತು ಶ್ರಮೆಗಳಲ್ಲಿ ಪಾಲುದಾರರಾಗತಕ್ಕದ್ದು – ಯೋಹಾನ 16:3; ರೋಮಾ. 8:17,18.

ಯೂದನು ಬರೆದಿರುವಂತೆ **"ನೀವಾದರೋ ನಿಮಗಿರುವ ಅತಿಪರಿಶುದ್ಧವಾದ ಕ್ರಿಸ್ತ ನಂಬಿಕೆಯನ್ನು ಆಧಾರಮಾಡಿಕೊಂಡು ಭಕ್ತಿಯಲ್ಲಿ ಅಭಿವೃದ್ಧಿಯನ್ನು ಹೊಂದುತ್ತಾ ಪವಿತ್ರಾತ್ಮ ಪ್ರೇರಿತರಾಗಿ ಪ್ರಾರ್ಥನೆ ಮಾಡುತ್ತಾ ನಿತ್ಯಜೀವಕ್ಕಾಗಿ ನಮ್ಮ ಕರ್ತನಾದ ಯೇಸುಕ್ರಿಸ್ತನ ಕರುಣೆಯನ್ನು ಎದುರು ನೋಡುತ್ತಾ ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ"** (ಯೂದ 20) ಸಭೆಯ ಪ್ರಾಮುಖ್ಯವಾದ ನಿಯೋಗ ಅದರ ಸ್ವಂತ ಪ್ರಗತಿಯಾಗಿದ್ದಾಗ್ಯೂ, ಅದಕ್ಕೆ ಸದಾಕಾಲ ಎರಡನೆಯ ನಿಯೋಗವನ್ನು ಇದ್ದೇ ಇದೆ. ಅದೇನೆಂದರೆ ಸತ್ಯಕ್ಕೆ ಸಾಕ್ಷಿಹೇಳುವುದು, ಲೋಕವನ್ನು ಆಕ್ಷೇಪಿಸುವಂತೆ ಅದರ ಮೇಲೆ ಬೆಳಕು ಪ್ರಕಾಶಿಸುವಂತೆ ಮಾಡುವುದು. ಈ ಆಕ್ಷೇಪಣೆಯು ಮುಕ್ತವಾದ ಲೋಕದವರಿಗಿಂತ ನಾಮಾಂಕಿತ ಪ್ರಾಧ್ಯಾಪಕರುಗಳಿಗೆ ಬಹಳ ಅಗತ್ಯವಾಗಿದೆ. ಕರ್ತನ ದಿನಗಳಲ್ಲಿದ್ದಂತೆ ಆತನ ಬೆಳಕು ತಮ್ಮನ್ನು ದೇವಜನರು, ಪವಿತ್ರರೂ ಎಂದು ಹೇಳಿಕೊಳ್ಳುವವರಿಗೆ ಅವರಲ್ಲಿರುವ ಕತ್ತಲೆಯನ್ನು ಆಕ್ಷೇಪಿಸುತ್ತಾ ಅವರ ಮೇಲೆ ಚೆಲ್ಲಬೇಕಾಗಿತ್ತು. ನಮ್ಮ ಬೆಳಕು ಸದಾ ಕಾಲ ನಿರಂತರವಾಗಿ ಪ್ರಕಾಶಿಸುವ ಅಗತ್ಯತೆಯ ಬಗ್ಗೆ ಕರ್ತನು ನಮ್ಮನ್ನು ಎಚ್ಚರಿಸುವಂತೆ **"ನಿಮ್ಮಲ್ಲಿರುವ ಬೆಳಕೇ ಕತ್ತಲೆಯಾಗಿದ್ದರೆ, ಆ ಕತ್ತಲೆಯು ಎಷ್ಟೆನ್ನಬೇಕು?"** ಎಂದು ಕೇಳುತ್ತಾನೆ. ಇದು ಬೆಳಕು ಆರಿಹೋದ ವ್ಯಕ್ತಿಗತವಾದ ಆತ್ಮಕ್ಕೆ ಮಾತ್ರವಲ್ಲ, ಮಂಕು ಕವಿದ ಪ್ರಪಂಚಕ್ಕೂ ಅನ್ವಯಿಸುವುದಾಗಿದೆ. ಒಮ್ಮೆ ಪ್ರಕಾಶಹೊಂದಿ ಪವಿತ್ರಗೊಂಡ ಆತ್ಮವನ್ನು ಭ್ರಷ್ಟಗೊಳಿಸುವುದರಲ್ಲಿ ಸೈತಾನನು ವಿಜಯೋಲ್ಲಾಸ ಗೊಳ್ಳುತ್ತಾನೆ. ಇದಕ್ಕಿಂತ ಹೆಚ್ಚಾದ ವಿಜಯವು ಆತನಿಗೆ ಬೇಕಿಲ್ಲ. ಅಂಥಾಃ ದುಷ್ಟ ಆತ್ಮದ ಪ್ರಭಾವವು ದುಪ್ಪಟಕ್ಕೂ ಹೆಚ್ಚು – **"ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ"** (1 ಕೊರಿಂಥ 10:12). **"ದೀಪವನ್ನು ಹತ್ತಿಸಿ ಕೊಳಗದೊಳಗೆ ಇಡುವುದಿಲ್ಲ; ದೀಪಸ್ಥಂಭದ ಮೇಲೆ ಇಡುತ್ತಾರಷ್ಟೆ"** (ಮತ್ತಾಯ 5:15). ಕೊಳಗದೊಳಗೆ ಇಡುವ ದೀಪವು ಅಂಧಕಾರದತ್ತ ಇಡುವ ಹೆಜ್ಜೆಯಾಗಿದೆ.

## "ನೀವು ಕ್ರಿಸ್ತ ವಿರೋಧಿಯ ಆತ್ಮ, ದೇವರಾತ್ಮ ಇವುಗಳ ವ್ಯತ್ಯಾಸವನ್ನು ತಿಳಿದುಕೊಳ್ಳಿರಿ"

(1 ಯೋಹಾನ 4:2,3; 2 ಯೋಹಾನ 7 ಇವುಗಳನ್ನು ನೋಡಿರಿ)

## Hence know ye The Spirit of God from The Spirit of AntiChrist

- 1 John 4:2,3; 2 John

**"ಪ್ರೇರಿಸುವಂಥವನು ದೇವರ ಆತ್ಮನೇ ಎಂದು ತಿಳಿದುಕೊಳ್ಳುವುದಕ್ಕೆ ಲಕ್ಷಣವೇನೆಂದರೆ – ಮನುಷ್ಯನಾಗಿ ಬಂದ ಯೇಸುಕ್ರಿಸ್ತನನ್ನು ಒಪ್ಪಿಕೊಳ್ಳುವ ಆತ್ಮವು ದೇವರಿಂದ ಪ್ರೇರಿತವಾದುದು, ಯೇಸುವನ್ನು ಒಪ್ಪದೇ ಇರುವ ಆತ್ಮವು ದೇವರಿಂದ ಪ್ರೇರಿತವಾದುದಲ್ಲ. ಅದು ಕ್ರಿಸ್ತವಿರೋಧಿಯ ಆತ್ಮವಾಗಿದೆ"** – 1 ಯೋಹಾನ 4:2–3.

ಅಪೋಸ್ತಲನು ಇಲ್ಲಿ ಒಂದು ವ್ಯಕ್ತಿಯನ್ನು ಸೂಚಿಸದೆ ಒಂದು ಪ್ರಭಾವವನ್ನು, ಸಿದ್ಧಾಂತವನ್ನು ಅಥವಾ ಬೋಧನೆಯನ್ನು ಸೂಚಿಸುತ್ತಿದ್ದಾನೆ ಎಂಬುದು ಯಾವುದೇ ಬುದ್ಧಿವಂತ ಮನಸ್ಸಿಗೆ ಬಹಳ ಸರಳವಾಗಿ ಗೋಚರವಾಗುತ್ತದೆ. ವಚನ 1 ಮತ್ತು 3ರ ಸನ್ನಿವೇಶವು ಯಾವುದೇ ಸಂಶಯವಿಲ್ಲದೆ ಅಪೋಸ್ತಲನು ಇಲ್ಲಿ ಕರ್ತನ ಜನರು ಅವರಿಗೆ ಪ್ರಸ್ತುತಿಪಡಿಸುವ ಸಿದ್ಧಾಂತಗಳಲ್ಲಿ ಸತ್ಯವಾದವುಗಳನ್ನು ತಿಳಿದುಕೊಳ್ಳುವಂತೆ ಅವರು ಅವುಗಳು ಪವಿತ್ರವಾದವುಗಳೋ ಅಥವಾ ಕೆಟ್ಟವುಗಳೋ, ದೇವರಿಂದ ಬಂದವುಗಳೋ, ಕ್ರಿಸ್ತವಿರೋಧಿಯಿಂದ ಬಂದವುಗಳೋ, ಸತ್ಯದ ಆತ್ಮವೋ, ದುರಾತ್ಮವೋ ಎಂಬುದನ್ನು ಪರೀಕ್ಷಿಸಬೇಕು. ಪ್ರವಾದಿಗಳೂ, ಬೋಧಕರುಗಳೂ ಇವೆರಡನ್ನೂ ಪರಿಚಯಿಸಿರುತ್ತಾರೆ. ನಮ್ಮ ಕರ್ತನು ಮತ್ತು ಅಪೋಸ್ತಲರುಗಳು ಮತ್ತು ಅವರ ಹೆಜ್ಜೆಜಾಡಿನಲ್ಲಿ ನಡೆಯುವ ಇತರರು ಸತ್ಯದ ಬೀಜ ಅಥವಾ 'ಗೋಧಿ'ಯನ್ನು ಬಿತ್ತಿದ್ದಾರೆ ಮತ್ತು ಪ್ರತಿಷ್ಠೆಗೊಂಡ ನಂಬಿಗಸ್ಥರನ್ನು ನೂತನ ಜೀವಿತಕ್ಕೆ ಮತ್ತು ಆತ್ಮನ ಪವಿತ್ರತೆಗೆ ಪಡಕೊಂಡಿದ್ದಾರೆ. ಶತ್ರುವು ಮತ್ತು ಆತನ ಸೇವಕರುಗಳು ತಪ್ಪು ಬೋಧನೆಗಳ ಬೀಜವನ್ನು ಅಥವಾ ಹಣಜಿಯನ್ನು ಬಿತ್ತಿದ್ದಾರೆ. ಅದನ್ನು ಹೆಸರಿನ ಕ್ರೈಸ್ತ ಸಭೆ ತರಲಾಗಿದೆ ಅಥವಾ ಗೋಧಿ ಹೊಲದ ಅಪರಿಮಿತವಾದ "ಹಣಜಿ" – ಅವುಗಳಲ್ಲಿ ಪವಿತ್ರಾತ್ಮ, ಕ್ರಿಸ್ತನ ಆತ್ಮವಿಲ್ಲ. ಆದರೆ ಸುಧಾರಿಸಿದ, ಸಕ್ಕರೆ ಲೇಪನವುಳ್ಳ ಈ ಲೋಕದ ಆತ್ಮವಿದ್ದಾನೆ. ಆದುದರಿಂದ ತನ್ನನ್ನು ಬೋಧಕನೆಂದು, ಸತ್ಯದ ಸೇವಕನೆಂದು ಮತ್ತು ತಾನು ಪವಿತ್ರಾತ್ಮನನ್ನು ಹೊಂದಿಕೊಂಡಿದ್ದೇನೆಂದು ಹೇಳಿಕೊಳ್ಳುವ ಪ್ರತಿಯೊಬ್ಬನೂ ಸತ್ಯವನ್ನೇ ಬೋಧಿಸುತ್ತಾನೋ ಅಥವಾ ತಪ್ಪಾದ ಬೋಧನೆಯನ್ನೋ, ಅವುಗಳು ಸತ್ಯದ ಆತ್ಮನ ಅಥವಾ ದುರಾತ್ಮನ ಬೋಧನೆಗಳನ್ನೊಳಗೊಂಡಿವೆಯೋ ಎಂಬ

ಪರೀಕ್ಷೆಗೆ ಒಳಪಡಬೇಕಾಗಿದೆ. ಪ್ರತಿಯೊಬ್ಬರನ್ನು ಸತ್ಯವಾದ ಬೋಧಕ ಎಂದು ಸ್ವೀಕರಿಸುವುದಕ್ಕೂ ಅಥವಾ ಸುಳ್ಳುಬೋಧಕ ಎಂದು ನಿರ್ಣಯಿಸುವುದಕ್ಕೆ ದೇವರ ವಾಕ್ಯವೇ ನಿರ್ಧಿಷ್ಟ ಪ್ರಮಾಣವಾಗಬೇಕು. "ಯಾಕೆಂದರೆ ಅನೇಕ ಸುಳ್ಳು ಬೋಧಕರುಗಳು ಬಂದು ಹೋಗಿದ್ದಾರೆ."

ಅಪೋಸ್ತಲನು ಸತ್ಯವಾದ ಬೋಧಕರ ಮತ್ತು ಸುಳ್ಳಾದ ನಂಬಿಕೆಯ ಬಗ್ಗೆ, ಬೋಧಕರುಗಳ ಬಗ್ಗೆ ಒಂದು ಸಾಮಾನ್ಯವಾದ ಪರೀಕ್ಷೆಯನ್ನು ಸೂಚಿಸುತ್ತಾನೆ. – ಕ್ರಿಸ್ತನ ಪವಿತ್ರಾತ್ಮನು ಎಲ್ಲಾ ಸತ್ಯತೆಗೆ ನಡೆಸುತ್ತದೆ. ಆದರೆ ಕ್ರಿಸ್ತ ವಿರೋಧಿಯ ದುರಾತ್ಮವು ಅಸತ್ಯತೆಗೆ, ನಮ್ಮನ್ನು ನಡೆಸುವುದಾಗಿದೆ ಮತ್ತು ಇದು ಒಮ್ಮೆ ನೀಡಲ್ಪಟ್ಟ ನಂಬಿಕೆಯ ನಾಶನಕ್ಕೆ ನಡೆಸಿ ಕ್ರಿಸ್ತನು ನಮ್ಮನ್ನು ತನ್ನ ಅಮೂಲ್ಯ ರಕ್ತದಿಂದ ಕೊಂಡುಕೊಂಡದ್ದನ್ನೇ ನಿರಾಕರಿಸುವಂತೆ ಮಾಡಿಬಿಡುತ್ತದೆ (2 ಪೇತ್ರ 2:1 ನೋಡಿರಿ). ಈ ಪರೀಕ್ಷೆಯು ಮೆಸ್ಸೀಯನು ದೇಹಧಾರಿಯಾಗಿ ನಮ್ಮ ಮಧ್ಯೆ ಬಂದಿದ್ದನೋ ಇಲ್ಲವೋ ಎಂಬುದನ್ನು ದೃಢಪಡಿಸುವುದಾಗಿದೆ. ಇದು ಒಂದು ಸತ್ಯವಾದ ಪರೀಕ್ಷೆಯಾಗಿತ್ತು, ಈಗಲೂ ಆಗಿದೆ. – ಈಡುಬಲಿಯ ಪರೀಕ್ಷೆಯು ಅದರ ಒಂದು ರೂಪದಲ್ಲಿ ಹೇಳಲಾಗಿದೆ; ಇದನ್ನು ನಿರಾಕರಿಸುವ ಪ್ರತಿಯೊಂದು ಸಿದ್ಧಾಂತವೂ ಸತ್ಯಕ್ಕೆ ವಿರುದ್ಧವಾಗಿದೆ ಮತ್ತು ಕ್ರಿಸ್ತ ವಿರೋಧಿಯಾಗಿದೆ. ಅದನ್ನು ನಿರ್ಲಕ್ಷಿಸುವ ಪ್ರತಿಯೊಂದು ಸಿದ್ಧಾಂತವೂ ಕಡುತರವಾಗಿ ತಪ್ಪಾಗಿದೆ, ಅದಕ್ಕೆ ಯಾವುದೇ ರೀತಿಯಲ್ಲಿ ಒಳ್ಳೆಯದನ್ನು ಬೆರಿಕೆಮಾಡಿದ್ದರೂ ಅದು ದೇವರಿಂದ ಬಂದುದಲ್ಲ: ಅದು ಅಪಾಯಕಾರಿಯಾದದ್ದು. ಸರಿಯಾದ ದಿಕ್ಕಿನಲ್ಲಿ ದೇವರಿಂದ ಬಂದದ್ದೆಂದು ಅರಿಕೆಮಾಡುವ ಪ್ರತಿಯೊಂದು ಸಿದ್ಧಾಂತವೂ ಅತ್ಯವಶ್ಯಕವಾಗಿ ಸರಿಯಾದದ್ದು.

ಕರ್ತನಿಂದ ಹಾಗೂ ಅಪೋಸ್ತಲರಿಂದ ನೀಡಲ್ಪಟ್ಟ ನಿಜವಾದ ನಂಬಿಕೆಯ ಮೇಲೆ ವಿರೋಧಿಯು ಮೊದಲಿನಿಂದಲೇ ಎರಡು ದೃಷ್ಟಿಕೋನದಿಂದ ಆಕ್ರಮಣ ಮಾಡುತ್ತಲೇ ಬಂದಿದ್ದಾನೆ. ಇವೆರಡೂ ಆತನು ಮಾಂಸ ದೇಹಧಾರಿಯಾಗಿ ಈ ಲೋಕಕ್ಕೆ ಬಂದನು ಎಂಬುದನ್ನು ನಿರಾಕರಿಸುವುದಾಗಿವೆ.

(1) ಅನ್ಯಜನರ ವೇದಾಂತಗಳು (ಇವರ ವಿರುದ್ಧವಾಗಿ ಅಪೋಸ್ತಲನಾದ ಪೌಲನು 1 ತಿಮೋ. 6:20,21ರಲ್ಲಿ ಎಚ್ಚರಿಸಿದ್ದಾನೆ) ಯೇಸುವು ನಿಜವಾಗಿಯೂ ಒಬ್ಬ ದೊಡ್ಡ ಪ್ರವಾದಿ, ಶ್ರೇಷ್ಟ ಬೋಧಕ ಎಂದು ಹಕ್ಕಿನಿಂದ ಹೇಳುತ್ತಾರೆ ಮತ್ತು ಆತನನ್ನು ತಮ್ಮ ಸ್ವಂತ ತತ್ವಜ್ಞಾನಿಗಳ ವರ್ಗಕ್ಕೆ ಸೇರಿಸಿಕೊಳ್ಳುತ್ತಾರೆ. ಆದರೆ ಅವರು ಆತನು ದೇವರ ಮಗನಲ್ಲ, ಯೆಹೂದ್ಯರ ಮೆಸ್ಸೀಯನೂ ಅಲ್ಲ ಎಂಬುದನ್ನು ಇತರರಿಗಿಂತ ಹೆಚ್ಚಾಗಿ ಆಗ್ರಹಪಡಿಸುತ್ತಾರೆ. ಅಂಥಾ ಮೆಸ್ಸೀಯನ ನಿರೀಕ್ಷೆಗಳು ಮತ್ತು ಪ್ರವಾದನೆಗಳು ಯೆಹೂದ್ಯರು ತಾವು ದೇವರಾದುಕೊಂಡ ಜನರು ಎಂದು ಹೇಳಿಕೊಂಡು ತಾವು ಮಾತ್ರವೇ ದೇವರ ಕೃಪೆಗೆ ಪಾತ್ರರು ಎಂಬ ಜನಾಂಗೀಯ ಹೆಮ್ಮೆ ಮತ್ತು ಆಕಾಂಕ್ಷೆಯ ಪ್ರತೀಕವಾಗಿದೆ ಎಂದು ವಿಶ್ವಾಸದಿಂದ ಹೇಳುತ್ತಾರೆ. ಆದುದರಿಂದ ಅವರು ನಮ್ಮ ಕರ್ತನ ಪೂರ್ವ ಅಸ್ಥಿತ್ವವನ್ನು ನಿರಾಕರಿಸುತ್ತಾರೆ – ಆತನು ಮಾಂಸದೇಹಧಾರಿಯಾಗಿ ಬಂದನು ಬಂದವನು – ಆತನು ಪತನಗೊಂಡ ಮಾನವ ಜನಾಂಗದ ಒಂದು ಉಜ್ವಲ ಮಾದರಿ ಎಂದು ಒಪ್ಪಿಕೊಳ್ಳುವರಾದರೂ ಅದರ ಸದಸ್ಯನಿಗಿಂತ ಬೇರೆ ಏನಾದರೂ ಆಗಿದ್ದಾನೆ ಎಂಬುದನ್ನು ತಿರಸ್ಕರಿಸುತ್ತಾರೆ.

(2) ತನ್ನ ಮಾಮೂಲಿ ಪದ್ಧತಿಯಂತೆ ವಿರೋಧಿಯು ಒಂದು ತೀವ್ರತರವಾದ ತಪ್ಪಿನ ವಿರುದ್ಧವಾಗಿ ಮತ್ತೊಂದು ತೀವ್ರವಾದ ತಪ್ಪನ್ನು ಇಡುತ್ತಾ ಬರುತ್ತಾನೆ. ಇವೆರಡರ ತಿಕ್ಕಾಟದ ನಡುವೆ ಇರುವ ಸತ್ಯವು ಕಾಪಾಡಲ್ಪಡದೆ ಮರೆತುಹೋಗಬಹುದು. ಆದುದರಿಂದ ಆತನು ಈ ವಿಷಯದಲ್ಲಿ ಮತ್ತೊಂದು ಘೋರವಾದ ತಪ್ಪನ್ನು ಪ್ರಾರಂಭಿಸುತ್ತಾನೆ. ಅದೇನೆಂದರೆ, ಆತನು ಹೇಳುವ ಪ್ರಕಾರ ಮೆಸ್ಸೀಯನೆಂಬುವವನು ಒಬ್ಬ ವ್ಯಕ್ತಿಯೇ ಅಲ್ಲ, ಆತನು ತಂದೆಯಾದ ದೇವರೇ ಆಗಿದ್ದು ಕೆಲವು ಸಮಯದ ಮಟ್ಟಿಗೆ ತನ್ನೆಲ್ಲಾ ದೈವಿಕ ಶಕ್ತಿಯನ್ನು ಹಾಗೆಯೇ ಉಳಿಸಿಕೊಂಡು ಮಾಂಸಧಾರಿಯಂತೆ ನಟಿಸಿದನು. ತನ್ನ ಮಾಂಸ ಶರೀರವನ್ನು ತನ್ನ ಮಹಿಮಾಶರೀರವನ್ನು ಮುಚ್ಚುವಂತೆ ಅಥವಾ ಕಪಟವೇಷದಂತೆ ಉಪಯೋಗಿಸಿದನು. ಮತ್ತು ತನ್ನ ದೇಹವನ್ನು ಅಳುವುದಕ್ಕೂ, ಹಸಿವೆ ಬಾಯಾರಿಕೆಗಳನ್ನು ಮತ್ತು ಮರಣವನ್ನೂ ಅನುಭವಿಸುವುದಕ್ಕೂ ಅನುಮತಿಸಿದನು ಎಂಬುದು. ಈ ದೃಷ್ಟಿಕೋನವು ಮೆಸ್ಸೀಯನು ಮಾಂಸದೇಹವುಳ್ಳವನಾಗಿ ಬಂದವನು – ಆತನು **"ಆತನು ನರವತಾರ ಎತ್ತಿ ನಮ್ಮ ಮಧ್ಯೆ ವಾಸಮಾಡಿದನು"** (ಯೋಹಾನ 1:14) ಎಂಬ ಮಾತನ್ನೂ ನಿರಾಕರಿಸುವುದಾಗಿದೆ.

ನಾವು ನಮ್ಮನ್ನು ನೋಡಿಕೊಳ್ಳುವಾಗ, ಕ್ರೈಸ್ತರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸತ್ಯದ ಆತ್ಮಕ್ಕೆ ವಿರುದ್ಧವಾದ, ಕ್ರಿಸ್ತ ವಿರೋಧಿಯ ಈ ತಪ್ಪು ಸಿದ್ಧಾಂತದಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಹೊಂದಿರುತ್ತಾರೆ ಎಂಬುದನ್ನು ನೋಡಿ ನಮಗೆ ಆಶ್ಚರ್ಯವಾಗುತ್ತದೆ. ಉಳಿದವರಿಗೆ ಸಾಮಾನ್ಯವಾಗಿ ಬಹಳ ಗೊಂದಲವಾಗಿದೆ, ದಿಗ್ಭ್ರಮೆಯುಂಟಾಗಿದೆ. ಈ ವಿಷಯದಲ್ಲಿ ಸ್ಪಷ್ಟವಾದ ಸತ್ಯವನ್ನು ನೋಡಲಾರದ ವರಾಗಿದ್ದಾರೆ. ಈ ರೀತಿಯಲ್ಲಿ ಅವರು ಆತನ 'ಈಡುಬಲಿ'ಯಲ್ಲಿ ದೃಢತೆ ಇಲ್ಲದವರಾಗಿದ್ದಾರೆ. ಅವರೆಲ್ಲರೂ 'ವಾಕ್ಯವು(ಲೋಗೋಸ್) ಮಾಂಸ ಶರೀರವುಳ್ಳದ್ದಾಯಿತು', 'ಮಾನವನಾದ ಯೇಸು ಕ್ರಿಸ್ತನಾದನು' 'ಈಡುಬಲಿಯಾದರು (ತಕ್ಕ ಬೆಲೆ)' ಎಂದು ನೋಡುವಲ್ಲಿ ವಿಫಲರಾಗುತ್ತಾರೆ. ಯಾಕೆಂದರೆ ಅವರು

ಯೇಸುವನ್ನು ಈ ಲೋಕದ ತಂದೆಯಿಂದ ಶರೀರವನ್ನು ಪಡಕೊಂಡ ಒಬ್ಬ ಅಸಮರ್ಪಕನಾದ ವ್ಯಕ್ತಿಯಂತೆ ನೋಡುತ್ತಾರೆ. ಈ ರೀತಿಯಲ್ಲಿ ಅಪೋಸ್ತಲನ ಮೂಲಕವಾಗಿ ಪವಿತ್ರಾತ್ಮನು ಸಿದ್ಧಪಡಿಸಿದ ಸರಳವಾದ ಪರೀಕ್ಷೆಯು ಇನ್ನೂ ಸಹಾ ಸಿದ್ಧಾಂತಗಳ ಪರೀಕ್ಷೆಯಾಗಿಯೇ ಇದೆ – ಅದು ದೇವರದ್ದಾಗಿರಬಹುದು ಮತ್ತು ಪವಿತ್ರಾತ್ಮನಾಗಿರಬಹುದು, ಸೈತಾನ ಮತ್ತು ಕ್ರಿಸ್ತ ವಿರೋಧಿಯದ್ದಾಗಿರಬಹುದು.

ನಾವು ಈ ವಾಕ್ಯಭಾಗವನ್ನು ಪರಿಗಣಿಸುವಾಗ, ಸತ್ಯವೇದ ಸಾಮಾನ್ಯ ಭಾಷಾಂತರದ ಬಗ್ಗೆ ಅದು ನ್ಯಾಯಸಮ್ಮತವಾಗಿಲ್ಲವೆಂಬ ಆಕ್ಷೇಪಣೆಯನ್ನು ಗಮನಿಸುತ್ತೇವೆ – ಭಾಷಾಂತರವು ಉತ್ತಮವಾಗಿದೆ. ಆದರೆ ಪದವಿನ್ಯಾಸ ಸಂಬಂಧವಾಗಿ ಗ್ರೀಕ್ ವ್ಯಾಕರಣದ ಬಗ್ಗೆ ಸಾಕಷ್ಟು ಜ್ಞಾನವಿಲ್ಲದ ವಿಮರ್ಶಕನಲ್ಲಿ ದೋಷವಿದ್ದು ಆತನು ಈ ರೀತಿಯಾಗಿ ವಿಮರ್ಶಿಸಲು ಪ್ರಯತ್ನಿಸುತ್ತಾನೆ:–

1) ಈ ಎರಡೂ ವಾಕ್ಯಗಳಲ್ಲಿರುವ ಗ್ರೀಕ್ ಪದವನ್ನು 'has come'ಎಂಬುದಾಗಿ ತರ್ಜುಮೆ ಮಾಡಲಾಗಿದ್ದು ಇದು 'coming' ಎಂಬುದನ್ನು ಸೂಚಿಸುವುದಾಗಿದೆ.

2) ಅಪೋಸ್ತಲನ ಮಾತುಗಳ ಈ ಬದಲಾವಣೆಯೊಂದಿಗೆ ಕ್ರಿಸ್ತನ ಎರಡನೆ ಬರೋಣವು ಮಾಂಸದೇಹಧಾರಿಯ ರೂಪದಲ್ಲಿರುತ್ತದೆ ಎಂಬುವ ಯಾವುದೇ ಬೋಧನೆಯು ಕ್ರಿಸ್ತ ವಿರೋಧಿ ಆತ್ಮನದ್ದಾಗಿದೆ.

ನಾವು ಈ ಹೇಳಿಕೆಗಳಿಗೆ ಹೀಗೆ ಉತ್ತರಿಸುತ್ತೇವೆ :

(1) Erchomai ಎಂಬ ಮೂಲ ಪದವು Eleluthota (1 ಯೋಹಾನ 4:2) ಮತ್ತು `Erchomenon' (2 ಯೋಹಾನ 7) ಇವುಗಳಿಂದ ಉತ್ಪತ್ತಿಯಾಗಿದೆ ಎಂಬುದು ಸತ್ಯ. ಇದು ಬರೋಣವನ್ನು ಸೂಚಿಸುವುದಾಗಿದೆ; ಆದರೆ ಈ ಬರೋಣವು ಹಿಂದಿನ ಅಥವಾ ಮುಂದಿನ ಘಟನೆಯೋ ಎಂಬುದು ವಚನದ ರಚನೆಯಿಂದ ನಿರ್ಧರಿಸಬೇಕಾಗುತ್ತದೆ. ನಾವು 'coming' ಎಂಬ ಇಂಗ್ಲಿಷ್ ಪದವನ್ನು ಹಿಂದಿನ ಮತ್ತು ಮುಂದಿನ ಸಂಗತಿಗಳಿಗೆ ಉಲ್ಲೇಖಿಸುತ್ತಾ "ನಮ್ಮ ಕರ್ತನ ಮೊದಲ ಬರೋಣದಲ್ಲಿನ ವಿಶ್ವಾಸವು ಕ್ರೈಸ್ತರಲ್ಲಿ ಸಾಮಾನ್ಯವಾಗಿದ್ದು, ಎರಡನೆಯ ಬರೋಣದ ಬಗ್ಗೆ ಹಾಗಿಲ್ಲ" ಎಂದು ಹೇಳಬಹುದು. ಈ ಸನ್ನಿವೇಶವು ಹಿಂದಿನ ಒಂದು ಘಟನೆಯನ್ನು ಉಲ್ಲೇಖಿಸುವುದಾಗಿದ್ದು ಈ ಎರಡೂ ಹೇಳಿಕೆಗಳೂ ನಿಶ್ಚಯವಾಗಿ ಒಂದೇ ವಿಷಯದ ಬಗ್ಗೆ ಹೇಳುವುದಾಗಿದೆ. "ಅನೇಕ ಮೋಸಗಾರರು ಹೊರಟು ಹೋಗಿದ್ದಾರೆ, ಅಥವಾ ಮುಂದಾಗಿ ಹೋದರು" ಎಂದು ಯಾವುದೇ ಪ್ರಾಯಶಃದಿಂದಾಚೆಗೂ ನಿಶ್ಚಯವಾಗಿ ಹೇಳಬಹುದಾಗಿದೆ.

(2) ಈ ವಾಕ್ಯಭಾಗವು ಮುಂಬರುವ ಘಟನೆಯನ್ನು ಸೂಚಿಸುವುದಾಗಿದೆ ಎಂದು ಹೇಳುವವರು ಈ ಹೇಳಿಕೆಯನ್ನು ಮುಂದಿಡುತ್ತಾರೆ – ನಮ್ಮ ಕರ್ತನು ಆತನು ಇನ್ನೂ ಮಾಂಸದೇಹಧಾರಿಯಾಗಿಯೇ ಇದ್ದಾನೆ, ದೈವಿಕ ಸ್ವಭಾವಕ್ಕೆ ಬದಲಾಗಲಿಲ್ಲ, ಆತನು ಮಾನವನಾಗಿಯೇ ಮುಂದುವರೆಯುವನೆಂದೂ, ಆತನು ಮಾಂಸದೇಹಧಾರಿಯಾಗಿಯೇ ಇದ್ದು ತನ್ನ ಶ್ರಮೆಯ ಕಲೆಗಳನ್ನು ನಿತ್ಯನಿರಂತರವಾಗಿ ಹೊಂದಿಯೇ ಇರುತ್ತಾನೆಂದು ಅವರು ಹೇಳುತ್ತಾರೆ. **"ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿದ್ದಾನೆ"** (ಫಿಲಿಪ್ಪಿ 2:9). **"ಕರ್ತನು ದೇವರಾತ್ಮನೇ"** (2 ಕೊರಿಂಥ 3:17) **"ಕ್ರಿಸ್ತನನ್ನು ಕೂಡ ನಾವು ಶರೀರ ಸಂಬಂಧವಾಗಿ ತಿಳಿದಿದ್ದರೂ ಇನ್ನು ಮುಂದೆ ಆತನನ್ನು ಹಾಗೆ ತಿಳಿದುಕೊಳ್ಳುವುದಿಲ್ಲ"** (2 ಕೊರಿಂಥ 5:16) ಇವೇ ಮುಂತಾದ ಅನೇಕ ದೇವರ ವಾಕ್ಯದ ವಚನಗಳನ್ನು ಅವರು ನಿರಾಕರಿಸುತ್ತಾರೆ ಅಥವಾ ನಿರ್ಲಕ್ಷಿಸುತ್ತಾರೆ. ಅವರ ವಿವೇಚನಾರಹಿತವಾದ ಹೇಳಿಕೆಗಳನ್ನು, ದೇವರ ವಾಕ್ಯದಲ್ಲಿಲ್ಲದ ಪರಿಸ್ಥಿತಿಯನ್ನು ಬೆಂಬಲಿಸುವಂತೆ ಯಾವುದಾದರೂ ದೇವರ ವಾಕ್ಯದ ವಚನವನ್ನು ಕಂಡುಕೊಳ್ಳುವ ಅವರ ಇಚ್ಛೆಯು ಈ ಪರಿಚ್ಛೇದಗಳ ವಿಷಯದಲ್ಲಿ ಅವರನ್ನು ಮೋಸಗೊಳಿಸುತ್ತದೆ. ನಿಜವಾಗಿಯೂ ಹೆಚ್ಚಿನ ಸಂಖ್ಯೆಯ ಕ್ರೈಸ್ತರು, ಮುಖ್ಯವಾಗಿ ಪರಿಶುದ್ಧ ಗ್ರಂಥಗಳ ಭಾಷಾಂತರ ಕಾರ್ಯಕ್ಕೆ ಸಂಬಂಧಪಟ್ಟವರು ಈ ತಪ್ಪಾದ ದೃಷ್ಟಿಕೋನವನ್ನು ಹೊಂದಿದ್ದಾರೆಂದು ನಾವು ಹೇಳಬಹುದು.

ಈ ವಾಕ್ಯಭಾಗದ ಬಗ್ಗೆ ವೇನೆಸ್‌ಬರ್ಗ್ ಕಾಲೇಜು (ಕುಂಬರ್ ಲ್ಯಾಂಡ್ ಪ್ರೆಸ್ಬಿಟೇರಿಯನ್) ಇಲ್ಲಿನ ಭಾಷೆಗಳ ಪ್ರಾಧ್ಯಾಪಕರಾದ ಪ್ರೊ॥ ಜೆ. ಆರ್. ರೈನ್‌ಹಾರ್ಟ್ ಎಂಬುವವರ ವಿಮರ್ಶೆಯನ್ನು ಉಲ್ಲೇಖಿಸುತ್ತಾ ನಾವು ನಮ್ಮ ಸ್ಥಿತಿಗೆ ಆಧಾರಕೊಡುತ್ತೇವೆ. 1 ಯೋಹಾನ 4:2 ಮತ್ತು 2 ಯೋಹಾನ 7 ರಲ್ಲಿನ ವಾಕ್ಯಭಾಗಗಳನ್ನು ಉಲ್ಲೇಖಿಸಿದ ನಂತರ ಪ್ರೊ॥ ಜೆ. ಆರ್. ರೈನ್‌ಹಾರ್ಟ್‌ರವರು ಹೀಗೆ ಹೇಳುತ್ತಾರೆ :

(1) "ಈ ಮೇಲಿನ ಹೇಳಿಕೆಗಳು ವಿಲ್ಸನ್‌ರವರ ಪ್ರಕಾರ ಖಡಾಖಂಡಿತವಾದ ನಾಡುಭಾಷೆಯಿಂದ ಬಂದವುಗಳಾಗಿದ್ದು ಗ್ರೀಕ್ ಮೂಲದ ನೂತನ ಒಡಂಬಡಿಕೆಯ ಸಾರಾಂಶವಾಗಿದೆ. Eleluthota ಎಂಬ ಪದವು ಕರ್ಮಪದವೂ, ಏಕ ವಚನದ ಪುಲ್ಲಿಂಗ ಪದವೂ ಆಗಿದ್ದು Erchomai ಎಂಬ ಕ್ರೀಯಾಪದದ ದ್ವಿತೀಯ ಸಂಪೂರ್ಣ ಕೃದ್ವಾಚಕ (ಗುಣವಾಚಕ ಮತ್ತು ಕ್ರೀಯಾಪದಗಳೆರಡರ ಸ್ವಭಾವವುಳ್ಳದ್ದು) ಪದವಾಗಿದೆ. ಇದು ಪರೋಕ್ಷವಾದ ಪ್ರವಚನದಲ್ಲಿ ಸಾಮಾನ್ಯವಾದ ಗ್ರೀಕ್ ಪದವಿನ್ಯಾಸದ ಪ್ರಕಾರ ಮಿತಿಯುಳ್ಳ, ಸಮರ್ಪಕವಾದ ಕಾಲದಲ್ಲಿ homolegei ಎಂಬ ಪದದೊಂದಿಗೆ ನಿಲ್ಲುತ್ತದೆ –

Goodwin's Greek grammar 1588,1288. (ಗುಡ್‌ವಿನ್ಸ್‌ರವರ ಗ್ರೀಕ್ ವ್ಯಾಕರಣದ ಪ್ರಕಾರ).

"ಈ ಕಾರಣದಿಂದ, ಮೇಲೆ ಹೇಳಿರುವ ಮೊದಲನೆಯ ಉಲ್ಲೇಖನದ ಸಾಮಾನ್ಯ ಭಾಷಾಂತರವು ಅವಶ್ಯವಾಗಿ ಸರಿಯಾಗಿಯೇ ಇದೆ – **"ಮನುಷ್ಯನಾಗಿ ಬಂದ ಯೇಸುಕ್ರಿಸ್ತನನ್ನು ಒಪ್ಪಿಕೊಳ್ಳುವ ಆತ್ಮವು ದೇವರಿಂದ ಪ್ರೇರಿತವಾದದ್ದು"** – 1 ಯೋಹಾನ 4:2.

(2) ಎರಡನೆಯ ಉಲ್ಲೇಖದಲ್ಲಿರುವ erchomenon ಎಂಬ ಪದವು ಏಕ ವಚನದ, ಪುಲ್ಲಿಂಗವೂ ಆದ ಕರ್ಮಪದವಾಗಿದೆ ಮತ್ತು Erchomai ಎಂಬ ಕ್ರಿಯಾಪದದ ಪ್ರಸ್ತುತ ಕೃದ್ವಾಚಕ (ಗುಣವಾಚಕ ಮತ್ತು ಕ್ರೀಯಾಪದಗಳೆರಡರ ಸ್ವಭಾವವುಳ್ಳದ್ದು)ವಾಗಿದೆ. ಮತ್ತು ಪದವಿನ್ಯಾಸದ ಬಗ್ಗೆ ಮೇಲಿನ ನಿಯಮಗಳು ಇದಕ್ಕೂ ಅನ್ವಯವಾಗುತ್ತವೆ. Homologountes ಮೂಲಕ eiselthon ಎಂಬ ಪದಕ್ಕೆ ಇದರ ಸಂಬಂಧವು ಹಾಗೂ ಸನ್ನಿವೇಶವು ಇದರ ತರ್ಜುಮೆಯನ್ನು ಭೂತ ಕಾಲವೆಂಬುದಾಗಿ ನಿರ್ಣಯಿಸುತ್ತದೆ – (Ibid 1289).

ಆದುದರಿಂದ, ಎರಡನೆಯ ಉಲ್ಲೇಖದ ಭಾಷಾಂತರವನ್ನು ಸೂಕ್ತವಾಗಿ ಈ ರೀತಿಯಾಗಿ ನೀಡಬಹುದಾಗಿದೆ : "ಯೇಸು ಕ್ರಿಸ್ತನು ದೇಹಧರಿಸಿಕೊಂಡು ಬರಲಿಲ್ಲವೆಂದು ಹೇಳುವ ಅನೇಕ ಮೋಸಗಾರರು ಈ ಲೋಕದ ಮುಂದೆ ಹೋಗಿದ್ದಾರೆ".

ಯಾವುದೇ ಗ್ರೀಕ್ ವಿಧ್ವಾಂಸನು ಈ ಭಾಷಾಂತರದ ವಿವರಣೆಯನ್ನು ವಿರೋಧಿಸಲಾರನು ಎಂದು ನಂಬುತ್ತೇವೆ. ಆತನು ನಮ್ಮ ಕರ್ತನು ತನ್ನ ಎರಡನೆಯ ಬರಬೇಕಾದಲ್ಲಿ ಶರೀರಧಾರಿಯಾಗಿ ಎಂದು ಸಾಧಿಸಿದರೂ ಆತನ ಊಹೆಗೆ ತಕ್ಕಂತೆ ಅನುಕೂಲಕರವಾಗಿ ವಾಕ್ಯವನ್ನು ಜೋಡಿಸುತ್ತೇನೆ.

ಕಡೆಯದಾಗಿ, ಕ್ರಿಸ್ತನು ತನ್ನ ಮೊದಲನೆಯ ಆಗಮನದಲ್ಲಿ ದೇಹಧರಿಸಿಕೊಂಡು ಬಂದನು ಎಂದು ಮಾಡುವ ಅರಿಕೆಯು ಆತನ ಈಡುಬಲಿಯಲ್ಲಿ ಯುಕ್ತವಾದ ನಂಬಿಕೆಗೆ ಅಗತ್ಯವಾಗಿದೆ, ಆ ಸತ್ಯದ ನಿರಾಕರಣೆಯೆಂದರೆ ಈಡುಬಲಿಯ ನಿರಾಕರಣೆಯೇ ಆಗಿದೆ (ಯಾಕೆಂದರೆ, ಬೇರೆರೀತಿಯಲ್ಲಿ ಆತನು ಮಾನವರಿಗಾಗಿ ಅನುರೂಪವಾದ ಕ್ರಯವನ್ನು ತೆರಲಾರನು) ಆದುದರಿಂದ, ಕ್ರಿಸ್ತನು ಆತನ ಪುನರುತ್ಥಾನದಿಂದಲೂ ಮನುಷ್ಯನಾಗಿಯೇ ಇದ್ದಾನೆ, ಆತನು ಮಾನವನಾಗಿಯೇ ಎರಡನೆಯ ಬಾರಿಗೂ ಬರುವವನಿದ್ದಾನೆ ಎಂದು ನಂಬುವವರೆಲ್ಲರೂ ಹಾಗೆ ಮಾಡುವುದರಿಂದ ಈಡುಬಲಿಯನ್ನು ನಿರಾಕರಿಸುವವ ರಾಗಿದ್ದಾರೆ – ಯಾಕೆಂದರೆ ನಮ್ಮ ಕರ್ತನು ಇನ್ನೂ ಮನುಷ್ಯನಾಗಿಯೇ ಇರುವುದಾದರೆ, ಆತನು ಒಂದೋ ತನ್ನ ಮಾನವತನವನ್ನು ಈಡುಬಲಿಯಾಗಿ ಬಿಟ್ಟುಕೊಡಲಿಲ್ಲ ಅಥವಾ ಕೇವಲ ಮೂರುದಿನಗಳ ಮಟ್ಟಿಗೆ ಅದನ್ನು ಬಿಟ್ಟುಕೊಟ್ಟು ನಂತರದಲ್ಲಿ ವಾಪಸ್ಸು ಪಡೆದಿದ್ದಾನೆ. ತನ್ನ ವಿಮೋಚನಾ ಬೆಲೆಯನ್ನು ವಾಪಸ್ಸು ಪಡೆಯುವುದರ ಮೂಲಕ ಆತನು ಕೊಳ್ಳುವಿಕೆಯನ್ನು ಭ್ರಷ್ಟಗೊಳಿಸಿದ್ದಾನೆ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಈ ಕೊಂಡುಕೊಳ್ಳುವಿಕೆಯು ಅಂತಿಮವಾಗಿದೆ; ನಮ್ಮ ಕರ್ತನು ತನ್ನ ಮಾನವತ್ವವನ್ನು ಎಂದೂ ಹಿಂದಕ್ಕೆ ಪಡೆಯಲಿಲ್ಲ. ಆತನನ್ನು ದೇವರು ಅತ್ಯುನ್ನತ ಸ್ಥಿತಿಗೆ ಏರಿಸಿ ಆತನಿಗೆ ಶ್ರೇಷ್ಟವಾದ ಹೆಸರನ್ನು, ಸ್ವಭಾವವನ್ನು ಮತ್ತು ಸ್ಥಾನವನ್ನು ನೀಡಿದ್ದಾನೆ. ದೇವದೂತರಿಗಿಂತಲೂ, ರಾಜ್ಯಗಳಿಗಿಂತಲೂ, ದೇವರನ್ನು ಹೊರತುಪಡಿಸಿ ಬೇರೆ ಎಲ್ಲಾ ಹೆಸರುಗಳಿಗಿಂತಲೂ ಶ್ರೇಷ್ಟವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆತನು ಇನ್ನು ಮುಂದೆ ಮನುಷ್ಯನಲ್ಲ, ಯಾವುದೇ ಅರ್ಥದಲ್ಲಿ ಆತನು ನಮ್ಮಂತೆ ಇರುವವನಲ್ಲ; ನಿಷ್ಠೆಯಿಂದಿರುವುದಾದಲ್ಲಿ ನಾವೂ ಸಹಾ ಬದಲಾಗುತ್ತೇವೆ ಆತನಂತೆಯೇ ಆಗುತ್ತೇವೆ ಮತ್ತು ಆತನಿರುವಂತೆಯೇ ಆತನನ್ನು ನೋಡುತ್ತೇವೆ – 1 ಯೋಹಾನ 3:2.

## ಆತನು ಸರ್ವಾಂಗದಲ್ಲಿಯೂ ಮನೋಹರನು

*ವಿಮೋಚಕನ ಹಣೆಯ ಮೇಲೆ*
*ಘನಗಾಂಭೀರ್ಯದ ಸೊಬಗು ರಾರಾಜಿಸುತ್ತದೆ;*
*ಆತನ ಶಿರವು ಪ್ರಜ್ವಲ ಮಹಿಮೆ ಕಿರೀಟದಿಂದ*
*ಶೋಭಿಸುತ್ತವೆ.*
*ಆತನ ತುಟಿಗಳು ಕೃಪೆಯನ್ನು ಸೂಸುತ್ತಿವೆ.*
*ಮನುಷ್ಯ ಪುತ್ರರಲ್ಲಿ ಯಾರೂ ಆತನಿಗೆ ಸರಿಸಮಾನರಲ್ಲ.*
*ಸಂದರರಲ್ಲಿ ಆತನು ಅತಿಸುಂದರನು.*
*ಪರಲೋಕದ ಪರಂಪರೆ ಆವರಿಸುವಂಥವನು.*
*ಆತನು ಮನುಷ್ಯರು ದುರವಸ್ಥೆಯಲ್ಲಿ ಮುಳುಗಿದ್ದನ್ನು*
*ನೋಡಿದನು.*
*ಅವರ ಬಿಡುಗಡೆಗಾಗಿ ಹಾರಿ ಬಂದನು.*
*ಆತನು ನಮಗಾಗಿ ಆ ಅವಮಾನಕರವಾದ ಶಿಲುಬೆಯನ್ನು*
*ಸಹಿಸಿಕೊಂಡನು,*
*ಹಾಗೂ ನಮ್ಮೆಲ್ಲರ ಬಾಧೆಯನ್ನು ಹೊತ್ತನು.*
*ದೇವರ ವಾಗ್ದಾನವು, ಅತ್ಯಂತ ಶ್ರೇಷ್ಠವಾದದು.*
*ಅದು ನಮ್ಮನ್ನು ಭದ್ರಪಡಿಸುತ್ತದೆ.*
*ಹೌದು, ಆ ಬಂಡೆಯ ಮೇಲೆ ನಮ್ಮ ನಂಬಿಕೆಯು ನೆಲಸಿ,*
*ಅಚಲವಾಗಿ ನಿಶ್ಚಿತಗೊಳಿಸುತ್ತದೆ.*
*ಸಮೃದ್ಧವಾದ ದೇವರ ಪ್ರೀತಿಯ ಆಳದಲ್ಲಿ*
*ಮಿತಿಯಿಲ್ಲದ ಕೃಪೆಯು ಸೇರಿದೆ.*
*ಪ್ರಿಯ ವಿಮೋಚಕನೆ, ನಾನು ನಿನ್ನವನು.*
*ಇದಕ್ಕೂ ಹೆಚ್ಚಾಗಿ ಏನೂ ಹೇಳಲಾರೆ.*

* * * * * *